SAPTHAGIRI(KANNADA)
SPIRITUAL ILLUSTRATED MONTHLY
Volume:02, Issue:5, Pages:56
December - 2022,Price Rs.20/-

ತಿರುಮಲ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಆಧ್ಯಾತ್ಮಿಕ ಸಚಿತ್ರ ಮಾಸಪತ್ರಿಕೆ

ಡಿಸೆಂಬರ್ 2022
ಬೆಲೆ ರೂ. 20/-



ಧನುರ್ಮಾಸ ಪ್ರಾರಂಭ
(17-12-2022)

**ಹೈದರಾಬಾದಿನಲ್ಲಿ 11-10-2022 ರಿಂದ 15-10-2022 ರ ವರೆಗೆ ನಡೆದ ಶ್ರೀವೆಂಕಟೇಶ್ವರ ಸ್ವಾಮಿಯವರ ವೈಭವೋತ್ಸವದ ದೃಶ್ಯಮಾಲಿಕೆ ಈ ಉತ್ಸವದಲ್ಲಿ ಪಾಲ್ಗೊಂಡ ತೆಲಂಗಾಣದ ರಾಜ್ಯಪಾಲರು ಗೌ॥ ಡಾ॥ ತಮಿಳಿಸೈ ಸೌಂದರರಾಜನ್, ತಿ.ತಿ.ದೇ. ಆಡಳಿತಮಂಡಳಿ ಅಧ್ಯಕ್ಷರು ಗೌ॥ ಶ್ರೀ ವೈ.ವಿ. ಸುಬ್ಬಾರೆಡ್ಡಿ ದಂಪತಿಗಳು ಪಾಲ್ಗೊಂಡರು.**












# ಭಗವದ್ಗೀತೆ



**ಅಹೋ ಬತ ಮಹತ್ಪಾಪಂ ಕರ್ತುಂ ವ್ಯವಸಿತಾ ವಯಮ್ ।**

**ಯದ್ರಾಜ್ಯ ಸುಖಲೋಭೇನ ಹಂತುಂ ಸ್ವಜನಮುದ್ಯತಾಃ॥**

(ಶ್ರೀಮದ್ಭಗವದ್ಗೀತೆ ಅಧ್ಯಾಯ - 1, ಶ್ಲೋಕ - 44)

**ರಾಜ್ಯದಿಂದ ಲಭಿಸುವ ಸುಖದ ಮೋಹದಿಂದ ನಮ್ಮವರನ್ನೆ ಕೊಲ್ಲಹೊರಟಿರುವ ನಾವು ಆಹಾ। ಎಂಥ ದೊಡ್ಡ ಪಾಪವನ್ನು ಮಾಡುವುದಕ್ಕೆ ಹೊರಟಿರುವೆವು.**

## ಏಳಯ್ಯ ಬೆಳಗಾಯಿತು

ಏಳು ನಾರಾಯಣ। ಏಳು ಲಕ್ಷ್ಮೀರಮಣ
ಏಳು ಶ್ರೀ ಗಿರಿಯೊಡೆಯ। ವೆಂಕಟೇಶಾ


ದಾಸರೆಲ್ಲರೂ ಬಂದು ಧೂಳಿದರ್ಶನಗೊಂಡು।
ಲೇಸಾಗಿ ತಾಳ - ದಂಡಿಗೆಯ ಪಿಡಿದು
ಕೇಶವನೆ, ನಿಮ್ಮ ಸಿರಿನಾಮವನೆ ಸ್ಮರಿಸುತಲಿ।
ವಾಸುದೇವನೆ ಉದಯದಲಿ ಪಾಡುತಿಹರು

ಕಾಸಿದ್ದ ಹಾಲುಗಳ ಕಾವಡಿಯ ತುಂಬಿಟ್ಟು
ಲೇಸಾಗಿ ಕೆನೆ - ಮೊಸರು ಬೆಣ್ಣೆಯನೆ ಮೆದ್ದು।
ಶೇಷಶಯನನೆ, ಏಳು ಸಮುದ್ರಮಥನದ ಮಾಡು
ದೇಶ ಕೆಂಪಾಯಿತೇಳಯ್ಯ ಹರಿಯೇ

ಅರಳು - ಮಲ್ಲಿಗೆ ಜಾಜಿ ಪರಿಮಳದ ಪುಷ್ಪಗಳ
ಸುರರು ತಂದಿಹರಯ್ಯ ಸುಜನರೊಡೆಯ
ಅರವಿಂದಲೋಚನೆ, ಕೋಳಿ ಕೂಗಿತು
ಕೇಳು ಪುರಂದರವಿಠಲನೇ ಬೆಳಗಾಯಿತು


- ಶ್ರೀ ಪುರಂದರ ದಾಸರು





(ಎಂಟನೆಯ ದಶಕ)

# ದಯಾ ಶತಕಮ್



- ಎನ್. ನರಸಿಂಹಾಚಾರ್ಯ

**ಅತಿವಿಧಿಶಿವೈರೈಶ್ವರ್ಯಾತ್ಮಾನುಭೂತಿ ರಸೈರ್ಜನಾನ್ ಅಹೃದಯಮಿಹೋಪಚ್ಛಂದ್ಯೈಷಾಮಸಂಗದಶಾರ್ಥಿನೀ।**
**ತೃಷಿತಜನತಾತೀರ್ಥಸ್ನಾನಕ್ರಮಕ್ಷಪಿತೈನಸಾಂ ವಿತರಸಿ ದಯೇ ವೀತಾತಂಕಾ ವೃಷಾದ್ರಿಪತೇಃ ಪದಮ್ ॥೭೫॥**

ಹಿಂದಿನ ಪದ್ಯದಲ್ಲಿ 'ಪ್ರಕಟಿತಬಹುಚ್ಛದ್ಮಾ ನಿಜಾಭಿಪ್ರೇತಂ ಪ್ರದಿಶಸಿ' - ಎಂದರೆ ಅನೇಕ ವ್ಯಾಜಗಳನ್ನು ಕಲ್ಪಿಸಿಕೊಂಡು ತನಗೆ ಅಭಿಮತವಾದ ಪುರುಷಾರ್ಥವನ್ನು ಕೊಡುವಳೆಂದು ಹೇಳಿರುವುದನ್ನೂ, ಇದಕ್ಕೂ ಹಿಂದಿನ ಪದ್ಯದಲ್ಲಿ ಏಣಿಯು ಕ್ರಮಕ್ರಮವಾಗಿ ಮೇಲೇರಿಸುವುದೆಂದು ಹೇಳಿರುವ ಅಂಶವನ್ನೂ ಈ ಪದ್ಯದಲ್ಲಿ ಪ್ರಕಾಶಪಡಿಸುತ್ತಾರೆ.

ಬಾಯಾರಿದವನು ತನ್ನ ಬಾಯಾರಿಕೆಯನ್ನು ಹೋಗಲಾಡಿಸಿಕೊಳ್ಳುವ ಉದ್ದೇಶದಿಂದ ಪುಣ್ಯತೀರ್ಥದಲ್ಲಿ ಸ್ನಾನಮಾಡಿದರೆ ಬಾಯಾರಿಕೆಯು ಹೋಗುವುದರೊಡನೆ ಅವನ ಪಾಪಗಳೆಲ್ಲವೂ ನಾಶವಾಗುವುವು. ಹಾಗೆಯೇ ಶ್ರೀನಿವಾಸನ ದಯೆಯನ್ನು ಅವಲಂಭಿಸಿ ಐಶ್ವರ್ಯ, ಕೈವಲ್ಯವೇ ಮೊದಲಾದ ಪುರುಷಾರ್ಥಗಳನ್ನು ಪಡೆಯುವಾಗ ಆ ಭಗವಂತನ ಸೇವೆಯು ಅವನಿಗೆ ಕ್ರಮವಾಗಿ ಈ ಐಶ್ವರ್ಯಾದಿಗಳಲ್ಲಿ ರುಚಿಯನ್ನು ತಪ್ಪಿಸಿ ಮೋಕ್ಷಪುರುಷಾರ್ಥದಲ್ಲಿ ಆಶೆಯನ್ನುಂಟುಮಾಡಿ ಅದಕ್ಕಾಗಿ ಮಾಡಬೇಕಾದ ಉಪಾಯದಲ್ಲಿ ಅನ್ವಯವನ್ನು ಕಲ್ಪಿಸಿ, ಮೋಕ್ಷವನ್ನೂ ಉಂಟುಮಾಡುವುದೆಂಬ ಶಾಸ್ತ್ರಾರ್ಥವು ಇಲ್ಲಿ ವಿವಕ್ಷಿತವಾದುದು.

ದಯಾದೇವಿಗೆ ಚೇತನನನ್ನು ಪೂರ್ಣವಾಗಿ ರಕ್ಷಿಸುವುದರಲ್ಲಿ ಅಂದರೆ - ಮೋಕ್ಷವನ್ನು ಕೊಡುವುದರಲ್ಲಿಯೇ ಅಭಿಪ್ರಾಯ. ಆದರೂ ಬಹುಕಾಲದಿಂದ ಸಂಸಾರದಲ್ಲಿ ಮುಳುಗಿರುವವರಿಗೆ ಅವರು ಬಯಸಿದ ಫಲಗಳನ್ನೇ (ಐಶ್ವರ್ಯ ಕೈವಲ್ಯಾದಿಗಳನ್ನೇ) ಮೊದಲು ಕೊಟ್ಟು (ತನಗೆ ಇಷ್ಟವಿಲ್ಲದಿದ್ದರೂ) ಅವರ ಇಷ್ಟವನ್ನೇ ಅನುಸರಿಸಿ, ಅನಂತರ ಅವರಿಗೇನೆ ಇಂತಹ ಪುರುಷಾರ್ಥಗಳಲ್ಲಿ ದೋಷಗಳು ಕಾಣುವಂತೆ ಮಾಡಿ ಕ್ರಮವಾಗಿ ಮೋಕ್ಷೇಚ್ಛೆಯನ್ನೂ ಉಪಾಯಾನ್ವಯವನ್ನೂ ಫಲವನ್ನೂ ಕೊಡುವಳು, ಹೀಗೆ ಉಪಾಯಾನ್ವಯಪೂರ್ವಕವಾಗಿ ಕೊಡುವುದರಿಂದಲೇ ಅವಳಿಗೆ ಪಕ್ಷಪಾತಾದಿ ದೋಷಗಳು ಏರ್ಪಡಲಾರವು. ಈ ಅಭಿಪ್ರಾಯವೇ 'ವೀತಾತಂಕಾ' ಎಂಬ ಪದದಿಂದ ಸ್ಪಷ್ಟವಾಗುವುದು. ಸಾಕ್ಷಾತ್ ಭಗವಂತನ ದಯೆಯು ಕೊಡುವ ಫಲವಾದುದುರಿಂದ ಐಶ್ವರ್ಯಕೈವಲ್ಯಾದಿಗಳು ಬ್ರಹ್ಮಾಂಡಸೃಷ್ಟಿಕರ್ತನಾದ ಚತುರ್ಮುಖ ಬ್ರಹ್ಮನ ಮತ್ತು ಸಂಹಾರಕರ್ತನಾದ ರುದ್ರನ ಐಶ್ವರ್ಯಾದಿಗಳಿಂತಲೂ ಅತ್ಯಂತ ಶ್ರೇಷ್ಠವಾದವೆಂಬುದನ್ನು 'ಅತಿವಿಧಿಶಿವೈಃ' ಎಂಬುವುದರಿಂದ ತೋರಿಸಿರುತ್ತಾರೆ.

ಕೈವಲ್ಯವೆಂಬ ಆತ್ಮಾನುಭವಾನಂದವು ಬ್ರಹ್ಮರುದ್ರಾದಿಗಳ ಆನಂದಕ್ಕಿಂತಲೂ ಮಿಗಿಲಾದುದೆಂಬುದರಲ್ಲಿ ಸಂದೇಹವಿಲ್ಲ. ಐಶ್ವರ್ಯ ವೆಂಬುದೂ ಕೂಡ ಬ್ರಹ್ಮ ರುದ್ರಾದಿಗಳ ಆನಂದಕ್ಕಿಂತಲೂ ಉತ್ತಮವಾದುದೆಂಬುದು ಪ್ರಮಾಣಸಂಮತವಾದುದೋ? ಎಂದು ಕೇಳ ಬಹುದು. ಅದಕ್ಕೆ ಹೀಗೆ ಸಮಾಧಾನವನ್ನು ಹೇಳುಬಹುದು. ಬ್ರಹ್ಮ ರುದ್ರಾದಿಗಳ ಆನಂದದಲ್ಲಿಯೂ ದುಃಖಸಂಬಂಧವುಂಟು . ಆಯಾಯ ಸಂದರ್ಭಗಳಲ್ಲಿ ಅವರು ಅನುಭವಿಸಿದ ತೊಂದರೆಗಳು ಪುರಾಣಗಳಲ್ಲಿ ಪ್ರಸಿದ್ಧವಾಗಿವೆ. ಹಾಗಿಲ್ಲದೆ ಉತ್ಕಟಪಾಪಾಂಶದ ಸಂಪರ್ಕವಿಲ್ಲದೆ ಸುಕೃಂತಾಂಶವೇ ತುಂಬಿರುವ ಭಗವದನುಗ್ರಹ ವಿಷಯಭೂತನಾದ ಒಬ್ಬ ಅಧಿಕಾರಿಗೆ ಬ್ರಹ್ಮರುದ್ರಾದಿಗಳಂತೆ ದುಃಖಮಿಶ್ರಿತವಲ್ಲದ ನಿರಂತರ ಸುಖರೂಪವಾದ ಐಶ್ವರ್ಯವೇ ಏರ್ಪಡುವುದಾದುರಿಂದ ಈ ಅನುಭವವು ಬ್ರಹ್ಮರುದ್ರಾದಿಗಳ ಅನುಭವಕ್ಕಿಂತಲೂ ಉತ್ತಮವಾದುದೆಂದು ಹೇಳಲು ಯಾವ ಪ್ರಮಾಣ ವಿರೋಧವೂ ಇಲ್ಲ.

ತಿರುಮಲೆ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಆಧ್ಯಾತ್ಮಿಕ ಸಚಿತ್ರ ಮಾಸ ಪತ್ರಿಕೆ

ಶ್ರೀ ಶುಭಕೃತ್ ನಾಮ ಸಂವತ್ಸರ ಮಾರ್ಗಶಿರ - ಪುಷ್ಯ ಮಾಸ ಸಂಚಿಕೆ

ಸಂಪುಟ : 02 ಡಿಸೆಂಬರ್ - 2022 ಸಂಚಿಕೆ : 05



ವೆಂಕಟಾದ್ರಿ ಸಮಂ ಸ್ಥಾನಂ ಬ್ರಹ್ಮಾಂಡೇ ನಾಸ್ತಿ ಕಿಂಚನ
ವೇಂಕಟೇಶ ಸಮೋದೇವ್ರೋ ನ ಭೂತೋ ನ ಭವಿಷ್ಯತಿ

**ಗೌರವ ಸಂಪಾದಕರು**
ಎ.ವಿ. ಧರ್ಮಾರೆಡ್ಡಿ , ಐ.ಡಿ.ಇ.ಎಸ್.
ಕಾರ್ಯನಿರ್ವಹಣಾಧಿಕಾರಿ,.(ಎಫ್.ಎ.ಸಿ.)
ತಿ.ತಿ.ದೇ.,ತಿರುಪತಿ.

**ಪ್ರಧಾನ-ಸಂಪಾದಕರು**
ಡಾ॥ಕೆ.ರಾಧಾರಮಣ, ಎಮ್.ಎ.ಎಮ್.ಫಿಲ್.ಪಿಎಚ್.ಡಿ.

**ಸಂಪಾದಕರು**
ಡಾ॥ ವಿ.ಜಿ.ಚೊಕ್ಕಲಿಂಗಂ, ಎಮ್.ಎ.ಪಿಎಚ್.ಡಿ.

**ಮುದ್ರಣ**
ಶ್ರೀ .ಪಿ. ರಾಮರಾಜು , ಎಮ್.ಎ.
ವಿಶೇಷಾಧಿಕಾರಿ,
ತಿ.ತಿ.ದೇ.,ಮುದ್ರಣಾಲಯ,ತಿರುಪತಿ.

**ಡಿ.ಟಿ.ಪಿ.**
ಪ್ರಧಾನ ಸಂಪಾದಕರ -ಕಾರ್ಯಾಲಯ
ತಿ.ತಿ.ದೇ.ತಿರುಪತಿ.

**ಛಾಯಗ್ರಹಣ:**
ಶ್ರೀ ಪಿ.ಎನ್.ಶೇಖರ್,
ಸಹಾಯ ಛಾಯಗ್ರಹಣ,ತಿ.ತಿ.ದೇ.
ಶ್ರೀ ಬಿ.ವೆಂಕಟರಮಣ,
ಸಹಾಯ ಛಾಯಗ್ರಹಣ ತಿ.ತಿ.ದೇ.

ಲೇಖನ / ಚಂದಾ ಮಿಕ್ಕ ವಿವರಗಳಿಗೆ
ಪ್ರಧಾನ ಸಂಪಾದಕರು
ತಿ.ತಿ.ದೇವಸ್ಥಾನಗಳು,
ಕೆ.ಟಿ.ರಸ್ತೆ. ತಿರುಪತಿ - 517 507

ಇತರ ವಿವರಗಳಿಗೆ
ಕಾರ್ಯಾಲಯ : 0877 - 2264543
: 0877 - 2264359
ಸಂಪಾದಕರು : 0877 - 2264360

## ವಿಷಯಸೂಚಿಕೆ


| | | |
|---|---|---|
| ಸಂಪಾದಕೀಯ | | 6 |
| ಭಗವದ್ಗೀತೆಯಲ್ಲಿ ಗಾಯಿತ್ರಿ ಮಂತ್ರಚಿಂತನೆ | -ವಿ. ನಾಗೇಂದ್ರ ಪ್ರಸಾದ್ | 7 |
| ಧನುರ್ಮಾಸದ ವಿಶೇಷತೆ | - ಡಾ॥ ಎ.ಕುಮುದ | 9 |
| ತೀರ್ಥ ಪ್ರಬಂಧ | - ಶ್ರೀಧರ ರಾಯಸಂ | 11 |
| ತ್ರಿಗುಣಾತೀತ ಅವಧೂತ ದತ್ತಾತ್ರೇಯ | -ಹನುಮಂತ ಮ. ದೇಶಕುಲಕರ್ಣಿ | 14 |
| ದ್ವೈತ ತಾರತಮ್ಯ - ಒಂದು ವಿಶ್ಲೇಷಣೆ | -ಡಾ॥ ರಾಮಚಂದ್ರ ದಾಸ್ ಸಿ.ಜೆ. | 17 |
| ರಾಶಿ ಫಲಗಳು | -ಬ್ರಹ್ಮಶ್ರೀ ಟಿ.ವಿ.ಕೆ.ಪೂರ್ಣಪ್ರಸಾದ್‌ಸಿದ್ಧಾಂತಿ | 19 |
| ಶಾಂತಿಗ್ರಾಮದ ವರದಯೋಗಾ- ಭೋಗ ನರಸಿಂಹ ಮತ್ತು ಕೇಶವ ದೇವಾಲಯ | - ಕೆಂಗೇರಿ ಚಕ್ರಪಾಣಿ | 20 |
| ಸ್ವಾಮಿ ಪುಷ್ಕರ ತೀರ ನಿಲಯ ನಮೋ | - ಡಾ॥ ಸುಭಾಸ ಕಾಖಂಡಕಿ | 22 |
| ಶ್ರೀವೆಂಕಟೇಶ್ವರ ಆಲಯ | - ದಿ॥ ಬಿ.ಎನ್. ಶ್ರೀನಿವಾಸನ್ | 23 |
| ಗೋದಾ ದೇವಿಯ ಅಪ್ರತಿಮ ಭಕ್ತಿ | - ಅಖಿಲ ಮಧು | 31 |
| ತಿರುಪ್ಪಾವೈ ಅಸದೃಶ್ಯ ಹಿರಿಮೆ | - ದಿ॥ ಎ. ಗೀತ ವೀರರಾಘವನ್ | 33 |
| ಗಾಯಿತ್ರಿ ಚಿಂತನ | - ಶ್ರೀಮತಿ. ರಾಧಾಪ್ರಸಾದ್ | 35 |
| ಆಳ್ವಾರುಗಳು ಕಂಡ ತಿರುವೇಂಗಡ | -ಎಂ.ಆರ್.ನರಸಿಂಹನ್ | 38 |
| ತಿರುಮಲೆ ಕಾಲಮಾನಾಚರಣೆಗಳು | -ಶ್ರೀಮತಿ | 40 |
| 108 ವೈಷ್ಣವ ದಿವ್ಯಕ್ಷೇತ್ರಗಳು - ತಿರುಕ್ಕಂಡಿಯೂರ್ | -ಸೂರ್ಯವಂಶಿ | 43 |
| ಸಂಸ್ಕೃತ ಕಲಿಯೋಣ | -ಮಹಾಮಹೋಪಾಧ್ಯಾಯ ಸಮುದ್ರಾಲ ಲಕ್ಷ್ಮಣಯ್ಯ | 46 |
| ನೀತಿ ಕಥೆ - ಬಂದವರು ಹೋಗುವುದು ಪ್ರಕೃತಿ ನಿಯಮ | -ಡಾ॥ ಪ್ರದೀಪ್ ಕುಮಾರ್ ಹೆಬ್ರಿ | 48 |
| ರಸಪ್ರಶ್ನೆಗಳು | - | 50 |
| ಚಿತ್ರಕಥೆ - ತಿರುಪ್ಪಾವೈ ಜೀಯರ್ | -ಶ್ರೀನಿವಾಸ ದೀಕ್ಷಿತರು | 52 |


ಮುಖಚಿತ್ರ - ಶ್ರೀ ಗೋದಾದೇವಿ ಅಲಂಕಾರದಲ್ಲಿ ಗೋವಿಂದನು - ತಿರುಮಲೆ
ಹಿಂಬದಿಚಿತ್ರ - ಪಾರ್ಥಸಾರಥಿ ಅಲಂಕಾರದಲ್ಲಿ ಶ್ರೀನಿವಾಸನು - ತಿರುಮಲೆ

24x7 ಕೆಲಸ ಮಾಡುವ ದೂರವಾಣಿ ಸಂಖ್ಯೆ
0877 - 2277777, 2233333
ಸಲಹೆ/ದೂರುಗಳಿಗೆ ಟೋಲ್ ಫ್ರೀ ಸಂಖ್ಯೆ :
1800-425-4141
ಸಲಹೆ/ಸೂಚನೆ/ದೂರುಗಳಿಗಾಗಿ
sapthagiri.helpdesk@tirumala.org

ಸಪ್ತಗಿರಿ ಮಾಸಪತ್ರಿಕೆಯನ್ನು ವೀಕ್ಷಕರು
www.tirumala.org
ಮೂಲಕ ಓದಬಹುದು.

| | |
|---|---|
| ಬಿಡಿ ಪ್ರತಿ | ರೂ. 20/- |
| ವಾರ್ಷಿಕ ಚಂದಾ | ರೂ. 240/- |
| ಆಜೀವ ಚಂದಾ (12 ವರ್ಷಗಳು) | ರೂ. 2400/- |
| ವಿದೇಶಿ ವಾರ್ಷಿಕ ಚಂದಾ | ರೂ. 1030/- |

ಸಪ್ತಗಿರಿಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿನ ಅಭಿಪ್ರಾಯಗಳು ಸಂಪಾದಕವರ್ಗದ, ಪತ್ರಿಕೆಯ, ಅಭಿಪ್ರಾಯಗಳೇ ಆಗಿರಬೇಕು ಎಂದಿಲ್ಲ. - ಸಂಪಾದಕ

## ಸಂಪಾದಕೀಯ

# ಈ ಮಾಸದಲ್ಲಿ ಬರುವಂತಹಾ ಅಪುರೂಪವಾದ ಮತ್ತು ಪುಣ್ಯಕರವಾದ ದಿನಗಳೆಂದರೇ ಗೀತಾಜಯಂತಿ ಹಾಗೂ ಧನುರ್ಮಾಸ

ಗೀತಾಜಯಂತಿಯನ್ನು ಏಕೆ ಆಚರಿಸುತ್ತೇವೆಂದು ಬಹುತೇಕರಿಗೆ ತಿಳಿದಿರುವ ವಿಷಯವೇ ಆಗಿದೆ. ಆ ಪುಣ್ಯಕರವಾದ ದಿನದಂದೇ ಶ್ರೀಕೃಷ್ಣನು, ಸಮರಾಂಗಣದಲ್ಲಿ ಹತಾಶನಾಗಿ ಕುಳಿತಿದ್ದ ಅರ್ಜುನನಿಗೆ "ಭಗವದ್ಗೀತೆಯನ್ನು " ಬೋಧಿಸಿ ಅವನ ಕರ್ತವ್ಯವನ್ನು ನೆನಪಿಸಿ, ಮನುಷ್ಯನ ಹುಟ್ಟು ಸಾವಿನ ಬಗೆಗೆ, ಅವನ ಪಾಪಪುಣ್ಯಗಳ ಬಗೆಗೆ ವಿಶದವಾಗಿ ವಿವರಿಸಿ, ಅವನನ್ನು ಯುದ್ಧ ಮಾಡುವಂತೆ ಹುರಿದುಂಬಿಸಿದ.

ಅದೇ ರೀತಿ ಅರ್ಜುನನು ಶ್ರೀಕೃಷ್ಣನ ಮಾತುಗಳನ್ನು ಶಿರಸಾವಹಿಸಿ, ಅವನಿಂದ ಭಗವದ್ಗೀತೆಯ ಉಪದೇಶವನ್ನು ಪಡೆದು, ಜಗತ್ತಿನಲ್ಲಿ ಮಿಥ್ಯಾಸತ್ಯಾಗಳನ್ನು ಅರಿತು, ತನ್ನ ಕರ್ತವ್ಯ ಪಾಲನೆಯಲ್ಲಿ ನಿರತನಾಗಿ, ಶ್ರೀ ಕೃಷ್ಣನ ಕೃಪೆಯಿಂದ ಅವನ ಸಹಾಯದಿಂದ ದಿಗ್ವಿಜಯವನ್ನು ಪಡೆದುಕೊಂಡು ಧರ್ಮವನ್ನು ಸಂಸ್ಥಾಪನೆ ಮಾಡಿದ.

ಇಂತಹಾ ಅದ್ಭುತವಾದ ಪುಣ್ಯಕಾಲವು ಶುಕ್ಲ ಏಕಾದಶಿಯೆಂದು ಸಂಭವಿಸಿತೆಂದು ಹಿರಿಯರು ಅರಿತು, ಆ ದಿನದಂದೇ ಗೀತಾಜಯಂತಿಯನ್ನು ಆಚರಿಸುತ್ತೇವೆ. ಈ ಮಹೋತ್ತಮವಾದ ದಿನವು ಇದೇ ಡಿಸೆಂಬರ್ ಮೂರರಂದು ಸಂಭವಿಸಿದ್ದು, ಜ್ಞಾನಭಂಡಾರವೇ ಆದ ಭಗವದ್ಗೀತೆಯನ್ನು ಉಪದೇಶಿಸಿದ ಗೀತಾಚಾರ್ಯನೆಂದೇ ಹೆಸರು ಪಡೆದಿರುವ ಶ್ರೀಕೃಷ್ಣಪರಮಾತ್ಮನನ್ನು ಪೂಜಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ. ತನ್ಮೂಲಕ ಶ್ರೀಕೃಷ್ಣನ ಉಪದೇಶವನ್ನು ನಾವು ಅರಿತು, ಸಮಾಜದಲ್ಲಿ ಉತ್ತಮವಾದ ವಾತಾವರಣವನ್ನು ಕಲ್ಪಿಸುವುದಕ್ಕೆ ಶ್ರಮವಹಿಸಬೇಕಾಗಿದೆ. ಇನ್ನು ಪ್ರತೀವರ್ಷ ಮಾರ್ಗಶಿರ ಮಾಸದಲ್ಲಿ ಒಂದು ತಿಂಗಳ ಕಾಲ ಜನವರಿಯ ಸಂಕ್ರಮಣದವರೆಗೂ ಇರುವ ಕಾಲವನ್ನು ಧನುರ್ಮಾಸ ಎನ್ನುತ್ತೇವೆ. ಈ ಧನುರ್ಮಾಸವು ಅತ್ಯಂತ ಪವಿತ್ರವಾದುದೆಂದು ಹಿರಿಯರು ನಂಬಿದ್ದಾರೆ. ಆ ಸಂಪ್ರದಾಯವನ್ನು ಇಂದಿಗೂ ನಾವು ಆಚರಿಸುವ ವಾಡಿಕೆ ಇದೆ. ಅದರಲ್ಲೂ ವಿಷ್ಣುದೇವಾಲಯಗಳಲ್ಲಿ ಈ ಧನುರ್ಮಾಸ ಅತ್ಯಂತ ಮನ್ನಣೆಯನ್ನು ಪಡೆದುಕೊಂಡಿದೆ.

ಈ ಧನುರ್ಮಾಸವನ್ನು ತಿರುಮಲೆಯ ಆಲಯದಲ್ಲೂ ವಿಶೇಷವಾಗಿ ಆಚರಿಸುವ ಸಂಪ್ರದಾಯವಿದೆ.

ಶ್ರೀಹರಿಗೆ ಪ್ರೀತಿಪಾತ್ರಳಾದ ಗೋದಾದೇವಿ ರಚಿಸಿರುವಂತಹಾ ತಿರುಪ್ಪಾವೈ ಅನ್ನು ದಿನಕ್ಕೊಂದು ಪಾಶುರದಂತೆ ಮೂವತ್ತು ದಿನಗಳ ಕಾಲ ಪಾರಾಯಣ ಮಾಡಿ, ಕೊನೆಗೆ ಗೋದಾದೇವಿ ಕಲ್ಯಾಣವನ್ನು ನೆರವೇರಿಸುತ್ತಾರೆ. ತಿರುಮಲೆಯಲ್ಲಿ ವೈಖಾನಸ ಆಗಮದ ಪೂಜೆಯ ವಿಧಾನವನ್ನು ಅನುಸರಿಸಿದರೂ, ಐದು ಶತಮಾನಗಳಿಂದ ಈ ಧನುರ್ಮಾಸದ ಪೂಜೆಯನ್ನು ನೆರವೇರಿಸುವ ಸಂಪ್ರದಾಯವು ಇದೆ. ಎಲ್ಲಾ ವೈಷ್ಣವ ಆಲಯಗಳಲ್ಲಿ ಸೂರ್ಯೋದಯಕ್ಕೆ ಮೊದಲೇ ದೇವರಿಗೆ ತಿರುಪ್ಪಾವೈನ ಮೂಲಕ ಸ್ತುತಿಸಿ ಮಹಾನೈವೇದ್ಯವನ್ನು ಮಾಡುವುದು, ಆ ಪ್ರಸಾದವನ್ನು ಸೂರ್ಯೋದಯಕ್ಕೆ ಮೊದಲೇ ಭುಜಿಸಿ ದಿನವಿಡೀ ಉಪಾವಾಸವಿರುವುದು ನಿಯಮ.

ತಿರುಮಲೆಯ ಆಲಯದಲ್ಲಿ ಈ ಧನುರ್ಮಾಸದ ಕಾರ್ಯಕ್ರಮಗಳಿಗೆ ವಿಶೇಷ ಆದ್ಯತೆ ಇದೆ. ವರ್ಷವೆಲ್ಲಾ ನಡೆಯುವ ಸುಪ್ರಭಾತ ಸೇವೆ ಈ ತಿಂಗಳು ಇರುವುದಿಲ್ಲ. ಆ ತಿಂಗಳೆಲ್ಲಾ ದೇವರಿಗೆ ಗೋದಾದೇವಿ ರಚಿಸಿರುವಂತಹಾ ತಿರುಪ್ಪಾವೈ ಅನ್ನು ಕೇಳಿಸುತ್ತಾರೆ. ಹಾಗೆಯೇ ದೇವರಿಗೆ ಬಿಲ್ವ ಪತ್ರೆಗಳಿಂದ ಪೂಜಿಸುತ್ತಾರೆ. ಹುಗ್ಗಿಯನ್ನು ನೈವೇದ್ಯ ಮಾಡುತ್ತಾರೆ.

ಇಂತಹಾ ಪವಿತ್ರವಾದ,ಪುಣ್ಯಕರವಾದ ತಿಂಗಳಲ್ಲಿ ಗೀತಾಚಾರ್ಯನನ್ನು ಧ್ಯಾನಿಸಿ,ಧನುರ್ಮಾಸದಲ್ಲಿ ಶ್ರೀಹರಿಯನ್ನು ಪೂಜಿಸಿ, ನಮ್ಮೆಲ್ಲರ ಮನೆಮನಗಳನ್ನು ಸಾನುಕೂಲ ದೃಕ್ಪಥದಿಂದ ತುಂಬಿಸಿಕೊಳ್ಳೋಣ. ಇದರ ಮೂಲಕ ಪ್ರಪಂಚದ ಸುಖಶಾಂತಿ ಆರೋಗ್ಯ ನೆಮ್ಮದಿಗಳಿಗಾಗಿ ಪ್ರಾರ್ಥಿಸೋಣ.

**ಗೋವಿಂದ .... ಗೋವಿಂದ.... ಗೋವಿಂದ**




# ಭಗವದ್ಗೀತೆಯಲ್ಲಿ ಗಾಯಿತ್ರಿ ಮಂತ್ರಚಿಂತನೆ


**ವಿ. ನಾಗೇಂದ್ರ ಪ್ರಸಾದ್**

98454 00816


ಭಗವದ್ಗೀತೆ ಜಗನ್ಮಾನ್ಯವಾದ ಅಮರ ಕೃತಿ. ಭಗವಂತನನ್ನು ಒಪ್ಪುವ ಎಲ್ಲರಿಗೂ ಅತ್ಯಂತ ಪ್ರೀತಿಯ ಗ್ರಂಥ, ಪ್ರಪಂಚದ ಶ್ರೇಷ್ಠ ಧರ್ಮ ಗ್ರಂಥಗಳಲ್ಲಿ ಗೀತೆ ಅಗ್ರಸ್ಥಾನ ಪಡೆದಿದೆ. ಭಾರತದಲ್ಲಂತೂ ಆಸ್ತಿಕರ ಜನರ ಮನ ಹಾಗೂ ಮನೆಗಳ ನಂದಾದೀಪ. ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಚಿಂತಕರಿಂದ ಮಾನ್ಯವಾದಂತಹ ಕೃತಿ. ಪಾಶ್ಚಾತ್ಯ ಬರಹಗಾರರಾದ ಆಲ್ಡಿಯಸ್ ಹಲ್ಲಿ ಭಗವದ್ಗೀತೆಯ ಬಗ್ಗೆ ಅಭಿಮಾನದಿಂದ ಹೇಳುವ ಮಾತು “ಭಗವದ್ಗೀತೆ ನಾನು ಕಂಡಿರುವ ಧಾರ್ಮಿಕ ಗ್ರಂಥಗಳಲ್ಲಿ ಅತ್ಯಂತ ಶ್ರೇಷ್ಠವಾದದ್ದು, ನಿಖರವಾದ, ಸ್ಪಷ್ಟವಾದ ವೇದಾಂತ ವಾಕ್ಯಗಳಿಂದ ಕೂಡಿದ, ಅತ್ಯಂತ ಸರಳ ಹಾಗೂ ಸುಂದರವಾದ ಕೃಷ್ಣನ ಮಾತುಗಳು, ಮಾನವ ಜನಾಂಗಕ್ಕೆ ಕೃಷ್ಣ ನೀಡಿದ ಅನರ್ಘ್ಯವಾದ ಕೊಡುಗೆ. ಭಗವದ್ಗೀತೆ ಕೇವಲ ಭಾರತಕ್ಕೆ ಸೀಮಿತವಾಗಿರದೆ ಜಗತ್ತಿನ ಎಲ್ಲ ಜನಾಂಗದವರಿಗೂ ಇದೂ ಬಹಳ ಉಪಯುಕ್ತವಾಗಿದೆ (“ಸೇಕ್ರೆಡ್ ಜ್ಯೂವೆಲ್ಸ್ ಆಫ್ ಯೋಗ” ಎಂಬ ಅವರ ಗ್ರಂಥದಲ್ಲಿ ಬರೆದ ವಾಕ್ಯಗಳು).

ಭಗವದ್ಗೀತೆ ರಹಸ್ಯ ವಿದ್ಯೆಯೆಂದು ಕೃಷ್ಣನೆ ಸ್ವಯಂ ಹೇಳಿದ್ದಾನೆ. “ಇತಿ ಗುಹ್ಯತಮಂ ಶಾಸ್ತ್ರಮಿದಮುಕ್ತಂ ಮಯಾ ಅನಘ” (15/20). ಭಗವದ್ಗೀತೆ ಉಪನಿಷತ್ತಿನ ವಾಕ್ಯಗಳು ಎಂಬುದನ್ನು ಗೀತೆಯ ಪ್ರತಿ ಅಧ್ಯಾಯದ ಕೊನೆಯಲ್ಲಿ “ಗೀತಾಸು ಉಪನಿಷತ್ಸು” ಎಂದು ಧೃಢೀಕರಿಸಲಾಗಿದೆ. ಪದ್ಮಪುರಾಣವೂ ಇದನ್ನು ಪುಷ್ಟೀಕರಿಸುತ್ತದೆ “ಸರ್ವೋಪನಿಷದೋ ಗಾವೋ ದೋಗ್ಧಾ ಗೋಪಾಲ ನಂದನಃ ಪಾರ್ಥೋ ವತ್ಸಃ ಸುಧೀರ್ಭೋಕ್ತಾ ದುಗ್ಧಂ ಗೀತಾಮೃತಂ ಮಹತ್”. ಗಾಯಿತ್ರಿ ಮಂತ್ರದ ಅರ್ಥವನ್ನು ಕೃಷ್ಣ ಗೀತೆಯ ಉದ್ದಗಲಕ್ಕೂ ಕೆಲವಡೆ ಕಂಠತಃ ಇನ್ನು ಕೆಲವಡೆ ಸೂಚ್ಯವಾಗಿ ಹೇಳಿದ್ದಾನೆ. ಭಗವದ್ಗೀತೆಗೆ ಜಗದ್ಗುರುಗಳಾದ ಶ್ರೀಮಧ್ವಾಚಾರ್ಯರು ಗೀತಾಭಾಷ್ಯ ಹಾಗೂ ತಾತ್ಪರ್ಯ ನಿರ್ಣಯ ರಚಿಸಿದ್ದಾರೆ. ಅವರ ಪರಂಪರೆಯಲ್ಲಿ ಬಂದಂತಹ ಜ್ಞಾನಿವರೇಣ್ಯರಾದ ಟೀಕಾಕೃತ್ಪಾದರು,ರಾಘವೇಂದ್ರ ಗುರುಸಾರ್ವಭೌಮರೇ ಮೊದಲಾದ ಜ್ಞಾನಿಗಳು ಪ್ರಮೇಯ ದೀಪಿಕಾ ಹಾಗೂ ಗೀತಾವಿವೃತ್ತಿಯೇ ಮೊದಲಾದ ಗ್ರಂಥಗಳಲ್ಲಿ ಆಚಾರ್ಯರ ಅಭಿಪ್ರಾಯವನ್ನು ಸಂಗ್ರಹಿಸಿದ್ದಾರೆ. ಈ ಗ್ರಂಥಗಳನ್ನು ಉಪಜೀವಿಸಿಕೊಂಡು ನನ್ನ ಮಂದಬುದ್ಧಿಗೆ ಎಟುಕುವಷ್ಟು ಸಂಗ್ರಹ ಕಾರ್ಯವನ್ನು ಮಾಡುವ ಸಾಹಸ ಮಾಡುತ್ತಿದ್ದೇನೆ.

## ಗಾಯಿತ್ರಿಮಂತ್ರದ ಮಹತ್ವ

ಆ ಇತಿ ಬ್ರಹ್ಮ, ಆಕಾರದಿಂದ ವಾಚ್ಯನಾದವನು ಬ್ರಹ್ಮ, ಅಕಾರದ ವಿಸ್ತಾರವೇ ಸಕಲ ವೇದ ವಾಙ್ಮಯಗಳು, ಮಹೈತರೇಯೋಪನಿಷತ್ತಿನ ಎರಡನೆ ಪ್ರಘಟ್ಟಕದ ಮೂರನೇ ಅಧ್ಯಾಯದ ಆರನೆ ಋಕ್ಕಿಗೆ ಶ್ರೀಮಧ್ವಾಚಾರ್ಯರು ಭಾಷ್ಯವನ್ನು ಬರೆಯಬೇಕಾದರೆ ಈ ವಿಷಯವನ್ನು ಹೇಳುತ್ತಾರೆ. (ತಸ್ಮಾದಕಾರ ಏವಾಯಂ ಸರ್ವವಾಗಾತ್ಮಕಃ ಶ್ರುತಃ - ಬ್ರಹ್ಮಸಾರ) ಅಕಾರದ ವಿಸ್ತಾರವೇ ಓಂಕಾರ, ಓಂಕಾರದ ವಿಸ್ತಾರವೇ ವ್ಯಾಹೃತಿ, ವ್ಯಾಹೃತಿಯ ವಿಸ್ತಾರವೇ ಗಾಯಿತ್ರಿ, ಗಾಯಿತ್ರಿಯ ವಿಸ್ತಾರವೇ ಪುರುಷ ಸೂಕ್ತ, ಪುರುಷಸೂಕ್ತದ ವಿಸ್ತಾರವೇ ವೇದಗಳು ಉಪನಿಷತ್ತುಗಳು.ಇದನ್ನು ಅರಿತಾಗ ನಮಗೆ ಗಾಯಿತ್ರಿ ಏಕೆ ವೇದಗಳಿಗೆ ತಾಯಿಯಿದ್ದಂತೆ (ವೇದ ಮಾತಾತು ಗಾಯಿತ್ರಿ)ಎಂಬುದು ಸ್ಫುಟವಾಗುತ್ತದೆ. ಗಾಯಿತ್ರಿ ಮಂತ್ರ ಪ್ರತಿಯೊಬ್ಬರಿಗೂ ರಕ್ಷಾಕವಚವಿದ್ದಂತೆ.ಯಾರ ಗಾನದಿಂದ ನಮಗೆ ರಕ್ಷಣೆ ಸಿಗುತ್ತದೆಯೋ ಅದೇ ಗಾಯಿತ್ರಿ,(ಗಾಯಂತಂ ತ್ರಾಯತೇ ಯಸ್ಮಾತ್ ಗಾಯಿತ್ರಿ ತತಃ ಸ್ಮೃತಃ) ಪುರಾಣಗಳ ರಾಜ ಶ್ರೀಮದ್ಭಾಗವತದ ಮಹಿಮೆ



ಯನ್ನು ಹೇಳಬೇಕಾದರೆ "ಗಾಯಿತ್ರಿ ಭಾಷ್ಯ ರೋಪೋಸೌ" ಎಂದು ಗಾಯಿತ್ರಿ ಮಂತ್ರದ ಮಹಿಮೆಯನ್ನು ಕೊಂಡಾಡಿದೆ. ಶ್ರೀಮದ್ಭಾಗವತದ ಷಷ್ಠಸ್ಕಂದದಲ್ಲಿ ಬರುವ ಇಪ್ಪತ್ತ ಮೂರು ಮಂತ್ರಗಳಿಂದ ಕೂಡಿದ ನಾರಾಯಣವರ್ಮ ಮಂತ್ರವನ್ನು ಗಾಯಿತ್ರಿ ಮಂತ್ರದ ನೆರಳಿನಲ್ಲಿ ಅರ್ಥಮಾಡಿಕೊಳ್ಳಬೇಕೆಂದು ವ್ಯಾಖ್ಯಾನಕಾರರಾದ ಪಾಂಫ್ರಿ ಶ್ರೀನಿವಾಸಾಚಾರ್ಯರು ಅಭಿಪ್ರಾಯಪಟ್ಟಿದ್ದಾರೆ.

ಗಾಯಿತ್ರಿ ಮಂತ್ರದ ಬಗ್ಗೆ ಎರಡು ವಿಷಯಗಳ ಬಗ್ಗೆ ಸಂಕ್ಷೇಪವಾಗಿ ಪ್ರಸ್ತಾಪಿಸಲು ಬಯಸುತ್ತೇನೆ. ಮೊದಲನೆಯದಾಗಿ ಗಾಯಿತ್ರಿ ಶಬ್ದ ಯಾರನ್ನು ಪ್ರತಿಪಾದಿಸುತ್ತದೆಂಬ ಜಿಜ್ಞಾಸೆ. ಹಲವರು ಗಾಯಿತ್ರಿ ಸ್ತ್ರೀರೂಪ ಎಂದು ಪ್ರತಿಪಾದಿಸಿದರೆ ಶ್ರೀಮಧ್ವಾಚಾರ್ಯರು "ವೈದಿಕಲಿಂದ ಮೂರು ಕಾಲಗಳಲ್ಲೂ ಗಾಯಿತ್ರಿ ಪ್ರತಿಪಾದನಾದ ನಾರಾಯಣನು ಸ್ತುತ್ಯನಾದ್ದರಿಂದ ಗಾಯಿತ್ರಿ ಎಂದರೆ ಸಾಕ್ಷಾತ್ ನಾರಾಯಣನೇ ಹೊರತು ಸ್ತ್ರೀ ಅಲ್ಲ. ನೃಸಿಂಹ ಪುರಾಣದಲ್ಲಿ ಬರುವ ಪ್ರಸಿದ್ಧ ಗಾಯಿತ್ರಿ ಧ್ಯಾನ ಶ್ಲೋಕ (ಧ್ಯೇಯಃ ಸದಾ ಸವಿತೃ ಮಂಡಲ...)ವನ್ನು ಪ್ರಮಾಣವನ್ನಾಗಿ ಕೊಟ್ಟಿದ್ದಾರೆ. ಶ್ರೀಮಧ್ವಾಚಾರ್ಯರಲ್ಲದೆ ವಾಚಸ್ಪತಿ ಕೋಶಕಾರರೂ ಗಾಯಿತ್ರಿ ಪದಕ್ಕೆ ಪ್ರಮಾಣವಾಗಿ ಇದನ್ನು ಉದಾಹರಿಸಿರುವುದು ಗಮನಾರ್ಹ.

ಎರಡನೆಯದಾಗಿ ಗಾಯಿತ್ರಿ ಎಂಬ ವಾಕ್ಯ ಛಂದಸ್ಸನ್ನು ಸೂಚಿಸುತ್ತದೆ. ಮೂರು ಪಾದಗಳಿಂದ ಕೂಡಿದ ಇಪ್ಪತ್ತನಾಲ್ಕು ವರ್ಣಗಳ ಸಮೂಹಕ್ಕೆ ಗಾಯಿತ್ರಿ ಛಂದಸ್ಸು ಎಂದು ಹೆಸರು. ಛಂದಸ್ಸುಗಳು ಹಲವಾರು, ಅದರಲ್ಲಿ ಏಳು ವಿಧ ಛಂದಸ್ಸು ಪ್ರಖ್ಯಾತವಾಗಿದೆ. (ಗಾಯಿತ್ರಿ, ಉಷ್ಣಿಕ್, ಅನುಷ್ಟುಪ್, ಬೃಹತಿ, ಪಂಕ್ತಿ, ತ್ರಿಷ್ಟುಪ್ ಹಾಗೂ ಜಗತಿ) ಇದರಲ್ಲಿ ಗಾಯಿತ್ರಿ ಮೊದಲನೆಯದು. ವಿಭೂತಿ ಯೋಗದಲ್ಲಿ "ಛಂದಸ್ಸುಗಳಲ್ಲಿ ಗಾಯಿತ್ರಿ ಛಂದಸ್ಸು ಶ್ರೇಷ್ಠ" ಎಂದಿದೆ (ಗಾಯಿತ್ರೀ ಛಂದಸಾ ಮಹಂ 10-35). ಇದಕ್ಕೆ ಕೃಷ್ಣ ಕೊಡುವ ಕಾರಣವೇನೆಂದರೆ ಗಾಯಿತ್ರಿ. ಛಂದಸ್ಸಿಗೆ ಶ್ರೇಷ್ಠತ್ವವನ್ನು ಹೊಂದಿಸಿ ಕೊಟ್ಟು ತನ್ನ ಸ್ತುತಿ ಮಾಡುವವರನ್ನು ರಕ್ಷಿಸುವುದರಿಂದ ಗಾಯಿತ್ರಿ ಎಂದು ಹೆಸರುಳ್ಳವನು.

### ಗಾಯಿತ್ರಿಮಂತ್ರ ಹಾಗೂ ಅದರ ಅರ್ಥ

ಓಂ ಭೂರ್ಭುವಸ್ವಃತತ್ಸವಿತುರ್ವರೇಣ್ಯಮ್ ।
ಭರ್ಗೋ ದೇವಸ್ಯ ಧೀಮಹಿ । ಧಿಯೋ ಯೋ ನಃ ಪ್ರಚೋದಯಾತ್॥

ಓಂ=ಸಕಲ ಗುಣಪರಿಪೂರ್ಣ, ಭೂಃ = ಒಂದೊಂದು ಗುಣಗಳಿಂದಲೂ ಪರಿಪೂರ್ಣ, ಭುವಃ = ಷಡ್ಗುಣೈಶ್ವರ್ಯ ಸಂಪನ್ನ ಅಥವಾ ಭೂತಿ ಎನಿಸಿದ ಮಹಾಲಕ್ಷ್ಮೀಗಿಂತಲೂ ಶ್ರೇಷ್ಠ , ಸ್ವಃ = ಸುಖಸ್ವರೂಪಿ, ತತ್ = ಎಲ್ಲಡೆ ವ್ಯಾಪ್ತನಾದ, ಸವಿತುಃ = ಜಗತ್ತು ಹಾಗೂ ಎಲ್ಲ ಜೀವರಾಶಿಗಳಿಗೆ ಜಗಜ್ಜನ್ಮಾದಿಕಾರಣನಾದ, ವರೇಣ್ಯಮ್= ಎಲ್ಲರಿಂದಲೂ ವಂದಿತನಾದ, ಭರ್ಗಃ=ಎಲ್ಲರನ್ನು ವಿಷ್ಣುಕೂರ್ಮದಿಂದ ಧಾರಣೆ ಮಾಡಿದವನಾದ, ದೇವಸ್ಯ = ಕ್ರೀಡಾವಿಶಿಷ್ಟನಾದ, ಧೀಮಹಿ=ಧ್ಯಾನಿಸೋಣ, ಧಿಯಃ= ಬುದ್ಧಿ, ಯಃ=ಯಾವ ಪರಮಾತ್ಮನು ನಃ=ನಮಗೆ, ಪ್ರಚೋದಯಾತ್ = ಪ್ರಚೋದಿಸಲಿ.

**ಭಾವಾರ್ಥ :** ಸಕಲ ಗುಣಪರಿಪೂರ್ಣನಾದ, ಒಂದೊಂದು ಗುಣಗಳಿಂದಲೂ ಪರಿಪೂರ್ಣನಾದ, ಷಡ್ಗುಣೈಶ್ವರ್ಯ ಸಂಪನ್ನನಾದ, ಜ್ಞಾನ ಮತ್ತು ಆನಂದಾದಿಗಳೇ ಸ್ವರೂಪವಾಗಿ ದೇಹವನ್ನು ಪಡೆದವನಾದ, ಯಾವಾತನೋ ಆತನು ನಮಗೆ ಬುದ್ಧಿಯನ್ನು ಪ್ರಚೋದಿಸಲಿ. ಯಾವಾತನಿಂದ ಈ ಜಗತ್ತು ಹಾಗೂ ಎಲ್ಲ ಜೀವರಾಶಿಗಳಿಗೆ ಜಗಜನ್ಮಾದಿಕಾರಣನಾದ ಎಲ್ಲೆಡೆ ವ್ಯಾಪ್ತನಾದ, ಎಲ್ಲರಿಂದಲೂ ಭಜನೀಯನಾದ, ಎಲ್ಲರನ್ನು ವಿಷ್ಣುಕೂರ್ಮದಿಂದ ಧಾರಣೆ ಮಾಡಿದವನಾದ. ಎಲ್ಲರಲ್ಲಿಯೂ ಇದ್ದು ಕ್ರೀಡಾವಿಶಿಷ್ಟನಾದ. ಯಾವಾತನೋ ಆತನು ನಮಗೆ ಬುದ್ಧಿಯನ್ನು ಪ್ರಚೋದಿಸಲಿ ಎಂದು ಪ್ರಾರ್ಥಿಸುತ್ತೇವೆ.

**(ಮುಂದುವರೆಯುತ್ತದೆ)**

# ಧನುರ್ಮಾಸದ ವಿಶೇಷತೆ

- ಡಾ॥ಎ. ಕುಮುದ
9731903752



ನಮ್ಮ ಹಿಂದೂ ಪಂಚಾಂಗದ ಪ್ರಕಾರ ಹನ್ನೆರಡು ಮಾಸಗಳನ್ನು ಆರು ಋತುಗಳಾಗಿ ಮಾಡಲಾಗಿದೆ. ಆ ಆರು ಋತುಗಳಲ್ಲಿ ಐದನೆಯ ಋತುವೇ ಮಾರ್ಗಶಿರ - ಪುಷ್ಯ ಮಾಸಗಳನ್ನು ಹೇಮಂತ ಋತು ಎನ್ನಲಾಗಿದೆ. ಆ ಎರಡು ತಿಂಗಳುಗಳೂ ಚಳಿ ಹಾಗೂ ಹಿಮ ಬೀಳುವ ವಾತಾವರಣವಿರುತ್ತದೆ. ಪ್ರತಿ ಋತುಗಳಲ್ಲೂ ಒಂದೊಂದು ವಿಶೇಷತೆ ಇರುತ್ತದೆ. ಈ ಹೇಮಂತ ಋತುವಿನಲ್ಲಿನ ವಿಶೇಷತೆ ಏನೆಂದರೆ ಧನುರ್ಮಾಸದ ಆಚರಣೆ , ಧನುರ್ಮಾಸ ಎಂದರೇನು? ಅಂದರೆ ಆಂಗ್ಲ ಪಂಚಾಂಗದ ಪ್ರಕಾರ ಡಿಸೆಂಬರ್ 16 ರಿಂದ ಜನವರಿ 14 ರ ವರೆಗೆ ಸೂರ್ಯನು ವೃಷ್ಚಿಕ ರಾಶಿಯಿಂದ ಧನುರಾಶಿಗೆ ಬರುತ್ತಾನೆ. ಆ ಒಂದು ತಿಂಗಳೂ ಸೂರ್ಯನು ಧನುರಾಶಿಯಲ್ಲೇ ಇರುವುದರಿಂದ ಧನುರ್ಮಾಸ ಎಂದು ಕರೆಯಲಾಗಿದೆ. ವೈಷ್ಣವ ಸಂಪ್ರದಾಯದಲ್ಲಿ ಈ ಮಾಸಕ್ಕೆ ಪ್ರಾಮುಖ್ಯತೆ ಇದೆ.ಧನುರ್ಮಾಸದಲ್ಲಿ ದೇವತೆಗಳು ಅರುಣೋದಯಕ್ಕೆ ಮುಂಚೆ ಅಂದರೆ ಆಕಾಶದಲ್ಲಿ ನಕ್ಷತ್ರಗಳು ಇನ್ನೂ ಇರುವಾಗಲೇ ದೇವರನ್ನು ಪೂಜಿಸುವುದರಿಂದ ಮನುಷ್ಯರೂ ಆ ಅರುಣೋದಯ ಕಾಲದಲ್ಲೇ ಪೂಜಿಸಬೇಕು. ಆ ಸಮಯದಲ್ಲಿ ಪೂಜಿಸುವವರು ನಿರೋಗಿಯೂ, ಆಗಿ ಪ್ರತಿ ಜನ್ಮದಲ್ಲೂ ವೈಷ್ಣವ ಜನ್ಮ ತಾಳುವರು ಎಂಬ ಪ್ರತೀತಿಯಿದೆ. ಈ ಧನುರ್ಮಾಸವನ್ನು ಶೂನ್ಯಮಾಸವೆಂದೂ ಹೇಳುವರು. ಈ ಮಾಸದಲ್ಲಿ ಪರಮಾತ್ಮನ ಪೂಜೆ ಹಾಗೂ ನೈವೇದ್ಯಕ್ಕೆ ಅಧ್ಯತೆ ಇರುವುದು. ಆದರೆ ಯಾವ ಶುಭ ಕಾರ್ಯಕ್ಕೂ ಈ ಮಾಸ ಪ್ರಶಸ್ತವಲ್ಲ.

## ಧನುರ್ಮಾಸದ ಆಚರಣೆ ಬಗ್ಗೆ ತಿಳಿಯೋಣ

ಧನುರ್ಮಾಸದಲ್ಲಿ ಅರುಣೋದಯಕ್ಕೆ ಮೊದಲು ಅಲಂಕಾರ ಪ್ರಿಯನಾದ ಲಕ್ಷ್ಮೀನಾರಾಯಣನನ್ನು ಪೂಜಿಸಬೇಕು. ಆಮೇಲೆ ಅರ್ಘ್ಯ, ಗಾಯತ್ರಿ ಜಪ ನಂತರದ ಮುದ್ಗಾನ್ನ ಅಂದರೆ ಹುಗ್ಗಿಯ ನಿವೇದನೆ ಅತಿ ಮುಖ್ಯ. ಈ ಪೂಜೆಯು ಸೂರ್ಯೋದಯಕ್ಕೆ ಮುನ್ನ ಮಾಡುವುದು ಉತ್ತಮ. ನಕ್ಷತ್ರಗಳು ಮರೆಯಾದ ಸಮಯ ಮಧ್ಯಮ, ಸೂರ್ಯೋದಯಾ ನಂತರ ಅಧಮ. ಮಧ್ಯಾಹ್ನದ ಕಾಲವಂತೂ ನಿಷ್ಫಲವಾಗುತ್ತದೆ. ಇನ್ನು ಹುಗ್ಗಿ ಮಾಡುವ ಕ್ರಮವೆಂದರೆ ಹೆಸರುಬೇಳೆ ಎರಡು ಪಾಲು ಅಕ್ಕಿ ಒಂದು ಪಾಲಾಗಿದ್ದರೆ ಅದು ಉತ್ತಮೋತ್ತಮ, ಹೆಸರು ಬೇಳೆ ಅಕ್ಕಿ ಸಮವಾಗಿದ್ದರೆ ಅದು ಮಧ್ಯಮ, ಅಕ್ಕಿ ಹೆಚ್ಚಾಗಿದ್ದು ಹೆಸರುಬೇಳೆ ಕಡಿಮೆಯಾಗಿದ್ದರೆ ಅದು ಅಧಮ ಎನಿಸುವುದು. ಈ ಹುಗ್ಗಿಯೊಂದಿಗೆ ಬೆಣ್ಣೆಯನ್ನು ನಿವೇದಿಸುವುದು ಅತ್ಯಂತ ಪ್ರಶಸ್ತ್ಯ ವೆನಿಸುತ್ತದೆ. ಅಲ್ಲದೆ ಉದ್ದಿನಿಂದ ಮಾಡಿದ ಭಕ್ಷ್ಯ ಭೋಜ್ಯಗಳೂ ದೇವರಿಗೆ ನಿವೇದಿಸಬೇಕೆಂಬ ಪದ್ಧತಿಯೂ ಇದೆ. ಪೂಜೆ ಮತ್ತು ನೈವೇದ್ಯದ ನಂತರ ಯೋಗ್ಯರಾದ ಹಾಗೂ ನಿಷ್ಠಾವಂತರಾದ ಬ್ರಾಹ್ಮಣರಿಗೆ ಭೋಜನ ಮಾಡಿಸಬೇಕು.

ಈ ರೀತಿ ಪೂಜಿಸಿದ ಇಂದ್ರನು ತನ್ನ ಸಂಪತ್ತನ್ನು ಹೆಚ್ಚಿಸಿಕೊಂಡನೆಂಬುದು ಪುರಾಣಗಳ ಉಲ್ಲೇಖ.

ಇನ್ನು ವೈಜ್ಞಾನಿಕವಾಗಿ ನೋಡಿದರೆ ಚಳಿಗಾಲದಲ್ಲಿ ಹೆಸರುಬೇಳೆ ಬೇಗನೆ ಬೇಯುವುದಲ್ಲದೆ ದೇಹಕ್ಕೆ ತಂಪನ್ನು ನೀಡುತ್ತದೆ. ಬೇಗ ಏಳುವುದರಿಂದ ನಮ್ಮ ಮೈ ಚಳಿಬಿಟ್ಟು ಚಟುವಟಿಕೆಯಿಂದ ಕೂಡುವುದು.

ಪೂಜಾನಂತರ ಭದ್ರಲಕ್ಷ್ಮೀದೇವಿಯ ನಾಮಗಳನ್ನು ಪಠಿಸಬೇಕು. ಅವು ಈ ರೀತಿ ಇದೆ.

ಶ್ರೀದೇವಿ ಪ್ರಥಮಂ ನಾಮ ದ್ವಿತೀಯಂ ಅಮೃತೋದ್ಭವಾ  
ತೃತೀಯಂ ಕಮಲಾಕ್ಷೀ ಚ ಚತುರ್ಥಂ ಲೋಕಸುಂದರೀ  
ಪಂಚಮಂ ವಿಷ್ಣುಪತ್ನೀ ಚ ಷಷ್ಠಂ ಶ್ರೀ ವೈಷ್ಣವೀ ತಥಾ  
ವಾರಾಹಿ ಸಪ್ತಮಂ ಪ್ರೋಕ್ತಂ ಅಷ್ಟಮಂ ಹರಿವಲ್ಲಭಾ  
ನವಮಂ ಶಾಙ್ಗಣೀ ಚ ದಶಮಂ ದೇವದೇವಿಕಾ  
ಏಕಾದಶಂ ಮಹಾಲಕ್ಷ್ಮೀಃ ದ್ವಾದಶಂ ಲೋಕಸುಂದರೀ।।  
ಶ್ರೀಃ ಪದ್ಮಾ ಕಮಲಾ ಮುಕುಂದ ಮಹಿಷೀ ಲಕ್ಷ್ಮೀ ಸ್ತ್ರೀ ಲೋಕೇಶ್ವರಿ  
ಮಾ ಕ್ಷೀರಾಬ್ಧೀ ಸುತಾರವಿಂದ ಜನನಿ ವಿದ್ಯಾ ಸರೋಜಾತ್ಮಿಕಾ ॥  
ಸರ್ವಾಭೀಷ್ಟಫಲಪ್ರದೇತಿ ಸತತಂ ನಾಮಾನಿ ಯೇ ದ್ವಾದಶ  
ಪ್ರಾತಃ ಶುದ್ಧತರಾಃ ಪಠಂತಿ ಸತತಂ ಸರ್ವಾಂಲ್ಲಭಂತೆ ಶುಭಾನ್  
ಭದ್ರಲಕ್ಷ್ಮೀಸ್ತವಂ ನಿತ್ಯಂ ಪುಣ್ಯ ಮೇತಚ್ಛುಭಾವಹಮ್  
ಕಾಲೇ ಸ್ನಾತ್ವಾಪಿ ಕಾವೇರ್ಯಾಂ ಜಪ ಶ್ರೀವೃಕ್ಷ ಸನ್ನಿದೌ ॥

।।ಇತಿ ಭದ್ರಲಕ್ಷ್ಮೀ ಸ್ತೋತ್ರಂ ಸಂಪೂರ್ಣ ಶ್ರೀಕೃಷ್ಣಾರ್ಪಣಮಸ್ತು।।

ಈ ಪೂಜಾವ್ರತವನ್ನು ಒಂದು ತಿಂಗಳೂ ಮಾಡಲು ಆಗದಿದ್ದ ಪಕ್ಷದಲ್ಲಿ ವ್ಯತೀಪಾತ ಹಾಗೂ ಭಾನುವಾರದ ದಿನಗಳಲ್ಲಿ ಯಾದರೂ ಮಾಡಬೇಕು. ಈ ಧನುರ್ಮಾಸದಲ್ಲಿ ವೈಕುಂಠ ಏಕಾದಶಿ ಬರುತ್ತದೆ. ಮರುದಿನ ಮುಕ್ಕೋಟಿ ದ್ವಾದಶಿ ಬರುವುದರಿಂದ ಆ ದಿನವೂ ಆಚರಣೆಗೆ ಪ್ರಶಸ್ತವಾಗಿರುತ್ತದೆ. ಇದೇ ಮಾಸದಲ್ಲಿ ಗೀತಾಜಯಂತಿಯೂ ಬರುತ್ತದೆ. ಶ್ರೀ ಕೃಷ್ಣನು ಅರ್ಜುನನಿಗೆ ಈಮಾಸದಲ್ಲೇ ಗೀತೋಪದೇಶ ಮಾಡಿದನೆಂಬ ಪ್ರತೀತಿಯೂ ಇದೆ. ಕುರುಕ್ಷೇತ್ರ ಯುದ್ಧವು ಈ ಧನುರ್ಮಾಸದಲ್ಲೇ ಆಯಿತೆಂದೂ ಪುರಾಣಗಳ ಉಲ್ಲೇಖವಿದೆ.

ಈ ಧನುರ್ಮಾಸದಲ್ಲಿ ಪಿತೃಗಳ ಶ್ರಾದ್ಧ ಬಂದಾಗ್ಯೂ ಅರುಣೋದಯಕ್ಕೆ ಮುಂಚೆಯೇ ಮಾಡಬೇಕೆಂಬ ಪ್ರತೀತಿಯಿದೆ. ಸಾಧನಿ ದ್ವಾದಶಿ ಬಂದ ದಿನದಲ್ಲಿ ದಿನನಿತ್ಯ ಮಾಡುವ ಕರ್ಮಗಳನ್ನು ಸಂಕೋಚಿಸಿಕೊಂಡು ಹರಿಯನ್ನು ಪೂಜಿಸಿ ಪಾರಣೆಯನ್ನು ಮಾಡಿದಂತೆ ಧನುರ್ಮಾಸದಲ್ಲಿಯೂ ಮಾಡಬೇಕು.

ಯಥಾ ಸಂಕೋಚ್ಯ ಸತ್ಕರ್ಮ ಭುಂಕ್ತೇಲ್ಪದ್ವಾದಶೀ ದಿನೇ।  
ತಥಾ ಪ್ರಾತರ್ಧನುರ್ಮಾಸೇ ಕ್ತ್ವಾ ಕರ್ಮಾರ್ಚಯೇಚ್ಚ ಮಾಮ್ ॥

ಬ್ರಾಹ್ಮಣ ಭೋಜನಾನಂತರ ತಾನೂ ಭೋಜನವನ್ನು ಪ್ರಾತಃ ಕಾಲದಲ್ಲಿಯೇ ಮಾಡಬಹುದು.




## ಸಪ್ತಗಿರಿ ಕ್ವಿಜ್ ಅಕ್ಟೋಬರ್ 2022 ತಿಂಗಳ ರಸಪ್ರಶ್ನೆಯ ಉತ್ತರಗಳು

1. ಮಹಿಷಾಸುರ ರಾಕ್ಷಸನನ್ನು
2. ಚಾಮುಂಡೇಶ್ವರಿ ತಾಯಿ
3. ತುಲಾ ಸಂಕ್ರಮಣ
4. ಉತ್ಥಾನದ್ವಾದಶಿ
5. ಗುರು ಗುಣ ಸ್ತವನ
6. ಚೈತ್ರ
7. ಸರಸ್ವತಿ
8. ರಾಜರಾಜೇಶ್ವರಿ
9. ಧನ್ವಂತರೀ
10. ದ್ರೌಪತಿ
11. ಲಕ್ಷ್ಮೀ
12. ಅರ್ಜುನ
13. ಬನ್ನಿ ಮರ
14. ಅಪ್ಪಕ್ಕುಡುತ್ತಾನ್
15. ಅವಲಕ್ಕಿ

# ತೀರ್ಥ ಪ್ರಬಂಧ

## (ರಚಿಸಿದವರು ಶ್ರೀವಾದಿರಾಜ ಗುರುಸಾರ್ವಭೌಮರು)

**- ಶ್ರೀಧರ ರಾಯಸಂ**



ಭಾವಿ ಸಮೀರ ಶ್ರೀವಾದಿರಾಜ ಗುರುಸಾರ್ವಭೌಮರು ಭಕ್ತಾದಿಗಳಿಗೆ ಅನುಗ್ರಹ ಮಾಡಿ, 235 ಶ್ಲೋಕಗಳುಳ್ಳ ಖಂಡ ಕಾವ್ಯ ತೀರ್ಥ ಪ್ರಬಂಧ ರಚಿಸಿ, ಪ್ರಥಮವಾಗಿ, ಪಶ್ಚಿಮ, ಉತ್ತರ, ಪೂರ್ವ ದಕ್ಷಿಣ ಕ್ರಮ ದಿಂದ ಪ್ರದಕ್ಷಿಣೆ ಮಾಡಿ, ತೀರ್ಥಯಾತ್ರೆ ಮಾಡಬೇಕೆಂದು ತಿಳಿಸಿದ್ದಾರೆ. ಪ್ರಥಮವಾಗಿ ಶ್ರೀವಾದಿರಾಜರು ಪಶ್ಚಿಮ ದಿಕ್ಕು ಆಯ್ಕೆ ಮಾಡಲು ಕಾರಣ, ಶ್ರೀಮಧ್ವಾಚಾರ್ಯರ ಜನ್ಮಭೂಮಿ ಪಾಜಕ ಕ್ಷೇತ್ರವಾಗಿರುವುದು ಮತ್ತು ಶ್ರೀವಾದಿರಾಜರ ಜನ್ಮ ಭೂಮಿ ಕುಂಭಾಸಿ ಹತ್ತಿರ ಹೂವಿನಕೆರೆ. ತೌಳವ ಕ್ಷೇತ್ರ ಉಡುಪಿಯಿಂದ ಆರಂಭಿಸಿ, ಪಶ್ಚಿಮದ ಪುಷ್ಕರದವರೆಗೆ 44 ಕ್ಷೇತ್ರಗಳ ವರ್ಣನೆ ಮತ್ತು ರಾಜರು ತಿಳಿಸಿದ ಕ್ರಮದಿಂದಲೇ ಕ್ಷೇತ್ರ ದರ್ಶನ ಪ್ರದಕ್ಷಿಣಾ ಕಾರದಲ್ಲಿ ಮಾಡಬೇಕು. ತೀರ್ಥಪ್ರಬಂಧದ ದಿವ್ಯ ಶ್ಲೋಕಗಳುಳ್ಳ ಶ್ರೀಮಧ್ವ ಗುರುಗಳ ಸಿದ್ಧಾಂತದ ಮುಖ್ಯಪ್ರಮೇಯಗಳಾದ ಹರಿಸರ್ವೋತ್ತಮತ್ವ, ಜೀವ ಭೇದಕ, ಜಗತ್ತಿನ ಸತ್ಯತ್ವ, ಮೊದಲಾದವುಗಳನ್ನು ಕವಿತಾಶೈಲಿಯಲ್ಲಿ ವರ್ಣಿಸಿದ್ದಾರೆ.

ಉತ್ತರ ಪ್ರಬಂಧದಲ್ಲಿ ಕೃಷ್ಣಾ ನದಿಯಿಂದ ಆರಂಭಿಸಿ, ಉತ್ತರ ಭಾರತದ ತುತ್ತ ತುದಿಯ ಬದರಿ ಕ್ಷೇತ್ರದವರೆಗೆ 19 ಕ್ಷೇತ್ರಗಳ ವರ್ಣನೆಯಿದೆ. ಪೂರ್ವ ಪ್ರಬಂಧದಲ್ಲಿ ಪುರಿಜಗನ್ನಾಥನಿಂದ ಆರಂಭಿಸಿ ದಕ್ಷಿಣಪೂರ್ವದ ಕುಂಭಕೋಣ ಕ್ಷೇತ್ರದವರೆಗೆ, 23 ಕ್ಷೇತ್ರಗಳ ವರ್ಣನೆ ಮಾಡಲಾಗಿದೆ. ದಕ್ಷಿಣ ಪ್ರಬಂಧದಲ್ಲಿ ಶ್ರೀರಂಗ ಕ್ಷೇತ್ರದಿಂದ ಆರಂಭಿಸಿ, ದಕ್ಷಿಣದ ಕೊನೆಯ ಅನಂತ ಶಯನ (ತಿರುವನಂತಪುರ) ಕ್ಷೇತ್ರದವರೆಗೆ 21 ಕ್ಷೇತ್ರಗಳ ವರ್ಣನೆ ಶ್ರೀವಾದಿ ರಾಜರು ಮಾಡಿ, ಭಕ್ತ ಜನರಿಗೆ ಅವುಗಳ ಮಹಿಮೆ ವಿವರಿಸಿದ್ದಾರೆ. 22 ನೇ ಶ್ಲೋಕ ಫಲಸ್ತುತಿಯಾಗಿದೆ. ತೀರ್ಥಪ್ರಬಂದಕ್ಕೆ ಲಕ್ಷ್ಮೀಪತಿ ಭಟ್ಟೋಪಾಧ್ಯಾಯರ ಪುತ್ರರಾದ ನಾರಾಯಣಾಚಾರ್ಯರು ಗುರುಭಾವ ಪ್ರಕಾಶಿಕಾ ಎಂಬ ಅದ್ಭುತ ವ್ಯಾಖ್ಯಾನ ಮಾಡಿದ್ದಾರೆ.

ಶ್ರೀವಾದಿರಾಜ ಗುರುಸಾರ್ವಭೌಮರು ತೀರ್ಥಪ್ರಬಂಧದಲ್ಲಿ ಹದಿನೆಂಟು ಪುರಾಣಗಳು, ಮಹಾಭಾರತ ರಾಮಾಯಣ. ಧರ್ಮ ಶಾಸ್ತ್ರಗಳು, ವೇದ ಉಪನಿಷತ್ತುಗಳಿಂದ ಬಂದಿರುವ ವಿಷಯಗಳು, ಭಾರತ ದೇಶದ ಕ್ಷೇತ್ರಗಳಿಗೆ ಪ್ರಭಾವಿತವಾಗಿದೆ ಎಂದು ವಿಸ್ತಾರವಾಗಿ ಬರೆದಿದ್ದಾರೆ. ಆಧ್ಯಾತ್ಮ ಸಂಸ್ಕೃತಿಯ ಮೇಲೆ ಬೆಳಕು ಚೆಲ್ಲುವ ತೀರ್ಥ ಪ್ರಬಂಧ ಕಾವ್ಯ ಆಧ್ಯಾತ್ಮ ಜಿಜ್ಞಾಸುಗಳಿಗೆ, ಇತಿಹಾಸ ಸಂಶೋಧಕರಿಗೆ ಅತ್ಯುತ್ತಮ ಪ್ರವಾಸ ಸಾಹಿತ್ಯ ಪ್ರಬಂಧವಾಗಿದೆ!!! ಧ್ಯಾನ, ಸ್ನಾನದ ಮಂತ್ರಗಳನ್ನು ಚೆನ್ನಾಗಿ ತಿಳಿದು, ಮಂತ್ರಗಳನ್ನು ಪಠಿಸಿ, ನಂತರ ಅವಗಾಹನ ಸ್ನಾನ ಮಾಡಬೇಕೆಂದು ಸ್ತ್ರೀ ಪುರುಷರಿಬ್ಬರೂ ಇದನ್ನು ಮಾಡಿ, ಫಲ ಪಡೆಯಬೇಕೆಂದು ಹೇಳಿದ್ದಾರೆ. ತೀರ್ಥಯಾತ್ರೆ ಮಾಡಲು ಅಸಾಧ್ಯವಾದಾಗ, ಕೊನೆ ಪಕ್ಷ ತೀರ್ಥ ಪ್ರಬಂಧದ ಪಾರಾಯಣ ಮಾಡಿ, ಸ್ತೋತ್ರ ಪಠಿಸಿ ಫಲಪಡೆಯಬಹುದೆಂದು ಎಲ್ಲಾ ಭಕ್ತರಿಗೆ ವಿವರಿಸಿ ಹೇಳಿದ್ದಾರೆ.

ಪಶ್ಚಿಮ ಪ್ರಬಂಧದಲ್ಲಿ ಮೊದಲು ಮಂಗಳಾಚರಣೆ ನಂತರ ಉಪೋದ್ವಾತ, ಪರುಶುರಾಮ ಕ್ಷೇತ್ರ, ಉಡುಪಿ, ಅನಂತೇಶ್ವರನ ವರ್ಣನೆ, ಪಾಜಕ ಕ್ಷೇತ್ರ,ಎಲ್ಲೂರು ವಿಶ್ವನಾಥ ಕ್ಷೇತ್ರ, ನಂದಿಕೇಶ್ವರ ವರ್ಣನೆ, ಮಧ್ಯ ವಾಟ ಮಠ, (ನಡೆಂತಾಡಿ) ಚಿಂತಾಮಣಿ ನರಸಿಂಹ, ನೇತ್ರಾವತಿ ನದಿಯ ವರ್ಣನೆ, ನೇತ್ರಾವತಿ ಮತ್ತು ಕುಮಾರಧಾರ ನದಿಗಳ ಸಂಗಮ, ಕುಮಾರ ಧಾರ, ಸುಬ್ರಹ್ಮಣ್ಯ ಕ್ಷೇತ್ರ ವೇದವ್ಯಾಸ ಸಂಪುಟ, ಪಯಸ್ವಿನಿ ನದಿ, ಸುವರ್ಣಾ ನದಿ, ಕುಂಭಾಸಿ, ಕೋಟೇಶ್ವರ ಕ್ರೋಡ ಶಂಕರನಾರಾಯಣ, ಕೊಲ್ಲೂರು, ಸಹ್ಯಾದ್ರಿ, ಹರಿಹರ, ಬಿದರಹಳ್ಳಿ ಅಶ್ವಥ್ಥನಾರಾಯಣ, ಸೋಮೇಶ್ವರ, ಬಂಕಾಪುರ ಕೇಶವ ವರದಾನದಿ, ಬನವಾಸಿ, ಮಧುಕೇಶ್ವರ, ಧರ್ಮಗಂಗಾ ನದಿ, ಶಾಲ್ಮಲೀ ನದಿ, ಸೋದಾ ಕ್ಷೇತ್ರ, ಮಂಜುಗುಣಿ, ಏಣಭೈರವ, (ಯಾಣ) ಗೋಕರ್ಣ ಕೊಲ್ಲಾಪುರ, ತಪತೀ ನದಿ, ನರ್ಮದಾ, ಪ್ರಭಾಸ, ಬಾಣಗಂಗಾ ದ್ವಾರಕಾ, ಗೋಮತಿ ನದಿ, ಚಕ್ರತೀರ್ಥ, ಶಂಖೋದ್ಧಾರ

ತೀರ್ಥ, ಗೋಪಿ ಚಂದನ ಮಹಿಮಾ, ಸಿದ್ಧಪುರಿ, ಬಿಂದು ಸರೋವರ, ಪುಷ್ಕರ್ ಮುಂತಾದ ಕ್ಷೇತ್ರಗಳ ವರ್ಣನೆ ಶ್ರೀವಾದಿರಾಜರು ತಿಳಿಸಿದ್ದಾರೆ.

ಉತ್ತರ ಪ್ರಬಂಧದಲ್ಲಿ,ಕೃಷಾನದಿ, ಪಂಢರಪುರ, ಗೋದಾವರಿ ನದಿ, ಯಮುನಾ ನದಿ, ತ್ರಿವೇಣಿ ಪ್ರಯಾಗ, ಗಂಗಾನದಿ, ಕಾಶಿ ಬಿಂದು ಮಾಧವ, ವಿಶ್ವನಾಥ, ಗಯಾ ಗದಾಧರ ಫಲ್ಗು ನದಿ, ಮಥುರಾ, ವಿಶ್ರಾಂತಿ ತೀರ್ಥ, ವೃಂದಾವನ, ಅಯೋಧ್ಯೆ ನೈಮಿಷಾರಣ್ಯ ಹಸ್ತಿನಾಪುರ, ಕುರುಕ್ಷೇತ್ರ, ಶಂಬಲ, ಬದರೀ ಕ್ಷೇತ್ರ, ಷಟ್ ಪ್ರಯಾಗದ ಮಹತ್ವವನ್ನು ರಾಜರು ಭಕ್ತರಿಗೆ ವಿವರಿಸಿದ್ದಾರೆ.

ಪೂರ್ವಪ್ರಬಂಧದಲ್ಲಿ, ಗಂಗಾಸಾಗರ ಸಂಗಮ, ಪುರೀ ಜಗನ್ನಾಥ, ಶ್ರೀಶೈಲ, ಅಹೋಬಲ ಭವನಾಶಿನ ನದಿ, ನಿವೃತ್ತಿ ಸಂಗಮ, ತುಂಗಭದ್ರ, ಹಂಪೆ ವಿಠಲ, ವಿರೂಪಾಕ್ಷ, ಹಂಪಾದೇವಿ ಆನೆಗೊಂದಿ (ನವ ವೃಂದಾವನ) ತಿರುಪತಿ ವೆಂಕಟೇಶ, (ಶ್ರೀವಾದಿರಾಜರು ತೀರ್ಥ ಪ್ರಬಂಧದಲ್ಲಿ ಅತಿ ಹೆಚ್ಚು 11 ಶ್ಲೋಕಗಳಿಂದ ತಿರುಪತಿ ಶ್ರೀನಿವಾಸ ದೇವರನ್ನು ಕೊಂಡಾಡಿರುವುದು ವಿಶೇಷ!) ಸುವರ್ಣಮುಖಿ, ಕಂಚಿ ವರದರಾಜ, ಶಿವ ಕಂಚಿ, ಏಕಾಮ್ರೇಶ್ವರ ಕಂಚಿ ಕಾಮಾಕ್ಷಿ, ಅರುಣಾಚಲೇಶ್ವರ (ತಿರುವಣ್ಣಾಮಲೈ)ತಿರುಕ್ಕೊಯಿಲೂರು, ವೃದ್ಧಾಚಲೇಶ್ವರ, ಶ್ರೀ ಮುಷ್ಣ ಭೂವರಾಹ, ಕುಂಭಕೋಣ ಕ್ಷೇತ್ರಗಳ ವರ್ಣನೆಯಿದೆ.

ದಕ್ಷಿಣ ಪ್ರಬಂಧದಲ್ಲಿ, ಶ್ರೀರಂಗ ಕಾವೇರಿ, ವೃಷಭಾಚಲ ನೂಪುರ ಗಂಗಾ, ದರ್ಭಶಯನ, ರಾಮಸೇತು, ರಾಮೇಶ್ವರ ಧನುಷ್ಕೋಟಿ, ಶ್ರೀರಾಮಪಾದ, ತಾಮ್ರ ಪರ್ಣೀನದಿ, ಮಹೇಂದ್ರ ಪರ್ವತ, ಕನ್ಯಾಕುಮಾರಿ, ಶುಚೀಂದ್ರಂ, ಆದಿಕೇಶವ ಕ್ಷೇತ್ರ, ಘೃತಮಾಲಾ, ಅನಂತ ಶಯನ ಹಾಗೂ ಗ್ರಂಥದ ಉಪಸಂಹಾರ ಮತ್ತು ಫಲಶ್ರುತಿ ವಿವರಗಳಿವೆ.

ಶ್ರೀವಾದಿರಾಜರು ಆಯಾ ಕ್ಷೇತ್ರದಲ್ಲಿನ ದೇವತೆಗಳ ಮಹಿಮೆ ಸ್ಮರಣೆಗೆ ಬರಬಹುದಾದ ವೇದಾಂತ ಶಾಸ್ತ್ರದ ಪ್ರಮೇಯಗಳನ್ನು ಅಲಂಕಾರ ಶಾಸ್ತ್ರ ಹೊಂದಿಸಿ ವರ್ಣಿಸಿರುವುದು ವಿಶೇಷ!!! ಶ್ರೀ ವಾದಿರಾಜರು ಎರಡು ಬಾರಿ ಕಾಲ್ನಡಿಗೆಯಲ್ಲಿ ದೇಶಗಳ ಪರ್ಯಟನೆ ಮಾಡಿ, ತೀರ್ಥ ಕ್ಷೇತ್ರಗಳ ವರ್ಣನೆ, ಅದರ ಮಹತ್ವ ತಿಳಿಸಿದ್ದಾರೆ. ಪೌರಾಣಿಕ ಮತ್ತು ಐತಿಹಾಸಿಕ ಮಹತ್ವ ತಿಳಿಸಿ, ಆಯಾ ಊರುಗಳ ಇತಿಹಾಸ, ಅವುಗಳ ಮಹತ್ವಕ್ಕೆ ಪರಮಾತ್ಮನ ಮತ್ತು ಅವನ ಪರಿವಾರದ ದೇವತೆಗಳ ಸನ್ನಿಧಾನ ವಿಶೇಷವಾಗಿ ಸೂಚಿಸಿದ್ದಾರೆ.

ಶ್ರೀವಾದಿರಾಜರು ಅತಿ ಹೆಚ್ಚು ಬರೆದಿರುವ ಸ್ತೋತ್ರಗಳು ಮುಖ್ಯವಾಗಿ ದಶಾವತಾರ ಸ್ತುತಿ ಕೃಷ್ಣಾಷ್ಟಕ ( ಛಂದೋವೈವಿಧ್ಯ, ರಚನಾ ಕೌಶಲ, ಶ್ಲೇಷಯಮಕ, ಅನುಪ್ರಸಾದಿ, ಅಲಂಕಾರ ವೈಭವಗೇಯತೆ, ಅರ್ಥ ವಿಸ್ತಾರ ಗುಣಗಳಿಂದ ಕೂಡಿದ ಸ್ತೋತ್ರಗಳು.)

ತೀರ್ಥ ಪ್ರಬಂಧದ ಮಂಗಳಾಚರಣೆಯಲ್ಲಿ ತಮ್ಮ ಉಪಾಸನಾ ಮೂರ್ತಿ ಹಯಗ್ರೀವ ದೇವರನ್ನು ಪ್ರಾರ್ಥನೆ ಮಾಡಿದ್ದಾರೆ. ಎರಡನೇ ಶ್ಲೋಕದಲ್ಲಿ ಹಯಗ್ರೀವ ದೇವರ ದಯೆಯೆಂಬ ಸಮುದ್ರವು ಅಸದೃಶವಾದುದೆಂದು ಅದು ನನ್ನ ಗ್ರಂಥವನ್ನು ಅಸದೃಶವನ್ನಾಗಿ ಮಾಡಲಿ ಎಂದು ಪ್ರಾರ್ಥಿಸಿದ್ದಾರೆ. ವಾಯುದೇವರ ಅವತಾರವಾದ ಶ್ರೀಮಧ್ವಾಚಾರ್ಯರು ನಮ್ಮ ಮನಸ್ಸಿನ ಆಯಾಸವನ್ನು ಹೋಗಲಾಡಿಸಲಿ ಎಂದು ಪ್ರಾರ್ಥಿಸಿ ಅದರಂತೆ ತಮ್ಮ ಗುರುಗಳಾದ ಶ್ರೀವಾಗೀಶತೀರ್ಥರನ್ನು ಸ್ಮರಿಸಿದ್ದಾರೆ. ರಮಾದೇವಿಯ ಮಹಿಮೆ ಉಡುಪಿ ಮಹಿಮೆ ಕಡಗೋಲು ಕೃಷ್ಣನ ಮಹಿಮೆ, ಅನಂತೇಶ್ವರನ ಮಹಿಮೆ, ಪಾಜಕದ ಮಹಿಮೆ, ಕುಂಜಾರುಗಿರಿ, ಎಲ್ಲೂರು, ಮರ್ಧೆಯಟ, ಮುಂತಾದವುಗಳನ್ನು ಅತ್ಯಂತ ಭಕ್ತಿಯಿಂದ ವರ್ಣಿಸಿದ್ದಾರೆ.

ಈ ಎಲ್ಲಾ ಕ್ಷೇತ್ರಗಳ ವರ್ಣನೆ ಶ್ರೀವಾದಿರಾಜರು ವರ್ಣಿಸಿದ್ದರೂ, ಕೆಲವು ಪ್ರಸಿದ್ಧ ಕ್ಷೇತ್ರಗಳ ವರ್ಣನೆ ಬಿಟ್ಟು ಹೋಗಿದೆ. ಅಂದ ಮಾತ್ರಕ್ಕೆ ಬಿಟ್ಟು ಹೋದ ಕ್ಷೇತ್ರಗಳನ್ನು ಶ್ರೀವಾದಿರಾಜರು ದರ್ಶಿಸಿಲ್ಲ ಎಂಬ ಕಾರಣ ಹೇಳಲಾಗುವುದಿಲ್ಲ. (ಹರಿದ್ವಾರ, ಉಜ್ಜಯಿನಿ, ಪಂಚತತ್ವಲಿಂಗಗಳು, ತೋತಾದ್ರಿ, ಕಾಶ್ಮೀರ, ಗುಜರಾತ್‌ನಲ್ಲಿನ ಸೋಮನಾಥ ಮುಂತಾದವು).


ಕವಿಕುಲತಿಲಕ ಶ್ರೀವಾದಿರಾಜರು ಈ ಖಂಡಕಾವ್ಯ ತೀರ್ಥ ಪ್ರಬಂಧ ಕೃತಿಯನ್ನು ಹಯಗ್ರೀವ ದೇವರ ಅನುಗ್ರಹದಿಂದ ರಚಿಸಿ, ಶ್ರೀಹರಿಗೆ ಅರ್ಪಿಸಿದ್ದಾರೆ. ಈ ಎಲ್ಲಾ ತೀರ್ಥಕ್ಷೇತ್ರಗಳ ವರ್ಣನೆ, ಅನುಪ್ರಾಸಾದಿ ಶಬ್ದ ಅಲಂಕಾರಿಕವಾಗಿ, ಪಾಪರಾಶಿ ನಾಶಕವಾಗಿ, ಪ್ರಶಸ್ತ ಅರ್ಥಗಳಿಂದ ಕೂಡಿ, ಮನೋಹರವಾಗಿ ಲಕ್ಷ್ಮೀಪತಿ ಶ್ರೀನಾರಾಯಣನಿಗೆ ಪ್ರೀತಿಯಾಗಲೆಂದು ರಚಿಸಿ ಅರ್ಪಿಸಿದ್ದಾರೆ.

ಭಕ್ತಿಯಿಂದ ಈ ತೀರ್ಥ ಪ್ರಬಂಧವನ್ನು ಪಠಿಸುವ ಶ್ರವಣ ಮಾಡುವ ಭಕ್ತರು ಸಕಲ ಐಹಿಕ ಹಾಗೂ ಪಾರತ್ರಿಕ ಸಂಪತ್ತುಗಳಿಗೆ ಒಡೆಯರಾಗುವರು. ತೀರ್ಥಕ್ಷೇತ್ರಗಳಿಂದ ಮನಸ್ಸು ನಿರ್ಮಲವಾಗುವುದು ಈ ಫಲಶ್ರುತಿಯೊಂದಿಗೆ ಶ್ರೀವಾದಿರಾಜ ಗುರುಸಾರ್ವಭೌಮರು, ತಮ್ಮ ಈ ಗ್ರಂಥವನ್ನು ಉಪಸಂಹರಿಸಿರುವರು.

ಆಧ್ಯಾತ್ಮಜಿಜ್ಞಾಸುಗಳಿಗೆ ಭಾವಿ ಸಮೀರ ಶ್ರೀವಾದಿರಾಜರ ಸ್ಮರಣೆ ನಿತ್ಯ ಮಾಡಲು, ಪಠಿಸಲು, ಅರ್ಥಚಿಂತನೆ ಮಾಡಲು, ಅವರಲ್ಲಿ ಭಕ್ತಿ ಮೂಡಲು ಹಯವದನ ದೇವರಲ್ಲಿ ಪ್ರಾರ್ಥಿಸೋಣ.

ಪದ್ಯಾನಿ ಪ್ರಥಿತಾಪಗಾಚ್ಯರೋತಯಶೋಹೃದ್ಯಾನಿ ತತ್ಖಂಡಿತಾ
ವದ್ಯೇನಾಮಲವಾದಿರಾಜಯತಿನಾ ಮಧ್ವೋಕ್ತಿ ಶುದ್ಧಾತ್ಮನಾ।
ಬದ್ಧಾನ್ಯದ್ಧರಸಿದ್ಧಸತ್ಕೃತಚಯೋದ್ರಿಕ್‌ತೋರು ಪುಣ್ಯಪ್ರದಾ
ನ್ಯದ್ಧಾಯಃ ಪಠತೇ ಶ್ರಣೋತಿ ಸ ಭವೇದುದ್ದಾಮಧಾಮಾ ಶ್ರೀ ಯಃ॥

॥ ಶ್ರೀ ಕೃಷ್ಣಾರ್ಪಣಮಸ್ತು ॥



# ತಿರುಮಲೆ ತಿರುಪತಿ ದೇವಸ್ಥಾನಗಳು

## ವಿಜ್ಞಪ್ತಿ


**'ಸಪ್ತಗಿರಿ' ಬಗ್ಗೆ ತೋರಿಸುವ ಅಭಿಮಾನ ಅನನ್ಯ ಸಾಮಾನ್ಯ**

**ತಿ.ತಿ.ದೇ. ಹಾಗೂ ಪಾಠಕರಿಗೆ ಮಧ್ಯ ವಾರಧಿಯಾಗಿ ಇರುವ 'ಸಪ್ತವರ್ಣ' ಆಧ್ಯಾತ್ಮಿಕ ಸಚಿತ್ರ ಮಾಸಪತ್ರಿಕೆ**

**'ಸಪ್ತಗಿರಿ' ಪತ್ರಿಕೆ ಬೆಲೆಯಲ್ಲಿ ಬದಲಾವಣೆ**

**ನಿಮ್ಮ ಮನೆಗೆ ಸಪ್ತಗಿರೀಶನು ಬಂದ ಅನುಭೂತಿಯನ್ನು ಪಡೆಯಿರಿ.**

**'ಸಪ್ತಗಿರಿ' ಆಧ್ಯಾತ್ಮಿಕ ಸಚಿತ್ರ ಮಾಸಪತ್ರಿಕೆಗೆ ಚಂದಾದಾರರಾಗಿ ಕಟ್ಟಿ.**



**ಸ್ವಾಮಿಯವರ ಅಕ್ಷರ ಪ್ರಸಾದವನ್ನು ಪ್ರತಿ ತಿಂಗಳು ಪಡೆದು ಕೊಳ್ಳಿ**





# ಸಪ್ತಗಿರಿ

**ಆಧ್ಯಾತ್ಮಿಕ ಸಚಿತ್ರಮಾಸಪತ್ರಿಕೆ**

**(ತೆಲುಗು, ತಮಿಳು, ಕನ್ನಡ, ಹಿಂದಿ, ಆಂಗ್ಲ, ಸಂಸ್ಕೃತ ಭಾಷೆಗಳು)**

**..... ಚಂದಾ ವಿವರಗಳು.....**

ಬಿಡಿ ಪ್ರತಿ ರೂ. 20/-

ವಾರ್ಷಿಕ ಚಂದಾ : ರೂ. 240/-

ಆಜೀವ ಚಂದಾ : (12 ವರ್ಷಗಳು) ರೂ. 2,400/-

ವಿದೇಶಿ ವಾರ್ಷಿಕ ಚಂದಾ : ರೂ. 1030/-

**ಬೆಲೆಯಲ್ಲಿ ಬದಲಾವಣೆ ಸೆಪ್ಟೆಂಬರ್, 2022 ರಿಂದ ಜಾರಿಗೆ ಬಂದಿದೆ.**

**ನೂತನ ಚಂದಾದಾರರಿಗೆ ಮಾತ್ರವೇ ಈ ಬದಲಾವಣೆ ವರ್ತಿಸುತ್ತದೆ.**

ವಿವರಗಳಿಗೆ:

ಪ್ರಧಾನ ಸಂಪಾದಕರು, ತಿ.ತಿ.ದೇ., ಪ್ರೆಸ್ ಕಾಂಪೌಂಡ್ ಕೆ.ಟಿ.ರೋಡ್ಡು, ತಿರುಪತಿ : 517 507.

ಫೋನ್ : 0877 - 2264363 ,2264543



# ತ್ರಿಗುಣಾತೀತ ಅವಧೂತ ದತ್ತಾತ್ರೇಯ

- ಹನುಮಂತ ಮ. ದೇಶಕುಲಕರ್ಣಿ
94803 64915

ಜಟಾಧರಂ ಪಾಂಡುರಂಗ ಶೂಲಹಸ್ತ ಕೃಪಾನಿಧಿಂ।
ಸರ್ವರೋಗ ಹರಂ ದೇವಂ ದತ್ತಾತ್ರೇಯಮಹಂ ಭಜೇ॥

ತ್ರಿಮೂರ್ತಿ ಸ್ವರೂಪನಾದ ಶ್ರೀದತ್ತಾತ್ರೇಯನು ಈ ಸೃಷ್ಟಿಗೇ ಗುರುವೆನಿಸಿದ್ದು, ಅವನೇ ಕಲಿಯುಗದಲ್ಲಿ ಪ್ರಥಮಾವತಾರದಲ್ಲಿ ಶ್ರೀಪಾದ ಶ್ರೀವಲ್ಲಭನಾಗಿಯೂ ಮತ್ತು ದ್ವಿತೀಯ ಅವತಾರವಾಗಿ ನರಸಿಂಹ ಸರಸ್ವತಿಯಾಗಿಯೂ ಧರ್ಮಪರಿಪಾಲನೆಗಾಗಿ ಅವತರಿಸಿದನು. ದತ್ತಾತ್ರೇಯರು ಸ್ವಾರೋಚಿಷ ಮನ್ವಂತರದ ಸಪ್ತರ್ಷಿಗಳಲ್ಲಿ ಒಬ್ಬರು. ಚಕ್ರಧಾರ ಎಂಬ ಊರವ ಪ್ರತಿಪಾದಕನು ತನ್ನ "ಸೂತ್ರವಿಚಾರಂ" ಎಂಬ ಕೃತಿಯಲ್ಲಿ ಶ್ರೀ ದತ್ತಾತ್ರೇಯನು 'ಚತುರ್ಯುಗ ಅವತಾರಿ ಪುರುಷ' ಎಂದು ಸಾರಿದ್ದಾನೆ.

ಪ್ರಪಂಚದ ಸೃಷ್ಟಿ, ಸ್ಥಿತಿ, ಲಯಗಳಿಗೆ ಬ್ರಹ್ಮ, ವಿಷ್ಣು, ಮಹೇಶ್ವರರು ಅಧಿದೇವತೆಗಳೆಂದು ಭಾರತೀಯರ ನಂಬಿಕೆ. ಆದರೆ ವಸ್ತುತಃ ಒಂದೇ 'ಏಕಂ ಸತ್ ವಿಪ್ರಾ ಬಹುಧಾ ವದಂತಿ' ಎಂಬ ಸಂಕೇತವೇ ದತ್ತಾತ್ರೇಯನ ರೂಪವಾಗಿದೆ. ದತ್ತ ಶಬ್ದಕ್ಕೆ ಅರ್ಥ ಕೊಟ್ಟಿದ್ದು ತ್ರಿಮೂರ್ತಿಗಳು ತಮ್ಮನ್ನು ತಾವೇ ಋಷಿ ದಂಪತಿಗೆ ಪುತ್ರನ ರೂಪದಲ್ಲಿ ಅರ್ಪಿಸಿಕೊಂಡಿದ್ದರಿಂದ ದತ್ತನೆಂದು ಕರೆದರಂತೆ ಒಬ್ಬನೇ ವ್ಯಕ್ತಿಯಲ್ಲಿ ತ್ರಿಮೂರ್ತಿಗಳು ಇದ್ದುದರಿಂದ ದತ್ತಾತ್ರೇಯ ಎಂದು ಕರೆಯಲಾಯಿತಂತೆ.

ಸ್ಮರಣ ಮಾತ್ರದಿಂದ ಸಂತುಷ್ಟನು, ಭಯ ನಿವಾರಕನೂ ಆದ ದತ್ತ ಮಹಾಜ್ಞಾನ ಪ್ರದಾಯಕನೂ ಆದ ಮಹಾಯೋಗ ಸರ್ವಕಾಮ ಫಲ ಪ್ರದಾಯಕ ಮಾತ್ರನಲ್ಲ. ಮುಕ್ತಿದಾಯಕನೂ ಹೌದು. ಅವತಾರ ಪುರುಷನಾಗಿ ಸಾಧ್ಯದ ನೆಲೆಯಲ್ಲಿದ್ದರೂ ಸಾಧನ ವ್ರತಗಳನ್ನು ಕೈಗೊಂಡು ಸಾಧ್ಯವಾಗಿ ಸಾಮಾನ್ಯ ಮರ್ತ್ಯ ಸಾಧಕರಿಗೆ ನಿದರ್ಶನನಾಗಿರುವನು.

**ಅವತಾರ :** ಶ್ರೀಮದ್ಭಾಗವತದಲ್ಲಿ ಅತ್ರಿ ಮಹರ್ಷಿಯ ತಪಸ್ಸಿಗೆ ಮೆಚ್ಚಿದ ವಿಷ್ಣುವು ಅತ್ರಿ ಪುತ್ರನಾಗಿ ಅವತರಿಸಿದನೆಂದು ಹೇಳಲಾಗಿದೆ. ಅತ್ರಿಗೆ ತಾನೇ ದತ್ತನಾದುದರಿಂದ (ಕೊಡಲ್ಪಟ್ಟವನು) ಈ ಅತ್ರಿ - ಅನುಸೂಯಾ ಪುತ್ರನಿಗೆ ದತ್ತಾತ್ರೇಯನೆಂದು ಹೆಸರಾಯಿತು. ಪೂರ್ಣತತ್ವ ಸ್ವರೂಪದಿಂದ ದತ್ತಾತ್ರೇಯನು ಅವತರಿಸಿದ್ದ ಮಾರ್ಗಶಿರ ಪೌರ್ಣಮಿಯೆಂದೇ ಎಂಬುದು ಅವತಾರದ ವೈಶಿಷ್ಟ್ಯ ಅದರಲ್ಲೂ ಶ್ರೀಕೃಷ್ಣ ಭಗವದ್ಗೀತೆಯಲ್ಲಿ 'ಮಾಸಾನಾಂ ಮಾರ್ಗಶಿರ್ಷೋಸ್ಮಿ' ಎಂದಿದ್ದಾನೆ.

ಸೂತ ಸಂಹಿತೆಯ ಪ್ರಕಾರ ದತ್ತನ ಅವತಾರವು ಕೃತಯುಗದಲ್ಲಿ ಸಂಭವಿಸಿದ್ದು, ಅಂದು ವೈಶಾಖ ಬಹುಳ ದಶಮಿ, ಗುರುವಾರ ರೇವತಿ ನಕ್ಷತ್ರ ಮೀನಾ ಲಗ್ನವಾಗಿದೆ. ಶ್ರೀದತ್ತಾತ್ರೇಯನು ಪ್ರಲ್ಹಾದನಿಗೆ ಉಪದೇಶ ಮಾಡಿದ ಘಟನೆಯು ಈ ವಿಷಯಕ್ಕೆ ಸಾಕ್ಷಿ. ವರ್ತಮಾನದ ಸಂವತ್ಸರಗಳ ಕ್ರಮಗಳನ್ನು ಆಧರಿಸಿ ಹೇಳುವುದಾದರೆ ಶ್ರೀದತ್ತಾತ್ರೇಯನ ಅವತಾರವು ಸ್ವಯಂಭು ಮನ್ವಂತರದಲ್ಲಿ ಸಂಭವಿಸಿತು ಎಂಬ ದಾಖಲೆಗಳು ಇವೆ.

ದತ್ತಾತ್ರೇಯ ದೇವರು ಜ್ಞಾನೋಪದೇಶಕ್ಕಾಗಿಯೇ ಪ್ರಕಟಗೊಂಡ ಭಗವಂತ ನಾರಾಯಣನ ಒಂದು ಅವತಾರ ರೂಪ. ಅವತಾರಗಳಲ್ಲಿ ಕೃಷ್ಣನದು ವಿಷ್ಣುವಿನ ಪೂರ್ಣಾವತಾರ, ಕಪಿಲನದು ಅಂಶಾವತಾರ, ಪರಶುರಾಮ, ದತ್ತಾತ್ರೇಯರದು ಆವೇಶಾವತಾರವೆಂದು ಶ್ರೀಮದ್ ಭಾಗವತ ತಿಳಿಸಲಾಗಿದೆ. ಬ್ರಹ್ಮನ ಅವತಾರವಾಗಿದ್ದರಿಂದ ಸೋಮನೆಂದು, ವಿಷ್ಣುವಿನ ಅವತಾರವಾಗಿದ್ದರಿಂದ ದತ್ತನೆಂದೂ, ಶಿವನ ಅವತಾರವಾಗಿದ್ದರಿಂದ ದುರ್ವಾಸನೆಂದೂ ಕರೆಯಲ್ಪಡುತ್ತಾನೆ.

**ಅತ್ರಿ- ಅನಸೂಯಾ ಅರ್ಥ :**

ಅತ್ರಿ ಅಂದರೆ ತಾಪತ್ರಯಗಳಿಂದ ಬಂಧಮುಕ್ತನು ಹಾಗೂ ಸತ್ವ, ರಜಸ್, ತಾಮಸ ಗುಣಗಳಿಂದ ಹೊರತಾದವನು. ತ್ರಿಮೂರ್ತಿ ಗ್ರಂಥಿ ಗಳನ್ನು ಭೇದಿಸಬಲ್ಲವನು. ಕುಂಡಲಿನಿಗಳನ್ನು ಜಾಗ್ರತಗೊಳಿಸಲು ಶಕ್ತನಾದವನು.

ಅತ್ರಿ ಪತ್ನಿ ಅನಸೂಯಾ ಅಂದರೆ ಅಸೂಯೆಯಿಂದ ಮುಕ್ತಳು. ಇದು ಸಾಧಕಿಯ ಉನ್ನತ ಮನೋಮಟ್ಟದ ಅಸೂಯೆ ಹೊರತಾಗಿ ಆತ್ಮ ಜ್ಞಾನದ ಅರಿವು ಮೂಡಿದಾಗ 'ಅನಸೂಯಾ' ಆಗಲು ಸಾಧ್ಯ. 'ಅನಸೂಯಾ' ಅಂದರೆ ಮಾಯಾರಹಿತವಾದ ಜೀವಾತ್ಮನ ಸೂಚಿಸುತ್ತದೆ.

**ದತ್ತಾತ್ರೇಯ ಜನನ :**

ದತ್ತಾತ್ರೇಯನ ಜನನ ಕುರಿತೂ ಹಲವು ಪುರಾಣಗಳಲ್ಲಿ ಹಲವು ಬಗೆಯ ವಿವರಣೆಗಳಿವೆ. ಸಪ್ತರ್ಷಿಗಳಲ್ಲಿ ಎರಡನೆಯವರಾದ ಅತ್ರಿಮುನಿಗಳು ಸಹ್ಯಾದ್ರಿ ಪರ್ವತ ಶ್ರೇಣಿಯಲ್ಲಿ ಘೋರ ತಪಸ್ಸನಾಚರಿಸುತ್ತಿದ್ದಾಗ ಅವರ ತಪಸ್ಸಿಗೆ ಮೆಚ್ಚಿದ ತ್ರಿಮೂರ್ತಿಗಳು ಪ್ರತ್ಯಕ್ಷರಾಗಿ ವರ ಬೇಡಿಕೋ ಎಂದು ಕೇಳಿದರು. ಆಗ ಆತ್ರಿ ಮುನಿಗಳು ನಿಮ್ಮ ತ್ರಿಗುಣಗಳುಳ್ಳ ಜೊತೆಗೆ ಶಕ್ತಿಶಾಲಿಯಾದ ಮಗನನ್ನು ದಯಪಾಲಿಸು ಎಂದು ಕೇಳಿಕೊಂಡರಂತೆ. ಆಗ ತ್ರಿಮೂರ್ತಿಗಳು ತಥಾಸ್ತು ಎಂದು ಅಭಯಹಸ್ತ ತೋರಿಸಿ ಆಶೀರ್ವದಿಸಿದರು.

ಅತ್ರಿಋಷಿಗಳ ಪತ್ನಿ ಅನಸೂಯಾಳು ಮಹಾಪತಿವ್ರತೆಯಾಗಿ ದ್ದಳು. ಅವಳ ಪಾತಿವ್ರತ್ಯದ ಪರೀಕ್ಷೆ ತೆಗೆದುಕೊಳ್ಳಲು ತ್ರಿಮೂರ್ತಿಗಳು ಅತ್ರಿ ಋಷಿಗಳು ಅನುಷ್ಠಾನಕ್ಕಾಗಿ ಹೊರಗೆ ಹೋದಾಗ ಅತಿಥಿಗಳ ವೇಷದಲ್ಲಿ ಬಂದರು ಮತ್ತು ಅನಸೂಯಾಳ ಬಳಿ ಭೋಜನವನ್ನು ಬೇಡಿದರು.

ಅದಕ್ಕೆ ಅನಸೂಯಾಳು, ಋಷಿಗಳು ಅನುಷ್ಠಾನಕ್ಕಾಗಿ ಹೊರಗೆ ಹೋಗಿದ್ದಾರೆ ಅವರು ಬರುವವರೆಗೂ ವಿಶ್ರಮಿಸಿಕೊಳ್ಳಿ ಎಂದಳು. ಆಗ ತ್ರಿಮೂರ್ತಿಗಳು ಋಷಿಗಳಿಗೆ ಹಿಂದಿರುಗಲು ತಡವಾಗಬಹುದು. ನಮಗೆ ಅಸಾಧ್ಯ ಹಸಿವಾಗಿದೆ. ಆಶ್ರಮಕ್ಕೆ ಬಂದ ಅತಿಥಿಗಳಿಗೆ ನೀವು ಇಚ್ಛಾ ಭೋಜನವನ್ನು ನೀಡುತ್ತೀರೆಂದು ಕೇಳಿದ್ದೇವೆ. ಆದುದರಿಂದ ನಾವು ಇಚ್ಛಾ ಭೋಜನವನ್ನು ಮಾಡಲು ಬಂದಿದ್ದೇವೆ ತಕ್ಷಣ ಆಹಾರವನ್ನು ನೀಡಿ, ಇಲ್ಲದಿದ್ದರೆ ಬೇರೆ ಕಡೆ ಹೋಗುತ್ತೇವೆ ಎಂದರು.

ಅನಸೂಯಾಳು ಭೋಜನಕ್ಕೆ ಕುಳಿತುಕೊಳ್ಳಲು ವಿನಂತಿಸಿ, ಊಟ ಬಡಿಸಲು ಮುಂದಾದಾಗ ನೀನು ವಿವಸ್ತ್ರಳಾಗಿ ನಮಗೆ ಬಡಿಸಬೇಕೆಂಬುದು ನಮ್ಮ ಇಚ್ಛೆಯಾಗಿದೆ ಎಂದರು ಅತಿಥಿಗಳನ್ನು ಹಿಂದಿರುಗಿಸಿ ಕಳುಹಿಸುವುದು ಯೋಗ್ಯವಲ್ಲವೆಂದೆಣಿಸಿ ನನ್ನ ಮನಸ್ಸು ನಿರ್ಮಲವಾಗಿದೆ. ನನ್ನ ಪತಿಯ ತಪಸ್ಸಿನ ಫಲವು ನನ್ನನ್ನು ಕಾಪಾಡುವುದೆಂದು ಧೈರ್ಯದಿಂದ ಅವಳು ಅತಿಥಿಗಳಿಗೆ ತಮ್ಮಿಚ್ಛೆಯಂತಾಗಲಿ ಎಂದಳು.

ಅಡುಗೆಮನೆಯಲ್ಲಿ ಮನಸ್ಸಿನಲ್ಲಿ ಪತಿಯ ಸ್ಮರಣೆ ಮಾಡಿ ಅತಿಥಿಗಳು ನನ್ನ ಮಕ್ಕಳೇ ಆಗಿದ್ದಾರೆ ಎಂಬ ಭಾವವನ್ನಿಟ್ಟುಕೊಂಡು ಬಡಿಸಲು ಹೊರ ಬಂದಾಗ ಅಲ್ಲಿ ಅತಿಥಿಗಳ ಜಾಗದಲ್ಲಿ ಅಳುತ್ತಿರುವ ಮೂರು ಮಕ್ಕಳಿದ್ದರು. ಅವರನ್ನು ಮಡಿಲಲ್ಲಿ ತೆಗೆದುಕೊಂಡು ಸ್ತನಪಾನವನ್ನು ಮಾಡಿಸಿದಾಗ ಮಕ್ಕಳು ಅಳುವುದನ್ನು ನಿಲ್ಲಿಸಿದರು. ಅಷ್ಟರಲ್ಲಿಯೇ ಅತ್ರಿ ಋಷಿಗಳು ಆಶ್ರಮಕ್ಕೆ ಬಂದಾಗ ಅನಸೂಯಾ ಎಲ್ಲ ವೃತ್ತಾಂತವನ್ನು ತಿಳಿಸಿದಳು.

ಸ್ವಾಮಿನ್ ದೇವೇನ ದತ್ತಮ್। (ಸ್ವಾಮಿ,ದೇವರು ನೀಡಿದ್ದು) ಎಂದು ಹೇಳಿದಳು. ಇದರಿಂದ ಅತ್ರಿಯವರು ಆ ಮಕ್ಕಳ ನಾಮಕರಣವನ್ನು 'ದತ್ತ' ಎಂದು ಮಾಡಿದರು. ನಂತರ ಅತ್ರಿಋಷಿಗಳು ಅಂತರ್ ಜ್ಞಾನದಿಂದ ಆ ಮಕ್ಕಳ ನಿಜಸ್ವರೂಪವನ್ನು ತಿಳಿದುಕೊಂಡು ಅವರಿಗೆ ನಮಸ್ಕಾರ ಮಾಡಿದರು. ಮಕ್ಕಳು ತೊಟ್ಟಿಲಲ್ಲಿ ಉಳಿದವು ಹಾಗೂ ಬ್ರಹ್ಮ ವಿಷ್ಣುಮಹೇಶ್ವರರು ಅವರೆದುರು ಪ್ರಕಟರಾಗಿ, ಪ್ರಸನ್ನರಾಗಿ ವರ ಬೇಡಿಕೊಳ್ಳಿ ಎಂದರು.

ಅತ್ರಿ ಮತ್ತು ಅನಸೂಯರು ಬಾಲಕರು ಮನೆಯಲ್ಲಿಯೇ ಇರಲಿ, ಎಂಬ ವರವನ್ನು ಕೇಳಿದರು. ಆ ವರವನ್ನು ನೀಡಿ ದೇವರು ತಮ್ಮತಮ್ಮ ಲೋಕಗಳಿಗೆ ತೆರಳಿದರು. ಬ್ರಹ್ಮದೇವನಿಂದ ಚಂದ್ರ, ಶ್ರೀವಿಷ್ಣುವಿನಿಂದ ದತ್ತ ಮತ್ತು ಶಂಕರನಿಂದ ದೂರ್ವಾಸರಾದರು. ಮೂವರಲ್ಲಿ ಚಂದ್ರ ಮತ್ತು ದೂರ್ವಾಸರು ತಪಸ್ಸಿಗೆ ಹೋಗಲು ಅನುಮತಿಯನ್ನು ಪಡೆದು ಕ್ರಮವಾಗಿ ಚಂದ್ರಲೋಕ ಮತ್ತು ತೀರ್ಥಕ್ಷೇತ್ರಗಳಿಗೆ ಹೋದರು. ಮೂರನೆಯ ದತ್ತನು ವಿಷ್ಣುವಿನ ಕಾರ್ಯಕ್ಕಾಗಿ ಭೂಮಿಯ ಮೇಲೆ ಉಳಿದನು.

ಕೆಲವು ಪುರಾಣ ಚರಿತ್ರೆಗಳ ಪ್ರಕಾರ ಅನುಸೂಯೆಯು ತ್ರಿಮೂರ್ತಿಗಳಿಗೆ ಸ್ತನ್ಯಪಾನ ಮಾಡಿಸುತ್ತ ಜೋಗುಳವನ್ನು ಕಟ್ಟಿ ಮಕ್ಕಳಿಲ್ಲದ ಅನಸೂಯ ಸಂತೋಷದಲ್ಲಿ ಇರುತ್ತಾಳೆ. ಅತ್ರಿ ಮುನಿಗಳಿಗೂ ಸಂತೋಷವಾಗುತ್ತೆ. ಎಷ್ಟು ದಿನಗಳಾದರೂ ತಮ್ಮ ಪತಿದೇವರು ಬರದೇ ಇರುವುದರಿಂದ ಸಾಕ್ಷಾತ್ ಸರಸ್ವತಿ, ಲಕ್ಷ್ಮೀ ಪರಮೇಶ್ವರಿ ತಮ್ಮ ಪತಿಯನ್ನು ಹುಡುಕಿಕೊಂಡು ಬಂದು ನೋಡುತ್ತಾರೆ ಮಕ್ಕಳ ರೂಪದಲ್ಲಿ ಆಟವಾಡುತ್ತಾ ಇರುವುದನ್ನು ಕಂಡು ಅನಸೂಯ ಹತ್ತಿರ ತಮ್ಮ ತಪ್ಪನ್ನು ಒಪ್ಪಿಕೊಂಡು ಮತ್ತೆ ನಮ್ಮ ಪತಿಯಂದಿರನ್ನು ಮರಳಿಸುವಂತೆ ಕೇಳಿಕೊಂಡಾಗ,

ಆಗ ಅತ್ರಿ ಮುನಿಗಳು ನಿಮ್ಮ ಮೂವರ ಗುಣಗಳುಳ್ಳ ಮತ್ತು ಶಕ್ತಿಶಾಲಿಯಾದ ಮಗುವನ್ನು ದಯಪಾಲಿಸು ಎಂದು ಕೇಳಿಕೊಂಡಾಗ ತ್ರಿಮೂರ್ತಿಗಳು ಮೊದಲಿನಂತಾದರು ಕೆಲ ದಿನಗಳ ನಂತರ ಅತ್ರಿ ಮುನಿಗಳು ಹಾಗೂ ಅವರ ಧರ್ಮಪತ್ನಿ ಅನಸೂಯಾದೇವಿಗೆ ಮಗ ಹುಟ್ಟಿದ.

### ತ್ರಿಮೂರ್ತಿ ಸ್ಮರಣೆ:

ದತ್ತ ಪ್ರಭುವಿನಿಂದ ತ್ರಿಮೂರ್ತಿಗಳು, ಅವರಿಂದ ಮುಕ್ಕೋಟಿ ದೇವತೆಗಳು ಅವರಿಂದ 33 ಕೋಟಿ ದೇವತೆಗಳು ಬಂದಿದ್ದಾರೆ. ಆದುದರಿಂದ ದತ್ತನಾಮ ಸ್ಮರಣೆ ಮಾಡಿದ ಮಾತ್ರದಿಂದ ಸಮಸ್ತ ದೇವತೆ ಆ ಸ್ಮರಣೆ ಮಾಡಿದ ಫಲವು ಲಭಿಸುವುದು. ಶ್ರೀದತ್ತನ ಬ್ರಹ್ಮಮುಖಕ್ಕೆ ಋಷೀ ಪೂಜೆ ಮಾಡಬೇಕು, ಅವರ ಬ್ರಹ್ಮಮುಖದ ನಾಲಿಗೆಯಲ್ಲಿ ಸರಸ್ವತಿ ಇದ್ದಾಳೆ. ವಿಷ್ಣು ಮುಖಕ್ಕೆ ಶ್ರೀಸತ್ಯನಾರಾಯಣ ಪೂಜೆ ಮಾಡಿ ವಿಷ್ಣು ಸಹಸ್ರ ನಾಮವನ್ನು ಪಠಿಸಬೇಕು. ಮಧ್ಯಮುಖದ ವಕ್ಷಸ್ಥಳದಲ್ಲಿ ಲಕ್ಷ್ಮೀಯು ಇದ್ದಾಳೆ. ರುದ್ರ ಮುಖಕ್ಕೆ ರುದ್ರಾಭಿಷೇಕವನ್ನು ಮಾಡಬೇಕು. ಶಿವ ಮುಖದ ವಾಮಭಾಗದಲ್ಲಿ ಗೌರಿಯು ಇದ್ದಾಳೆ. ಸೃಷ್ಟಿಯಲ್ಲಿನ ಸ್ತ್ರೀ ದೇವತಾ ಶಕ್ತಿಗಳು ವಾಮಭಾಗದಲ್ಲೂ, ಪುರುಷ ದೇವತಾ ಶಕ್ತಿಗಳು ಅವರ ಬಲಭಾಗದಲ್ಲಿ ಇವೆ.

ಚಕ್ರ- ಶಂಖಗಳು ವಿಷ್ಣುಶಕ್ತಿಯ ಪ್ರತೀಕವಾಗಿ ಕಾಲನಾದದ ಸಂಕೇತವೆನಿಸಿದ್ದು ತ್ರಿಶೂಲ ಢಮರುಗವು ಶಿವಶಕ್ತಿಯ ಪ್ರತೀಕವಾಗಿ ತ್ರಿಗುಣ ಶಬ್ದಶಾಸ್ತ್ರದ ಸಂಕೇತ, ಮಾಲೆ ಕಮಂಡಲು ಬ್ರಹ್ಮಶಕ್ತಿಯ ಪ್ರತೀಕವಾಗಿ ಯೋಗಶಕ್ತಿ ಶಾಂತಿಯ ಸಂಕೇತವೆನಿಸಿವೆ. ದತ್ತರ ಬಳಿಯಿರುವ 4 ಶ್ವಾನಗಳು 4 ವೇದಗಳ ಪ್ರತೀಕವಾಗಿವೆ. ಭಕ್ತರ ಆತ್ಮಗಳ ಬೇಟೆಗಾರನಾದ ದತ್ತನ ಹಿಂದೆ ಸದಾ ಇರುವ ಸತ್ಯದ ಕಾವಲು ನಾಯಿಗಳಿವು ಎಂದು ಉಲ್ಲೇಖಿಸಲಾಗಿದೆ. ಚಂದ್ರಶೇಖರಭಾರತಿ ಸ್ವಾಮಿಗಳು ರಚಿಸಿದ ದತ್ತ ನವರತ್ನ ಮಾಲಿಕೆಯಿಂದಾಯ್ದ ಶ್ಲೋಕವೊಂದರಲ್ಲಿ,

> ನಾಕನಾಯಕ ಸಮರ್ಚಿತಪಾದಂ ಪಾಕ ಚಂದ್ರಧರಮೌಲ್ಯಾವತಾರಮ್
> ಶೋಕಬಂಧು ಸಮುಪೇಕ್ಷ್ಯ ಮಹಸ್ಕಂ ದತ್ತದೇವಮುನಿಶಂ ಕಲಯಾಮಿ ॥

ಅರ್ಥ : ಸ್ವರ್ಗದ ಒಡೆಯನಾದ ಇಂದ್ರನೇ ಈ ಗುರುವಿನ ಪಾದವನ್ನು ಪೂಜಿಸುವವನು. ಬ್ರಹ್ಮ, ವಿಷ್ಣು, ಶಿವ ಎಂಬ ತ್ರಿಮೂರ್ತಿಗಳು ಒಟ್ಟಾಗಿ ಈ ರೂಪದಲ್ಲಿ ತೋರಿಕೊಂಡರು. ಈ ಗುರುವಿನ ಮಹತಿ ಬೆಳದಿಂಗಳಂತೆ ಇಂಥ ದತ್ತಗುರುವನ್ನು ಎಡಬಿಡದೆ ಧ್ಯಾನಿಸುವೆನು.

### ಪಾದುಕೆ – ಔದುಂಬರ ವೃಕ್ಷ ಪೂಜೆ:

ದತ್ತ ಪೂಜೆಗಾಗಿ ಸಗುಣ ಮೂರ್ತಿಗಿಂತಲೂ ಪಾದುಕೆ ಅಥವಾ ಅತ್ತಿ ವೃಕ್ಷದ ಪೂಜೆ ಮಾಡುತ್ತಾರೆ. ಮೊದಲು ದತ್ತನ ಬಹಳಷ್ಟು ಮೂರ್ತಿಗಳು ಏಕಮುಖಿಯಾಗಿದ್ದವು. ಈಗ ಮೂರು ಮುಖದ ಮೂರ್ತಿಗಳು ಪ್ರಚಲಿತವಾಗಿವೆ. ಅವನ ಷಡ್ ಭುಜಗಳು ಜ್ಞಾನದ ಆರು ದಾರಿಗಳಾಗಿವೆ. ಅವನ ಬಳಿ ಇರುವ ಕಾಮಧೇನು ಗೋಮಾತೆಯು ಧರ್ಮದ ದ್ಯೋತಕವಾಗಿದೆ. ಅವನ ಬಳಿ ಇರುವ ಔದುಂಬರವೃಕ್ಷವು ಸಾರ್ವತ್ರಿಕ ಶಾಂತತೆಯ ಸಂಕೇತವಾಗಿದೆ.ದತ್ತಾತ್ರೇಯನ ಸಾನ್ನಿಧ್ಯವನ್ನು ಗುರು ಪಾದುಕೆ ಮತ್ತು ಔದುಂಬರ (ಅತ್ತಿ ಮರ) ವೃಕ್ಷದಲ್ಲಿ ನೆನೆದು ಪೂಜಿಸುವ ಅನೂಚಾನವಾಗಿ ಇಂದಿಗೂ ಮುಂದುವರೆದಿದೆ. ಶಾಂಡ್ಯೋಪ ಉಪನಿಷತ್ತಿನ ಪ್ರಕಾರ ಶ್ರೀದತ್ತನಿಗೆ ಎರಡು ಹಸ್ತಗಳಿವೆ. ಶ್ರೀವಾಸುದೇವಾನಂದ ಸರಸ್ವತಿ (ಟೆಂಬೆ ಮಹಾರಾಜ) ರ ಬಳಿ ಇದ್ದ ಶ್ರೀ ದತ್ತಾತ್ರೇಯನಿಗೂ ಎರಡು ಹಸ್ತಗಳು ಮತ್ತು ಏಕಮುಖಿ ಇದ್ದನು. ಆ ಎರಡು ಹಸ್ತಗಳು ವರ ಮತ್ತು ಅಭಯ ಪ್ರದಾಯಕವಾಗಿದ್ದುವು. ಆ ದತ್ತನು ಸಿದ್ಧಾಸನದಲ್ಲಿ ಕುಳಿತ್ತಿದ್ದನು.

ಶೈವ ಮತ್ತು ಶಾಕ್ತ ಪಂಥಗಳ ಮಹಾಗುರುವೂ ದತ್ತನೆ. ಗಂಡುಗೊಡಲಿಯ ವೀರ ಪರಶುರಾಮ ದತ್ತಾತ್ರೇಯರ ಆದ್ಯ ಶಿಷ್ಯರಲೊಬ್ಬ. ಅವನಿಗೆ ತ್ರಿಪುರಾ ರಹಸ್ಯವನ್ನು ಬೋಧಿಸಿದ . ಪುರಾಣ ಪ್ರಸಿದ್ಧ ಕ್ಷತ್ರೀಯ ವೀರನಾದ ಕಾರ್ತವೀರ್ಯಾರ್ಜುನನೂ ದತ್ತ ಶಿಷ್ಯನೇ. ಈ ಇಬ್ಬರೂ ಮಹಾ ಸಾಧಕರು. ಮಹಾಭಕ್ತರು, ಮಹಾವೀರರು ಸಹ, ಗುರುವಿನಿಂದ ವರದಿಂದ ಸೊಕ್ಕಿನ ನಡೆಗಳಿಂದಾಗಿ ಕಾರ್ತವಿರ್ಯಾರ್ಜುನನು ಪರಶುರಾಮನಿಂದ ಹತನಾದನು. ನಂತರ ಸ್ವತಃಪರಶುರಾಮನೂ ದತ್ತಾತ್ರೇಯನ ಬಳಿ ಶಿಷ್ಯತ್ವಕ್ಕೆ ತೊಡುಗುವುದು ಆತನ ಸರ್ವಸ್ವೀಕಾರ ಗುಣಕ್ಕೆ ನಿದರ್ಶನವಾಗಿದೆ. ದತ್ತಾತ್ರೇಯನ ಅವರ ಉಪಾಸನೆಯನ್ನು ಗುರುಗಳ ಸ್ವರೂಪದಲ್ಲಿಯೇ ಮಾಡಬೇಕು.

### ಪಾದುಕೆಗಳ ಮಹತ್ವ:

ಶ್ರೀದತ್ತ ಉಪಾಸನೆಯಲ್ಲಿ ಪವಿತ್ರ ಪಾದುಕೆಗಳ ಪೂಜೆಗೆ ಮಹತ್ವವಿದೆ. ಕಲಿಯುಗದಲ್ಲಿ ಶ್ರೀದತ್ತಾತ್ರೇಯನ ಪರಂಪರೆಯು ಪ್ರಭಾವಿಯಾಗಿ ಗೋಚರಿಸುತ್ತದೆ. ಮಹಾರಾಷ್ಟ್ರ, ಆಂಧ್ರ ಮತ್ತು ಉತ್ತರಭಾರತದಲ್ಲಿ ಹೆಚ್ಚು ಪ್ರಚಲಿತವಿರುವ ಗುರುಚರಿತ್ರೆ ಮತ್ತು ಪರಂಪರಾಗತವಾದ ಕಥೆಗಳಿಂದ ದತ್ತಾತ್ರೇಯನು ಮತ್ತೆರಡು ಅವತಾರಗಳೆತ್ತಿ ಭಕ್ತೋದ್ಧಾರ ಮಾಡಿದನೆಂದು ತಿಳಿದು ಬರುತ್ತದೆ. ಮೊದಲನೆಯ ಅವತಾರವಾದ ಶ್ರೀಪಾದವಲ್ಲಭರು ಎರಡನೆಯ ಅವತಾರವಾದ ಶ್ರೀನೃಸಿಂಹ ಸರಸ್ವತಿಗಳ ಮೊದಲಾದವರಿಂದ ಆಧುನಿಕ ಕಾಲದಲ್ಲಿ ದತ್ತ ಸಂಪ್ರದಾಯ ವಿಕಾಸ ಉಂಟಾಯಿತೆನ್ನಬಹುದು. ಉಪಾಸನೆ ಮತ್ತು ಸದ್ಗುಣಗಳ ಬಗ್ಗೆ ಅಪಾರ ಶ್ರದ್ಧೆಯೇ ನಿರ್ಭಯತೆಯ ಅಡಿಪಾಯ ಎಂಬ ಭಾವನೆಯ ಜಾಗೃತಿ ಈ ಪಂಥದ ಧ್ಯೇಯ.

### ಶ್ರೀ ದತ್ತ ಜಯಂತಿ :

ಮಾರ್ಗಶಿರ ಹುಣ್ಣಿಮೆಯಂದು ಮೃಗ ನಕ್ಷತ್ರದಲ್ಲಿ ಸಾಯಂಕಾಲ ದತ್ತನ ಜನ್ಮವಾಯಿತು. ಆ ದಿನ ದತ್ತನ ಜನ್ಮೋತ್ಸವವನ್ನು ಎಲ್ಲ ದತ್ತ ಕ್ಷೇತ್ರಗಳಲ್ಲಿ ಆಚರಿಸಲಾಗುತ್ತದೆ. ಅಂದು ಏಕಾಗ್ರತೆಯಿಂದ ದತ್ತನ ನಾಮಜಪಾದಿ ಉಪಾಸನೆಯನ್ನು ಮಾಡಿದರೆ ಶೀಘ್ರ ಫಲ ದೊರೆಯುತ್ತದೆ. ಭಗವಾನ್ ಶ್ರೀಧರ ಸ್ವಾಮಿಗಳೇ ಮೊದಲಾದ ಸಾಧು ಶ್ರೇಷ್ಠರು ಈ ದತ್ತ ಜಯಂತಿ ಉತ್ಸವವನ್ನು ವಿಶೇಷವಾಗಿ ಪ್ರಚಾರಕ್ಕೆ ತಂದಿದ್ದಾರೆ.

ಈ ಉತ್ಸವದ ಮೊದಲು ಏಳು ದಿನಗಳವರೆಗೆ ಗುರುಚರಿತ್ರೆಯ ಪಾರಾಯಣವನ್ನು ಮಾಡುವ ಪದ್ಧತಿಯಿದೆ. ಇದಕ್ಕೆ ಗುರುಚರಿತ್ರಸಪ್ತಾಹ ಎನ್ನುತ್ತಾರೆ. ಕೆಲವು ಬ್ರಾಹ್ಮಣ ಕುಟುಂಬದಲ್ಲಿ ಈ ಉತ್ಸವದ ನಿಮಿತ್ತ ದತ್ತ ನವರಾತ್ರಿಯನ್ನು ಪಾಲಿಸಲಾಗುತ್ತದೆ ಮತ್ತು ಅದು ಮಾರ್ಗಶಿರ ಶುಕ್ಲ ಅಷ್ಟಮಿಯಿಂದ ಆರಂಭವಾಗುತ್ತದೆ.





# ದೈತ್ಯ ತಾರತಮ್ಯ - ಒಂದು ವಿಶ್ಲೇಷಣೆ

ಡಾ|| ರಾಮಚಂದ್ರ ದಾಸ್ ಸಿ. ಜೆ.
94833 84584

**1. ಪೀಠಿಕೆ:**

ತಾರತಮ್ಯ ಎನ್ನುವುದು ಎಲ್ಲ ಕ್ಷೇತ್ರಗಳಲ್ಲಿಯೂ , ಅಂದರೆ ಧಾರ್ಮಿಕ , ಲೌಕಿಕ, ಸಾಮಾಜಿಕ ಹಾಗೂ ಇತರೆ ಕ್ಷೇತ್ರಗಳಲ್ಲಿ ಅನುಸರಿಸ ಬೇಕಾದಂತಹ ಮುಖ್ಯವಾದ ಒಂದು ಪ್ರಕ್ರಿಯೆ.ಇದನ್ನು ಅನುಷ್ಠಾನ ಮಾಡುವ ಕ್ರಿಯೆಯಲ್ಲಿ, ಅನೇಕ ಮಾನದಂಡಗಳನ್ನು ಆಧರಿಸಿ ಮಾಡಲು ಉಪಕ್ರಮಿಸಲಾಗುತ್ತಿದೆ.ಇದರಲ್ಲಿ ಮುಖ್ಯವಾಗಿ ಕೆಲವನ್ನು ಹೆಸರಿಸ ಬಹುದು.

ಅ) ಆರೋಹಣ ತಾರತಮ್ಯ
ಆ) ಅವರೋಹಣ ತಾರತಮ್ಯ
ಇ) ಗುಣ ತಾರತಮ್ಯ
ಈ) ಸಾಧನಾ ತಾರತಮ್ಯ
ಉ) ಅನುಕ್ರಮಣಿಕ (ಸಂಕ್ಷಿಪ್ತ) ತಾರತಮ್ಯ
ಊ) ಬೃಹತ್ತಾರತಮ್ಯ (ವಿವರ)
ಋ) ಅಣು ತಾರತಮ್ಯ
ೠ) ದೇವತಾ ತಾರತಮ್ಯ
ಎ) ದೈತ್ಯ ತಾರತಮ್ಯ

ಶ್ರೀ ವ್ಯಾಸರಾಯರು, ಮಧ್ವಮತ ತತ್ವದ ಇಡೀ ಸಾರವನ್ನು ಹೇಳು ವಾಗ :-

ಶ್ರೀ ಮನ್ಮಧ್ವಮತೇ ಹರಿಃ ಪರತರಃ ಸತ್ಯಂ ಜಗತ್ತತ್ವತೋ
ಭೇದೋ ಜೀವಗಣಾಃ ಹರೇರನುಚರಾಃ ನೀಚೋಚ್ಚ ಭಾವಂಗತಾಃ||
ಮುಕ್ತಿರ್ನೈಜ ಸುಖಾನುಭೂತಿರಮಲಾ ಭಕ್ತಿಶ್ಚ ತತ್ಸಾಧನಂ ||
ಹ್ಯಕ್ಷಾದಿ ತ್ರಿತಯಂ ಪ್ರಮಾಣಮಖಿಲಾಮ್ನಾಯೈಕ ವೇದ್ಯೋ ಹರಿ ||

ಎಂಬ ಶ್ಲೋಕದಲ್ಲಿ ಪೂರ್ಣವಾಗಿ ಹೇಳಿದ್ದಾರೆ.

ಇದರಲ್ಲಿ "ನೀಚೋಚ್ಚ ಭಾವಂಗತಾಃ ಹರೇರನುಚರಾಃ, ಭೇದೋ ಜೀವಗಣಾಃ..." ಎನ್ನುವಲ್ಲಿ ತಾರತಮ್ಯದ ವಿವಿಧತೆಯನ್ನು ಗಮನಿಸಬಹು ದಾಗಿದೆ.ಹೀಗಾಗಿ ತಾರತಮ್ಯದ ಬಗ್ಗೆ ಅರಿವು ಮೂಡಿಸಿಕೊಳ್ಳುವುದು ಉತ್ತಮ ಮಾರ್ಗವಾಗಿದೆ.

**2. ತಾರತಮ್ಯದ ಅರಿವು :**

ತಾರತಮ್ಯವನ್ನು ಅರಿಯುವುದರಿಂದ ಜ್ಞಾನ ಸಂಪಾದನೆ ಯಾಗುತ್ತದೆ.

ತಾರತಮ್ಯ ವಿಹೀನೋಯೆ ಹರಿಸರ್ವೋತ್ತಮೇ ತಿಚ|
ವದನ್ನಪಿ ಸವ್ವೆ ಪಾಪಿ ನ ಪ್ರೀಣಾತಿ ಹರಿಂ ಸ್ವಯಂ ||

ತಾರತಮ್ಯ ತೊರೆದು ಕರ್ಮಗಳನ್ನು ಮಾಡಿದರೆ ಸ್ವತಃ ಶ್ರೀಹರಿಯೇ ಪ್ರೀತನಾಗುವುದಿಲ್ಲ ಎಂದು ಗರುಡಪುರಾಣದಲ್ಲಿ ಉಕ್ತವಾಗಿದೆ. ವಿವಿಧ ಆಯಾಮಗಳಲ್ಲಿ ಈ ತಾರತಮ್ಯದ ವಿಷಯವನ್ನು ಅವಲೋಕಿಸಿದಾಗ ಆನಂದದ ಅನುಭೂತಿಯಾಗುತ್ತದೆ. ಸೃಷ್ಟಿಪ್ರಕರಣದಲ್ಲಿ ಪ್ರಾಕೃತ ವೈಕೃತ ಸೃಷ್ಟಿಯಲ್ಲಿ ದೇವತಾ ಸೃಷ್ಟಿಯ ( ನಂತರದಲ್ಲಿ) ಸಾಲಿನಲ್ಲಿ ಕೊನೆಯದಾದ, ದೈತ್ಯರ ಹಾಗೂ ತತ್ವಾಭಿಮಾನಿ ದೈತ್ಯರ ಸೃಷ್ಟಿಯು ಆಗುತ್ತದೆ. ಇದನ್ನು ಜೀವರ ಸಾಧನೆಯ ಅಂಗವಾಗಿ ಭಗವಂತನು ಮಾಡಿದ್ದಾನೆ.

ಪ್ರತಿಯೊಬ್ಬ ಜೀವಿಯು ಅನಂತಾನಂತ ಕರ್ಮಗಳ ರಾಶಿಯನ್ನು ಹೊತ್ತು ತಂದಿರುತ್ತಾನೆ. ಭಗವದ್ಭಕ್ತರು ಭಗವಂತನ ಉಪಾಸನೆಯಿಂದ ಸಂಚಿತ ಕರ್ಮ ಕಳೆದುಕೊಂಡು, ಆಗಾಮಿ ಕರ್ಮಕ್ಕೆ ತಡೆಯುಂಟು ಮಾಡುತ್ತಾ ಸಾಧನೆಗೈಯುತ್ತಾರೆ.

ಸಂಚಿತಾಗಾಮಿಗಳ ಕರ್ಮ ವಿ - |
ರಿಂಚಿ ಜನಕನ ಭಜಿಸೆ ಕೆಡುವುವು ||

ಎಂದು ಕರ್ಮ ವಿಮೋಚನ ಸಂಧಿಯಲ್ಲಿ ದಾಸರು ಹೇಳಿದ್ದಾರೆ.

ಆದರೆ ಸಾಮಾನ್ಯ ಜೀವಿಗಳಿಗೆ ಇದರ ಅರಿವು ಇಲ್ಲದ್ದರಿಂದ ಅವರು ಸಂಚಿತಾಗಾಮಿ ಕರ್ಮಗಳ ಅನುಭವವನ್ನು ಮಾಡಲೇಬೇಕಾಗುತ್ತದೆ.

ಸಂಚಿತ ಮತ್ತು ಪ್ರಾರಬ್ಧ ಕರ್ಮಗಳಲ್ಲಿ ಪುಣ್ಯರೂಪದ್ದಾಗಿದ್ದರೆ, ಸುಖವನ್ನು ಅನುಭವಿಸುವ ಮೂಲಕ ಕಳೆದುಕೊಳ್ಳುತ್ತಾರೆ. ಇದು ತತ್ವಾಭಿಮಾನಿ ದೇವತೆಗಳ ಮುಖಾಂತರ ಆಗುತ್ತದೆ. ಕರ್ಮಗಳು ಪಾಪ ರೂಪದ್ದಾಗಿದ್ದಲ್ಲಿ ಇದು ತತ್ವಾಭಿಮಾನಿ ದೈತ್ಯರ ಮುಖಾಂತರವೇ ಆಗ ಬೇಕು.

ನೀಚ ಕರ್ತವ್ಯ ದೈತ್ಯರು ಮಾಡಿಸುವರೆಂದು।
ಯೋಚನೆ ಮಾಡುವುದು ಸಿದ್ಧವೆನ್ನಿ॥

ಎಂದು ಪ್ರಮೇಯ ಭಾಗ ಸುಳಾದಿಯಲ್ಲಿ ಶ್ರೀವಿಜಯದಾಸರು ಶೃತಪಡಿಸಿದ್ದಾರೆ.

ನಮ್ಮ ದೇಹದ ಶುದ್ಧೀಕರಣಕ್ಕಾಗಿ ಸೃಷ್ಟಿಯಾಗಿರುವ ಮೂತ್ರ ಪಿಂಡ, ದೊಡ್ಡ ಕರಳು, ಸ್ವೇದಗ್ರಂಥಿ ಇತ್ಯಾದಿಗಳಿಂದ ನಮಗೆ ಉಪ ಕಾರವೇ ಆಗುತ್ತಿದೆ. ಅವು ಇಲ್ಲದಿದ್ದಲ್ಲಿ ದೇಹವು ಕೊಳೆತುನಾರುವಂತಾಗುತ್ತಿತ್ತು. ಅದು ನಮ್ಮ ಒಳ್ಳೆಯದಕ್ಕೆ, ಹಾಗೆಯೇ ತತ್ವಾಭಿಮಾನಿ ದೈತ್ಯರು, ಜೀವರ ದುಷ್ಕರ್ಮಗಳ ಬಲದಿಂದ ಪಾಪಕಾರ್ಯವನ್ನು ಮಾಡಿಸಿ ಹಿಂದಿನ ಕರ್ಮಗಳನ್ನು ಕಳೆಯುತ್ತಾರೆ. ಅದು ಸಂಚಿತ ಅಥವಾ ಪ್ರಾರಬ್ಧ ಆಗಿರಬಹುದು.

ದುರುಳರು ಅಲ್ಲಿ ವಾಸವಾಗಿಹರು।
ಚರಿತೆಯನ್ನು ಮಾಡುವರು ದೋಶವೃತ್ತಿ।
ಸುರಾಸುರರು ಬೆರೆದು ಪ್ರಬಲ ದುರ್ಬಲರಾಗಿ।
ತರತಮ್ಯದಿಂದಲಿ ವಿವಿಧ ಕರ್ಮಾ -
ಚರಣೆಯನ್ನು ಮಾಡಿಪರು ಕಾಲ ವ್ಯವಧಾನಗಳು॥

ಎಂದು ಉಪಾಸನಾ ಭಾಗ ಸುಳಾದಿಯಲ್ಲಿ ಶ್ರೀವಿಜಯದಾಸರು ಹೇಳಿದ್ದಾರೆ.

ಹಾಗಿದ್ದಲ್ಲಿ ತತ್ವಾಭಿಮಾನಿ ದೈತ್ಯರ ಉಪಾಸನೆಯನ್ನು ಮಾಡ ಬೇಕೆ! ಎಂಬ ಪ್ರಶ್ನೆಗೆ ಶ್ರೀವಿಜಯದಾಸರು ತಮೋಯೋಗ್ಯರ ತಾರತಮ್ಯ ಸುಳಾದಿಯಲ್ಲಿ,

ತಮೋಯೋಗ್ಯ ಜೀವರಾಶಿ ಅದರೊಳು ಗಣಸ್ಥರು।
ಅಮಿತವಾಗಿಪ್ಪರು ಲಿಂಗ ಸಹಿತ
ಶಮದಮೆಗಳು ಇಲ್ಲ ನಿಜರೂಪ ಬಲು ಕಪ್ಪು।
ಕ್ರಮದಿಂದ ದುಃಖಾತ್ಮರು ಕೇಳಿ
ತಮೋ ಯೋಗ್ಯರೊಳು ಶ್ರೇಷ್ಠ ಕಲಿಯೆನ್ನಿ॥
....................................
ಕ್ರಮದಿಂದಲೊಬ್ಬಲೊಬ್ಬರಧಿಕವೆನ್ನು।
ಸಮರಲ್ಲ ಇವರೊಳು ತಾರತಮ್ಯ ಉಂಟು।
.........................................
ಸೇರುವುದನಿಷ್ಠ ಪಾಪ ತದ್ಗಣಕೆ।
............................................
ಅಂಧಂತಮಸ್ಸಿಗೆ ಸಾಧನ ಸರ್ವದಲಿ।
ಕುಂದದೆ ಮಾಳ್ಪರು ವಿಜಯವಿಠಲ ಬಲ್ಲ॥

ಎಂದಿದ್ದಾರೆ. ಶ್ರೀಕನಕದಾಸರು "ಅಂಧಂತಮಸ್ಸಿನ್ನಾರಿಗೆ ..." ಎಂಬ ಕೃತಿಯಲ್ಲೂ ದೈತ್ಯರ ವಿಶ್ಲೇಷಣೆಯನ್ನು ಮಾಡಿದ್ದಾರೆ.

"ನಮೋ ನಮೋ ದೈತ್ಯ ವಿಮರ್ದನಾಯ" ಎಂದು ಭಗವಂತನನ್ನು ಸ್ತೋತ್ರ ಮಾಡಲಾಗಿದೆ.

ವಿಷ್ಣು ಸ್ಮೃತಿ ವಿಹೀನಾತು ಪೂಜಾಸ್ಯಾದಾಸುರೀ ಮತಾ।
ಗೃಹ್ಣಂತಿ ದೇವತಾ ನಯತಾಂ ತತಃ ಸ್ಯಾದ್ ದ್ವೇಶ ವಿಪ್ಲವಃ॥

ವಿಷ್ಣು ಸ್ಮೃತಿ ರಹಿತನಾಗಿ ಯಾವುದೇ ಪೂಜೆಯನ್ನು ಮಾಡಿದರೂ ಸದ್ಗತಿಯಾಗದೆ, ಅಸುರಿ ಪೂಜೆಯೆಂದಾಗುತ್ತದೆ.

ತೇಷಾಂ ದುಃಖಾನಿ ವಿಂದಂತಿ ಗರ್ಭೇತಿ ಹ್ಯಧಿಕಂ ಖಿಗ।
ದುಃಖಾನುಭವ ಕಾಲೇತು ವದಂತ್ಯೇವ ಖಗಾಧಿಪ।
ಹರಿಣಾ ಪಾಪರೂಪೇಣ ಚಾಸ್ಮಿನ್ ಗರ್ಭೇನಿಪಾತ್ಯಹಿ।
ಸರ್ವಥಾ ಬಾಧ್ಯತೇ ಚೇತ್ಥಂ ತಸ್ಮಾತ್ ಪಾಪಿ ಸ ವಿವಹಿ
ನಿರ್ಮುಕ್ತೋಽಹಂ ಯದಾ ದುಃಖಾತ್ ತದಾ ವಿಷ್ಣುಂ ಮಮದ್ರುಹಮ್।
ಹನಿಷ್ಯಾಮಿ ನ ಸಂದೇಹೋ ನಾತ್ರ ಕಾರ್ಯ ವಿಚಾರಣಾ।
ಇತ್ಯಾದಿ ಚಿಂತನಂ ತೇಷಂ ಜ್ಞಾನಂ ಚಾಸ್ಯೇವ ಸರ್ವಥಾ॥

(ಮುಂದುವರೆಯುತ್ತದೆ)



## ಡಿಸೆಂಬರ್ ತಿಂಗಳ

# ರಾಶಿ ಫಲಗಳು




ಮೂಲ- ಬ್ರಹ್ಮಶ್ರೀ ತಂಗಿರಾಲ ವೆಂಕಟಕೃಷ್ಣ ಪೂರ್ಣಪ್ರಸಾದ್ ಸಿದ್ಧಾಂತಿ

ಅನುವಾದ- ಕೆ.ಎನ್.ಎಸ್


**ಮೇಷ**

ನೀವು ವೃತ್ತಿ ಪರ ಪ್ರಗತಿಗೆ ಅನೇಕ ಅವಕಾಶಗಳನ್ನು ಪಡೆಯುವಿರಿ.ಆದಾಯ ಹಾಗೂ ಲಾಭವನ್ನು ಗಳಿಸುವಿರಿ. ದೂರ ಸ್ಥಳಗಳಿಗೆ ಭೇಟಿ ನೀಡುವಿರಿ. ಪ್ರಶಾಂತ ಜೀವನವನ್ನು ಆಸ್ವಾದಿಸುವಿರಿ. ನ್ಯಾಯ ಪರವಾದ ಸಮಸ್ಯೆಗಳಿಗೆ ಸತ್ವರವಾದ ಪರಿಷ್ಕಾರ ಸಿಗಲಿದೆ. ನಿರ್ಮಾಣ ಕಾರ್ಯದಲ್ಲಿ ಬುನಾದಿ ಬಗ್ಗೆ ಗಮನ ಅಗತ್ಯ. ಚರ್ಮವ್ಯಾಧಿ ಆಕ್ರಮಿಸುವ ಅವಕಾಶ ವಿದೆ. ಸುಬ್ರಮಣ್ಯ ಆರಾಧನೆಯನ್ನು ಮಾಡಿರಿ.ನೀವು ಬಹಳ ಮಾನಸಿಕ ನೆಮ್ಮದಿ ಹಾಗೂ ಉಪ ಶಮನವನ್ನು ಅನುಭವಿಸಲಿದ್ದೀರಿ.

**ವೃಷಭ**

ನಿರಾಶೆ - ಹತಾಶೆಗಳನ್ನು ತೊರೆದು ಕೈ ಹಾಕಿದ ಕೆಲಸವನ್ನು ನಿರ್ವಿಘ್ನವಾಗಿ ನೆರವೇರಿ ಸುವಿರಿ. ಸಂಘದಲ್ಲಿ ಗೌರವ ವೃದ್ಧಿಯಾಗಲಿದೆ. ವೃತ್ತಿರಂಗದಲ್ಲಿ ವ್ಯವಹಾರಗಳಲ್ಲಿ ಆದಾಯದೊಂದಿಗೆ ಮನೆ ಖರ್ಚುಗಳು ಜಾಸ್ತಿಯಾಗಲಿವೆ. ಉದ್ಯೋಗ ಜೀವನವು ಸವಾಲುಗಳನ್ನು ತರಲಿದೆ. ವಾಹನ ಚಾಲಕರು ಅತಿ ಜಾಗರೂಕರಾಗಿರಬೇಕು. ಈ ಸಮಯದಲ್ಲಿ ಹಲವು ಅನಾವಶ್ಯಕ ಖರ್ಚುಗಳು ಹೆಚ್ಚುವ ಅವಕಾಶವಿದೆ. ವಿನೂತನ ವ್ಯಾಪಾರಿಗಳು ಸ್ವಂತವಾಗಿ ಪ್ರಾರಂಭಿಸುವುದು ಅಪಾಯಕರ.

**ಮಿಥುನ**

ಆಕಸ್ಮಿಕ ಧನಲಾಭವು ನಿಮ್ಮನ್ನು ಸೇರಲಿವೆ. ನೀಚಕಾರ್ಯಶಕ್ತಿ.ಪರಪೀಡೆ, ಇತರೆ ದೇಶ ಪ್ರಯಾಣ ಸಂಚಾರಗಳ ಅವಕಾಶಗಳು ಉಂಟಾಗುತ್ತದೆ. ಉದ್ಯೋಗಸ್ಥರಿಗೆ ಹಿರಿಯ ಅಧಿಕಾರಿಗಳಿಂದ ಒತ್ತಡ, ಮೊಣಕಾಲು ಕೀಲು ಬಾಧೆ, ಪ್ರಯಾಣದಲ್ಲಿ ಸಮಸ್ಯೆಗಳು , ಪ್ರೇಮ ವ್ಯವಹಾರಗಳಲ್ಲಿ ಅಸಂತೃಪ್ತಿ ಸಹಾ ಬರುತ್ತದೆ. ಈ ಸಮಯದಲ್ಲಿ ಅಧಿಕಾರ ಇಲವೇ ಪ್ರಭುತ್ವದಿಂದ ಸ್ವಲ್ಪ ಗುರುತಿಸುವಿಕೆ ಅಥವಾ ಪ್ರತಿಫಲ ಆಗಲಿದೆ.

**ಕರ್ಕಾಟಕ**

ಗೃಹಸ್ಥಿತಿ ಅನುಕೂಲವಾಗಿದೆ. ಹಿರಿಯರ ಆಸ್ತಿ ಒದಗಿ ಬರಲಿದೆ. ಭೂಮಿ ಖರೀದಿ ಅಥವಾ ಭೂಮಿ ಕುರಿತಾದ ಆದಾಯ ವೃದ್ಧಿಸಲಿದೆ. ಉದ್ಯೋಗಸ್ಥರು ದೂರ ಪ್ರಯಾಣ ಮಾಡಬೇಕಾಗಿ ಬರುತ್ತದೆ. ವಿದ್ಯಾರ್ಥಿಗಳಿಗೆ ಅನುಕೂಲಕರ ಆರೋಗ್ಯ ವಿಷಯಗಳಲ್ಲಿ ಪ್ರತಿಫಲ ದೊರೆಯಲಿದೆ. ಸಂತೋಷಕರ ಹಾಗೂ ಅದೃಷ್ಟವತ್ತಾದ ಕಾಲ. ನೀವು ಮಾಡುವ ಪ್ರಯತ್ನ ಗಳು ಜಯಿಸಲಿವೆ. ವ್ಯಾಜ್ಯ ವಿಷಯಗಳಲ್ಲಿ ಸಹ ಉಪಶಮನ ದೊರೆಯಲಿದೆ ನಿಮ್ಮ ಸ್ಥಾನಮಾನ ಹಾಗೂ ಆದಾಯ ಬೆಳೆಯಲಿವೆ. ವ್ಯಾಪಾರ ಪರ ಪರ್ಯಟನೆ ಫಲಕಾರಿಯಾಗಲಿದೆ.

**ಸಿಂಹ**

ವ್ಯವಸಾಯದಾರರಿಗೆ ಹಿಂದಿಗಿಂತಲೂ ಬೆಳೆಯು ವಿಶೇಷ ಲಾಭವನ್ನು ತರಲಿದೆ. ಮಾನಸಿಕ ಬಲಹೀನತೆ ಶಿರೋಬಾಧೆ ನಿಶ್ಶಕ್ತಿಗಳು ಉಂಟಾಗಲಿವೆ. ಕೆಟ್ಟ ಸಹವಾಸ ಗಳಿಂದ ದೂರವಿರುವುದು ಉತ್ತಮ ವಿದ್ಯಾರ್ಥಿಗಳು ಈ ವಿಷಯದಲ್ಲಿ ಮತ್ತಷ್ಟು ಕೃಷಿ, ಶ್ರದ್ಧೆ ಮಾಡಬೇಕು. ಇದು ಪರೀಕ್ಷೆಯಲ್ಲಿ ಜಯ,ಮತ್ತಷ್ಟು ವಿನೋಧ ಅವಕಾಶಗಳು, ಕಲ್ಪ ನಾತೀತ ಲಾಭಗಳನ್ನು ತರಲಿವೆ. ಈ ಕಾಲದಲ್ಲಿ ನಿಮ್ಮ ಸ್ನೇಹಿತರು, ಸಲಹಾದಾರರು, ಮತ್ತು ಹಿರಿ ಯರು ನಿಮಗೆ ಬಲವನ್ನೀಯುತ್ತಾರೆ.

**ಕನ್ಯ**

ಮನಃಶಾಂತಿ ಧೈರ್ಯ ವೃದ್ಧಿ, ಗೌರವ, ಶರೀರಸೌಖ್ಯ, ಸ್ತ್ರೀಸೌಖ್ಯ , ವೃತ್ತಿ ಉದ್ಯೋಗಗಳ ಅಭಿವೃದ್ಧಿ, ಮೇಲಿನ ಅಧಿಕಾರಿಗಳ ಗೌರವ - ಸನ್ಮಾನಗಳ ಕೆಳವರ್ಗದವರಿಂದಲೂ ಆದರಗಳುಂಟಾಗಲಿವೆ. ಯತ್ನ ಕಾರ್ಯಸಿದ್ಧಿ, ಮತ್ತು ಸಂಪದ, ಆಸ್ತಿ ಹಾಗೂ ಅವಕಾಶ ಗಳನ್ನು ಬೆಳಸಲಿದೆ. ಇದು ಸಾಂಘಿಕತೆ, ಬಂಧುಗಳೊಂದಿಗೆ ಸ್ನೇಹ, ಮತ್ತು ಮನೋಬಲವನ್ನು ಕೂಡಾ ಪ್ರೋತ್ಸಾಹಿಸಲಿದೆ ಆಸ್ತಿ, ಹೆಸರು ಹಾಗೂ ಕೀರ್ತಿಯಿಂದ ಒಳ್ಳೆಯ ಆದಾಯ ಕುಟುಂಬದಲ್ಲಿ ಸಂತೋಷ , ಉತ್ತಮ ಆರೋಗ್ಯ ಮತ್ತು ಭೌತಿಕ ಸುಖಗಳು ಉಂಟಾಗುತ್ತವೆ. ಅರ್ಧಾಂಗಿ ಹಾಗೂ ಮಕ್ಕಳ ಬಗ್ಗೆ ಶ್ರದ್ದೆಯುಂಟಾಗಲಿದೆ.

**ತುಲಾ**

ಶತ್ರುಗಳ ವಿಷಯದಲ್ಲಿ ಬಹಳ ಜಾಗರೂಕತೆ ಅಗತ್ಯ. ವ್ಯಸನಗಳಿಗೆ ಶರಣಾಗುವಿಕೆ, ಈ ರಾಶಿಯಲ್ಲಿ ಎಲ್ಲರಿಗೂ ಪರಿಣಾಮವಾಗದಿದ್ದರೂ, ಮೇಲಿನವರಿಗೆ ಪ್ರತಿಫಲ ವಾಗಲಿದೆ. ಪ್ರಮೋಷನ್ ಅಲ್ಲದೇ ಸಂಬಳ ಹೆಚ್ಚಳವಾಗುವುದನ್ನು ಕಾಣುವಿರಿ. ಪೂರ್ಣ ಆನಂದ, ಆರೋಗ್ಯ ಮತ್ತು ಸಂಪದಗಳು ವೃದ್ಧಿಸುವ ಕಾಲ. ನಿಮ್ಮ ಬಂಧುಗಳು, ಕುಟುಂಬ ಸದ್ಯಸರು ಮತ್ತು ಸ್ನೇಹಿತರು ನಿಮ್ಮ ನಿಲುವನ್ನು ಗುರುತಿಸುವರು ಹಾಗೂ ನಿಮಗೆ ಗೌರವ ನೀಡುವರು.

**ವೃಶ್ಚಿಕ**

ಪ್ರಸ್ತುತ ಆರೋಗ್ಯ ವಿಷಯದಲ್ಲಿ ಶ್ರದ್ಧೆ ಅಗತ್ಯ. ಸ್ವಂತ ಬುದ್ಧಿಯಿಂದ ಉಪಕ್ರಮಿ ಸಲ್ಪಡುವ ಕಾರ್ಯಗಳು ಅನುಕೂಲಕರವಾಗಿರುತ್ತದೆ. ಧನದ ವಿಷಯದಲ್ಲಿ ಲೋಪವಿರದು. ಇತರರೊಂದಿಗೆ ಸಂಭಾಷಿಸುವ ಸಮಯದಲ್ಲಿ ಬಹಳ ಜಾಗ್ರತೆ ಯಿರಲಿ. ನೀವು ರತ್ನ ಹಾಗೂ ಆಭರಣಗಳನ್ನು ಖರೀದಿಸುವ ಅವಕಾಶಗಳಿವೆ. ನೀವು ಹೊಸ ಬಟ್ಟೆ ಉಪಕರಣಗಳನ್ನು ಖರೀದಿಸುವಿರಿ ಸಂಗೀತದಲ್ಲಿ ನಿಮ್ಮ ಅಭಿರುಚಿ ಬೆಳೆಲಿದೆ. ನೀವು ಕುಟುಂಬದೊಂದಿಗೆ ವಿನೋದ ಅವಕಾಶಗಳನ್ನು ಪೂರೈಸುವಿರಿ.

**ಧನಸ್ಸು**

ದೃಢ ಸಂಕಲ್ಪದಿಂದ ಕಾರ್ಯಾರಂಭಮಾಡುವಿರಿ. ರಾಜಕೀಯದಿಂದ ಇತರರನ್ನು ಆಳಿ, ಕೆಲಸಗಳನ್ನು ಮಾಡಿಸಿ ಕೊಳ್ಳುವಿರಿ. ಇತರರಿಗೆ ಉಪಕಾರಿಯಾಗುವಿರಿ. ಇದು ಸಂಪತ್ತು ಆನಂದ ವಿದ್ಯೆ, ವಿಜಯ, ವಿವಾಹ ಅವಕಾಶ ಗಳಲ್ಲಿ ವಿನೋದ ಹಾಗೂ ವ್ಯಾಪಾರದಲ್ಲಿ ಸಹಾ ಪ್ರಗತಿಯುಂಟು ಮಾಡುವುದು. ವ್ಯಕ್ತಿಗತವಾಗಿ ಬಹಳಾ ಸಂಘಟನೆಗಳು ನಿಮಗೆ ಅನುಕೂಲಕರವಾಗಿದೆ. ನಿಮಗೆ ಇತರರಿಂದ ಅನುಕೂಲವಾಗಲಿದೆ. ಇದು ನಿಮ್ಮ ಆಸ್ತಿಯನ್ನೊಂದೇ ಅಲ್ಲದೇ ನಿಮ್ಮ ಕೈ ಹಿಡಿದ ಕಾರ್ಯಕ್ಕನುಗುಣವಾಗಿ ಸಾಕಷ್ಟು ಪ್ರಶಂಸೆ ಹಾಗೂ ಪ್ರಮೋಷನ್ ಸಹಾ ಹೊಂದುತ್ತೀರಿ. ಇವೆಲ್ಲಾ ಆರ್ಥಿಕ ಉನ್ನತಿಗೆ ದಾರಿ ದೀಪವಾಗಲಿವೆ. ಆರೋಗ್ಯವು ಉತ್ತಮವಾಗಿರಲಿದೆ.

**ಮಕರ**

ಸರ್ವತ್ರ ವಿಜಯ ಹೂಡಿಕೆಗಳು ಅಧಿಕ ಲಾಭವನ್ನೀಯಲಿವೆ. ಧನಾದಾಯ ಬೆಳೆಯ ಲಿದೆ. ನಿಮ್ಮ ವೃತ್ತಿಯಲ್ಲಿ ಬದ್ಧತೆಯನ್ನು ತೋರುವಿರಿ. ಆತ್ಮ ಸಂತೃಪ್ತಿ ಬೆಳೆಯಲಿದೆ. ಸಮಸ್ತ ದೋಷಗಳು ತೊಲಗಿ ಐಶ್ವರ್ಯಗಳು ನಿಮ್ಮನ್ನುವರಿಸುತ್ತದೆ. ದೈವಬಲ ದಿಂದ ಕಾರ್ಯಸಿದ್ಧಿಯುಂಟಾಗಲಿದೆ.ಗೃಹ ವಾತಾವರಣ ಆನಂದಮಯವಾಗಿರುತ್ತದೆ. ವಿದ್ಯಾರ್ಥಿಗಳಿಗೆ ಸ್ಪರ್ಧಾತ್ಮಿಕ ಪರೀಕ್ಷೆಗಳು ಒದಗಿ ಬಂದು ಉದ್ಯೋಗಗಳಿಗೆ ಆಯ್ಕೆಯಾಗುವಿರಿ. ಗೌರವ ಪ್ರದವಾದ ಜೀವನ ಉಂಟಾಗುತ್ತದೆ

**ಕುಂಭ**

ಜೀವನದಲ್ಲಿ ಸಾನುಕೂಲ ತಿರುಗಿ ಬರಲಿದೆ ಸಂಪತ್ತು ಹಾಗೂ ಲಾಭದಲ್ಲಿ ಗಣ ನೀಯವಾದ ಬೆಳವಣಿಗೆ ಕಾಣಬರಲಿದೆ. ನೀವು ಇತರರನ್ನು ಈ ವೇಳೆಯಲ್ಲಿ ನಿಮ್ಮ ಅದ್ಬುತವಾದ ಪ್ರವಚನ ಸಾಮರ್ಥ್ಯದಿಂದ ಪ್ರಭಾವಿಸಿ ಸೆಳೆದುಕೊಳ್ಳುವಿರಿ ಕುಟುಂಬದೊಂದಿಗೆ ನಿಮ್ಮ ಸಂಬಂಧ ಸಾಕಷ್ಟು ನಿಕಟಗೊಳ್ಳುತ್ತದೆ. ಆರೋಗ್ಯವೂ ಸಹಾ ವೇಗ ದಿಂದ ಸುಧಾರಿಸಿದೆ. ಅಧಿಕಾರವಲಯ ಹಿಗ್ಗಲಿದೆ. ಉದ್ಯೋಗಿಗಳಿಗೆ ಪ್ರಮೋಷನ್‌ಗೆ ಅನು ಕೂಲಕರ ಸಮಯ. ನಿಮ್ಮ ವೃತ್ತಿ ವ್ಯಾಪಾರಗಳು ಅನುಕೂಲಕರವಾಗುತ್ತವೆ. ಗ್ರಹಸ್ಮಿತಿ ಅನು ಕುಲಕರವಾಗಿದೆ.

**ಮೀನ**

ನೀವು ಆಧ್ಯಾತ್ಮಕದೆಡೆಗೆ ಹೆಚ್ಚು ಆಸಕ್ತಿ ತೋರುವಿರಿ. ಕುಟುಂಬದಲ್ಲಿ ಹಿರಿಯರನ್ನು ಗೌರವಿಸಿ ಅವರ ಆಶೀರ್ವಾದವನ್ನು ಪಡೆಯುವುದು, ಕುಲಾರಾಧನೆ ಜರುಗು ವುದು. ದೈ ಬ್ರಾಹ್ಮಣ ಭಕ್ತಿ, ಗ್ರಾಮದೇವತೆಗಳನ್ನು ಸಂದರ್ಶಿಸುವುದು, ಧನಧಾನ್ಯಾ ಗಮನ, ಭೌತಿಕ ಸುಖಗಳನ್ನು ಅನುಭವಿಸುವಿರಿ. ನಿಮ್ಮ ಪ್ರಯತ್ನಗಳು ಒಳ್ಳೆಯ ಫಲಿತಾಂಶ ಗಳನ್ನು ನೀಡುತ್ತವೆ. ನೀವು ಸಾಧಿಸುವ ವಿಜಯ ಮತ್ತಷ್ಟು ಶಕ್ತಿ ಮತ್ತು ವಿಶ್ವಾಸವನ್ನು ತರಲಿದೆ. ಈ ಸಮಯದಲ್ಲಿ ನಿಮ್ಮ ನೆಮ್ಮದಿ ಹಾಗೂ ಆರೋಗ್ಯ ಚೆನ್ನಾಗಿರುತ್ತದೆ.

# ಶಾಂತಿ ಗ್ರಾಮದ ವರದ ಯೋಗಾ - ಭೋಗ ನರಸಿಂಹ ಮತ್ತು ಕೇಶವ ದೇವಾಲಯಗಳು

- ಕೆಂಗೇರಿ ಚಕ್ರಪಾಣಿ
94483 86886


ಹಾಸನ ಜಿಲ್ಲೆ, ಅದೇ ತಾಲ್ಲೂಕು,ಬೆಂಗಳೂರು - ಹಾಸನ ರಸ್ತೆಯಲ್ಲಿ ಹಾಸನದಿಂದ ಸುಮಾರು ಹದಿಮೂರು ಕಿ.ಮೀ.ದೂರದಲ್ಲಿ ಶಾಂತಿಗ್ರಾಮವಿದೆ. ಪ್ರಸ್ತುತ ಗ್ರಾಮವನ್ನು ಹೊಯ್ಸಳ ವಿಷ್ಣುವರ್ಧನನ ಪಟ್ಟಮಹಿಷಿ ಶಾಂತಲಾದೇವಿಯು ನಿರ್ಮಿಸಿರುವುದಾಗಿ ತಿಳಿದು ಬರುತ್ತದೆ. ಇಲ್ಲಿ ಹೊಯ್ಸಳರ ಕಾಲಕ್ಕೆ ಸೇರುವ ಶ್ರೀಕೇಶವ ದೇವಾಲಯ, ಶ್ರೀ ವರದಯೋಗಾ ನರಸಿಂಹ ದೇವಾಲಯ, ಶ್ರೀವೀರಭದ್ರ ದೇವಾಲಯ ಹಾಗೂ ಶ್ರೀಧರ್ಮೇಶ್ವರ ದೇವಾಲಯಗಳಿವೆ.

ಶಾಂತಿಗ್ರಾಮದಲ್ಲಿರುವ ವರದ ಯೋಗಾನರಸಿಂಹ ದೇವಾಲಯವನ್ನು ಹೊಯ್ಸಳ ವೀರಬಲ್ಲಾಳನ ಆಸ್ಥಾನ ಗುರು ಅಚಲಪ್ರಕಾಶ ಸ್ವಾಮಿಗಳು ದಿನಾಂಕ 15-09-1215 ರಲ್ಲಿ ನಿರ್ಮಿಸಿರುತ್ತಾರೆ.

ಅಚಲಪ್ರಕಾಶರ ಗುರುಗಳು ಪರಮಹಂಸರು, ಅಚಲ ಪ್ರಕಾಶರು ಬಹು ದೊಡ್ಡ ಪ್ರಕಾಂಡ ಪಂಡಿತರಾಗಿದ್ದರು. ಅವರು ತಂತ್ರದಲ್ಲಿ, ಗಣಿತದಲ್ಲಿ, ಮನುಮತಾಗಮದಲ್ಲಿ ವಾಸ್ತುವಿದ್ಯೆಯಲ್ಲಿ ಸಾಹಿತ್ಯದಲ್ಲಿ ಈತನನ್ನು ಮೀರಿಸುವವರಿರಲಿಲ್ಲ. ಯಮನಿಯಮ ಪ್ರಾಣಾಯಾಮದಲ್ಲಿ ಪದ್ಮಸ್ವಸ್ತಿಕಾಸನದಲ್ಲಿ ಜಿತಕಾಯ ಪರಿಶ್ರಮದಲ್ಲಿ ಅತ್ಯಂತ ಉತ್ಕೃಷ್ಟ ಸಾಧನೆಯನ್ನು ಈ ಮುನಿಯು ಹೊಂದಿದ್ದರೆಂದು ನರಸಿಂಹ ದೇವಾಲಯದಲ್ಲಿರುವ ಶಾಸನ ದಿಂದ ತಿಳಿದು ಬರುತ್ತದೆ. ಈ ಮುನಿಯು ವೀರಬಲ್ಲಾಳನು ಕೊಟ್ಟ ಹೊನ್ನಿನಲ್ಲಿ ನೆರೆಯ ಹಿರಿಯೂರ ಹಳ್ಳಿಯನ್ನು ಕೊಂಡು ಅದರಲ್ಲಿ ಬರುವ ಆದಾಯವನ್ನು ಶಾಂತಿಗ್ರಾಮದ ವರದ ನರಸಿಂಹನಿಗೆ ದತ್ತಿ ಬಿಟ್ಟಿರುವರು. ಎರಡನೆಯ ಬಲ್ಲಾಳನ ತರುವಾಯ ಆತನ ಮಗ ಎರಡನೆಯ ನರಸಿಂಹನೂ ಸಹಾ ನರಸಿಂಹ ದೇವಾಲಯಕ್ಕೆ ಶಾಂತಿಗ್ರಾಮದ ಸಿದ್ದಾಯದಲ್ಲಿ

25

ಕರ್ನಾಟಕದ ವೈಷ್ಣವ ದೇವಾಲಯಗಳು





ಮೂವತ್ತು ಗದ್ಯಾಣವನ್ನು ಸ್ವಾಮಿಯ ಪೂಜಾ ಕಾರ್ಯಕ್ಕೆ ನೀಡಿರುವುದು ತಿಳಿದು ಬರುತ್ತದೆ.

ಶಾಂತಿಗ್ರಾಮದ ಶಾಸನದಲ್ಲಿ ವರದ ಯೋಗಾನರಸಿಂಹನೆಂದು ಕರೆದಿರುವ ಯೋಗಾನರಸಿಂಹ ಮೂರ್ತಿಯು ತನ್ನ ವಿಶೇಷ ಮೂರ್ತಿಶಿಲ್ಪದ ಲಕ್ಷಣದಿಂದ ಗಮನ ಸೆಳೆಯುತ್ತದೆ. ಸಾಮಾನ್ಯವಾಗಿ ನರಸಿಂಹ ಶಿಲ್ಪಗಳಲ್ಲಿ ಬಲಗೈನಲ್ಲಿ ಚಕ್ರ ಹಾಗೂ ಎಡಗೈನಲ್ಲಿ ಶಂಖುವಿರುತ್ತದೆ. ಆದರೆ ಇಲ್ಲಿರುವ ಯೋಗಾನರಸಿಂಹನು ಬಲಗೈಯಲ್ಲಿ ಶಂಖು ಮತ್ತು ಎಡಗೈಯಲ್ಲಿ ಚಕ್ರವನ್ನು ಧರಿಸಿರುತ್ತಾನೆ. ಆದ್ದರಿಂದ ನರಸಿಂಹನನ್ನು ವರದ ಯೋಗಾನರಸಿಂಹ ನೆಂದು ಕರೆಯಲಾಗಿದೆ.

ನರಸಿಂಹ ದೇವಾಲಯವು ಗರ್ಭಗುಡಿ, ಅಂತರಾಳ, ನವರಂಗ ಮತ್ತು ಮುಖ ಮಂಟಪಗಳನ್ನೊಳಗೊಂಡಿದೆ. ದೇವಾಲಯದ ಸುತ್ತಲೂ ವಿಶಾಲವಾದ ಪ್ರಾಕಾರವಿದೆ. ಈ ದೇವಾಲಯದ ಮತ್ತೊಂದು ವಿಶೇಷವೇನೆಂದರೆ ಮುಖ ಮಂಟಪದ ಭುವನೇಶ್ವರಿಯಲ್ಲಿ ನವನಾರಸಿಂಹರನ್ನು ಬಿಡಿಸಿರುವುದು ಹಾಗೂ ಅಂತರಾಳದ ಬಾಗಿಲುವಾಡದಲ್ಲಿಯೂ ಸಹ ಒಂಬತ್ತು ಭಂಗಿಯ ನರಸಿಂಹ ಮೂರ್ತಿಗಳಿವೆ. ಈ ರೀತಿಯ ನರಸಿಂಹ ದೇವಾಲಯ ಶಾಂತಿಗ್ರಾಮದಲ್ಲಿ ಅಲ್ಲದೆ ಕರ್ನಾಟಕದಲ್ಲಿ ಬೇರೆಲ್ಲಿಯೂ ಕಂಡು ಬರುವುದಿಲ್ಲ. ಶ್ರೀವರದ ಯೋಗಾನರಸಿಂಹನ ದೇವಾಲಯದಲ್ಲಿ ನರಸಿಂಹ ಜಯಂತಿಯ ದಿನ ವಿಶೇಷ ಪೂಜೆಗಳು ಬಹುಪಾಂಗಿತವಾಗಿ ನೆರವೇರುತ್ತದೆ. ಸ್ವಾಮಿಯ ವಾರ್ಷಿಕ ಬ್ರಹ್ಮ ರಥೋತ್ಸವವು ಫೆಬ್ರವರಿ ತಿಂಗಳಲ್ಲಿ, ಅಂದರೆ ಮಾಘಕೃಷ್ಣ ದ್ವಿತೀಯಾದಲ್ಲಿ ಬಹು ವಿಜೃಂಭಣೆಯಿಂದ ಜರುಗುವುದು. ಎಂಟುದಿನ ಮೊದಲೇ ಆರಂಭ ವಾಗುವ ರಥೋತ್ಸವ ಸೇವೆಗಳು ಅದ್ದೂರಿಯಾಗಿ ನಡೆದು,ಕೊನೆಗೆ ಪೂರ್ಣಾ ಹುತಿಯ ನಂತರ ಧ್ವಜಾವರೋಹಣದೊಂದಿಗೆ ಮುಕ್ತಾಯವಾಗುತ್ತದೆ. ಶಾಂತಿಗ್ರಾಮದ ಮತ್ತೊಂದು ಪ್ರಮುಖ ದೇವಾಲಯ ಶ್ರೀಚನ್ನಕೇಶವ ದೇವಾಲಯವಾಗಿರುತ್ತದೆ. ಈ ದೇವಾಲಯವು ಎತ್ತರವಾದ ದಿಣ್ಣೆಯ ಮೇಲಿದ್ದು ಪ್ರವೇಶಿಸಲು ಮೆಟ್ಟಿಲುಗಳಿವೆ. ದೇವಾಲಯವು ಗರ್ಭಗೃಹ, ಅಂತರಾಳ, ನವ ರಂಗ ಮತ್ತು ಮುಖಮಂಟಪಗಳನ್ನು ಹೊಂದಿರುತ್ತದೆ. ಗರ್ಭಗುಡಿಯಲ್ಲಿ ಸುಮಾರು ಆರು ಅಡಿ ಎತ್ತರದ ಶ್ರೀಚನ್ನಕೇಶವನ ಸೊಗಸಾದ ಮೂರ್ತಿಯಿದೆ. ಶಂಖ,ಚಕ್ರ,ಗದಾ,ಪದ್ಮಧಾರಿಯಾದ ಚನ್ನಕೇಶವನು ಸೌಮ್ಯವದನನಾಗಿದ್ದು, ನೋಡಲು ಮನೋಹರವಾಗಿರುವನು.

ಶಾಂತಿಗ್ರಾಮದ ಊರ ಹೊರವಲಯದಲ್ಲಿ ಪೂರ್ವಾಭಿಮುಖವಾಗಿ ಧರ್ಮೇಶ್ವರ ದೇವಾಲಯವಿದೆ. ಪ್ರಸ್ತುತ ದೇವಾಲಯವನ್ನು ಅಮೃತೇಶ್ವರ ನೆಂದು ಕರೆಯುವರು. ಧರ್ಮೇಶ್ವರ ದೇವಾಲಯವನ್ನು ಹೊಯ್ಸಳ ದೊರೆ ವಿಷ್ಣುವರ್ಧನನ ಪಟ್ಟಮಹಿಷಿ ಶಾಂತಲಾ ದೇವಿಯ ತಂದೆ ಮಾರಸಿಂಗಯ್ಯ ದಿನಾಂಕ 25-12-1122 ರಲ್ಲಿ ನಿರ್ಮಿಸಿರುತ್ತಾನೆ. ಶಾಂತಲೆಯು ತನ್ನ ತಂದೆಯು ನಿರ್ಮಿಸಿರುವ ದೇವಾಲಯದ ಪೂಜೆ, ಪುನಸ್ಕಾರಕ್ಕೆ, ನಿತ್ಯ ಕೈಂಕರ್ಯಕ್ಕೆಂದು ತನ್ನ ಪತಿಯ ಕೈಯಿಂದ ಹಲವಾರು ದತ್ತಿಗಳನ್ನು ಬಿಡಿಸಿರುತ್ತಾಳೆ. ಶಾಂತಿಗ್ರಾಮದಲ್ಲಿ ಹೊಯ್ಸಳರ ಕಾಲಕ್ಕೆ ಸೇರುವ ವೀರಭದ್ರ ದೇವಾಲಯವಿದೆ.

ಶಾಂತಿಗ್ರಾಮದ ಕೇಶವ ಮತ್ತು ವೀರ ಭದ್ರ ದೇವಾಲಯಗಳನ್ನು ಮೂಲ ಸ್ವರೂಪಕ್ಕೆ ದಕ್ಕೆ ಬರದಂತೆ ಶ್ರೀಧರ್ಮಸ್ಥಳ ಮಂಜು ನಾಥೇಶ್ವರ ಧರ್ಮೋತ್ಥಾನ ಟ್ರಸ್ಟ್‌ನವರು ಜೀರ್ಣೋದ್ಧಾರ ಮಾಡಿರುವುದು ಪ್ರಶಂಸ ನೀಯ.

ಹೀಗೆ ಬನ್ನಿ - ಶಾಂತಿಗ್ರಾಮವು ಬೆಂಗಳೂರು - ಹಾಸನ ರಸ್ತೆಯಲ್ಲಿ ಹಾಸನಕ್ಕೆ ಹದಿಮೂರು ಕಿ.ಲೋ. ಮೀಟರ್ ಮೊದಲು ಸಿಗುವುದು.



ಶ್ರೀ ಪ್ರಸನ್ನವೆಂಕಟ ದಾಸಾರ್ಯವಿರಚಿತ

# "ಸ್ವಾಮಿ ಪುಷ್ಕರ ತೀರ ನಿಲಯ ನಮೋ"

## ಆತ್ಮನಿವೇದನೆ ಕೀರ್ತನೆಯ ಒಳನೋಟ

ಧಾರಾವಾಹಿ

– ಡಾ॥ ಸುಭಾಸ ಕಾಖಂಡಕಿ
79754 42458

ಸ್ವಾಮಿ ಪುಷ್ಕರ ತೀರ ನಿಲಯ ನಮೋ।

ಸ್ವಾಮಿ ವರಹ ವೆಂಕಟನಾಯಕಾ ॥ಪ॥

ಸ್ವಾಮಿ ಪಾಹಿ ಪಾಹಿ ತ್ರಾಹಿ

ಸ್ವಾಮಿ ವರಹ ವೆಂಕಟನಾಯಕಾ ॥ ಅ.ಪ.॥

ಇಲ್ಲಿ - ಶ್ರೀಪ್ರಸನ್ನವೆಂಕಟದಾಸರು-ಶ್ರೀ ಶ್ರೀನಿವಾಸನು ನೆಲೆನಿಂತ ಸ್ವಾಮಿ ಪುಷ್ಕರಣಿ ತೀರದ ವರ್ಣನೆಯನ್ನು ಮಾಡುತ್ತ, ನೀನು ನೆಲೆ ನಿಂತ ತೀರವಾದರು ಎಂಥಹದು?

ಭೂವೈಕುಂಠಕ್ಕೆ ಸಮನಾದ ತಿರುಪತಿಗೆ ಹೋದರೆ ಮೊದಲು ದರ್ಶನ ಮಾಡುವುದು ವರಾಹಸ್ವಾಮಿಯನ್ನು ಅದೇ ಶ್ರೀಹರಿಯ ಇನ್ನೊಂದು ಪ್ರತಿರೂಪ ಅಂಥಹ ವರಾಹ ಮೂರ್ತಿಯಾದ ವೆಂಕಟ ರಮಣನೆ-ಪಾಹಿ-ಪಾಹಿ-ನಿನಗೆ- ಶರಣು ಶರಣು ಎಂದಿದ್ದಾರೆ. ಮತ್ತೆ - ಮತ್ತೆ ಹಂಬಲಿಸಿ ಕೇಳುವಂತೆ "ಸ್ವಾಮಿ ನಿನಗೆ ಶರಣ ಬಂದಿದ್ದೇನೆ - ತ್ರಾಹಿ - ತ್ರಾಹಿ - ನನ್ನನ್ನು ರಕ್ಷಿಸು'' ಎಂದಿದ್ದಾರೆ ದಾಸರು.

**ಇನ್ನು ನುಡಿ - 1 ರಲ್ಲಿ**

ಯಜ್ಞ ಗಾತ್ರ ವಿಧಿನುತ ಪ್ರಭು ಶ್ರೀ

ಯಜ್ಞ ವರಹ ವೆಂಕಟನಾಯಕಾ

ಯಜ್ಞ ಭೋಕ್ತ್ರ ಹೇಮಾಂಬಕ ಹರ

ಯಜ್ಞ ವರಹ ವೆಂಕಟನಾಯಕಾ ॥1॥

ಭಗವಂತನಿಗೆ ಮನುಷ್ಯನು ಮಾಡುವ ಎಲ್ಲ ನಿಷ್ಕಾಮ ಕಾರ್ಯ ಗಳು ಯಜ್ಞವಿದ್ದಂತೆ .. ಅಂಥ ಎಲ್ಲ ಕಾರ್ಯಗಳಿಗೂ ಕಾರಣ ಕರ್ತನಾ ದಂಥ ಪ್ರಭು ನೀನು! " ಅಣು - ಋಣ ತೃಣ ಕಾಷ್ಠ ಪರಿಪೂರ್ಣ ಗೋವಿಂದ '' ಎನ್ನುವಂತೆ ಎಲ್ಲದಕ್ಕೂ ಕಾರಣ ನೀನು. ಶ್ರೀಹರಿಗೆ ಸಮರ್ಪಣೆ ಎಂದು ಮಾಡುವ ಎಲ್ಲ ಯಜ್ಞ ಯಾಗಾದಿಗಳನ್ನು ನಿನಗರ್ಪಿಸಿದಾಗ ಅದನ್ನು ಅಂಥಃಕರಣದಿಂದ ಸ್ವೀಕರಿಸುವವನೂ ನೀನು. ಅಂಥಯಜ್ಞ ವರಹ ವೆಂಕಟರಮಣನೇ ನಿನಗೆ ಶರಣು ಎಂದು ಅನನ್ಯ ಭಾವದಿದ ಸ್ತುತಿಸಿದ್ದಾರೆ.

**ನುಡಿ - 2 ರಲ್ಲಿ**

ಭೂಭಯದೂರ ಧರಾಮನೋಹರ

ಭೂವರಹ ವೆಂಕಟನಾಯಕಾ

ಶೋಭಿತ ಬಾಲಚಂದ್ರೋಪಮ ಕ್ರೋಧ

ಭೂವರಹ ವೆಂಕಟನಾಯಕಾ ॥2॥

ಭೂಮಿಯ ಮೇಲೆ ಪಾಪಗಳು ಹೆಚ್ಚಾಗಿ ದುರ್ಜನರಿಂದ ಹಿಂಸೆಗೆ ಒಳಗಾಗಿ ಭೂಮಿ (ವಸುಂಧರೆ) ಭಗವಂತನು ಮೊರೆ ಹೋಗುತ್ತಾಳೆ. ಭಗ ವಂತನು ವರಹ ಅವತಾರದಿಂದ ದುರ್ಜನರನ್ನು ಸಂಹಾರ ಮಾಡಿ - ನಾಶ ಗೊಳಿಸಿ ಭೂಮಿಯ ಭಯವನ್ನು ದೂರ ಮಾಡುತ್ತಾನೆ. ಅದಕ್ಕೆ ಭೂ ಭಯವನ್ನು ದೂರಮಾಡಿ ಮತ್ತೆ ಭೂಮಿಯನ್ನು ರಕ್ಷಿಸಿದವನೇ ಎನ್ನುವಲ್ಲಿ ದಾಸರು 'ಧರಾಮನೋಹರ ' ಎಂದಿದ್ದಾರೆ.

**ಇದು ಕೊನೆಯ ನುಡಿಯಲ್ಲಿ**

ಶ್ವೇತ ಹಯವದನ ಶ್ವೇತಾಂಬರಧರ

ಶ್ವೇತವಾಹನ ಸಖ ಶ್ವೇತ ನಿಭಾ

ಶ್ವೇತಾದ್ರೀಕಾರ್ಚಿತ ಪಾದಕಮಲ

ಶ್ವೇತ ವರಹ ವೆಂಕಟನಾಯಕಾ

ಪಾತಕ ಮೋಚಕ ಪ್ರಸನ್ವೆಂಕಟ

ಶ್ವೇತವರಹ ವೆಂಕಟನಾಯಕಾ ॥3॥

ಇಲ್ಲಿ ಭಗವಂತ ಒಂದು ವಿಶೇಷ ಅವತಾರದ ವರ್ಣನೆಯನ್ನು ಮಾಡುತ್ತ,ಶ್ವೇತ ಹಯವದನ. ಶ್ವೇತ ಅನ್ನುವುದು ಬಣ್ಣದಲ್ಲಿ ಶ್ರೇಷ್ಠ ವಾದದ್ದು. ಶ್ವೇತವಾದ ಕುದುರೆಯನ್ನೇರಿ ಭೂಭಾರ ಹರಣ ಮಾಡುವ ಕಲ್ಕಿ ಅವತಾರವನ್ನು ವರ್ಣಿಸುತ್ತ. ಶ್ವೇತಾಂಬರಧರ ಎಂದಿದ್ದಾರೆ. 'ಶ್ವೇತ ವಾಹನ ಸಖ' ಎನ್ನುವಲ್ಲಿ ಭಗವಂತನ ವಾಹನವಾದ ಗರುಡ ವಾಹನದ ರೂಪಕವನ್ನು ಕೊಂಡಾಡಿದರೂ, ತನ್ನ ಭಕ್ತರಿಗೆ ಅತ್ಯಂತ ಆಪ್ತ ಮಿತ್ರನಂತೆ ಗೋಚರಿ ಸುವವ,ಇಲ್ಲಿ ತನ್ನ ಭಕ್ತರಾದ ಪಾಂಡವ ಪುತ್ರ ಅರ್ಜುನನಿಗೆ ಅತ್ಯಂತ ಪ್ರಾಣ ಮಿತ್ರನಂತೆ, ಅವರ ಹಿತವನ್ನು ಕಾಯ್ದ ಕೃಷ್ಣನೇ'' ಎಂದು ಸ್ತುತಿಸಿದ್ದಾರೆ ದಾಸರು.





ಧಾರಾವಾಹಿ

# ಶ್ರೀ ವೇಂಕಟೇಶ್ವರಸ್ವಾಮಿ ಆಲಯ

## ಪ್ರಾಚೀನ ಕಾಲದ ಸಾಹಿತ್ಯದಲ್ಲಿ ಶ್ರೀವೇಂಕಟೇಶ್ವರಸ್ವಾಮಿ ಆಲಯ (ಕ್ರಿ.ಶ. ಮೊದಲ ಶತಮಾನದಿಂದ 9ನೇ ಶತಮಾನದವರೆಗೆ)

### ನಮ್ಮಾಳ್ವಾರ್

ವೈಷ್ಣವ ಸಂಪ್ರದಾಯದಲ್ಲಿ ಸಾಮಾನ್ಯವಾಗಿ ನಮ್ಮಾಳ್ವಾರ್ ಅವರನ್ನು ಅತಿ ಶ್ರೇಷ್ಠರೆನ್ನಲಾಗಿದೆ. ಅವರ ಪಾಶುರಗಳನ್ನು ಸರ್ವವೇದ ಸಾರ ಎನ್ನಲಾಗಿದೆ. ಅವರ ತಿರುವಾಯ್ಮೊಳಿಯನ್ನು ತಮಿಳು ವೇದವೆನ್ನಲಾಗಿದೆ. ಪ್ರಾಚೀನ ತಮಿಳರು ವೇದ ಉಪನಿಷತ್ತುಗಳಲ್ಲಿನ ಪ್ರತ್ಯೇಕತೆಯನ್ನು ವೇದಗಳನ್ನು ವಾಯ್ಮೊಳಿ ಎಂದೂ ಉಪನಿಷತ್ತುಗಳನ್ನು ಮರೈ ಎಂದೂ ಕರೆದು ಗುರುತಿಸಿರಬಹುದಾದರೂ ಮರೈ ಎಂಬುದೇ ಇಂದು ಇಡೀ ವೈದಿಕ ಸಾಹಿತ್ಯಕ್ಕೆ ಅನ್ವಯಿಸುತ್ತದೆ.

ನಮ್ಮಾಳ್ವಾರರು, ಮೊದಲಾಳ್ವಾರರ ನಂತರದವರೂ,ತಿರುಮಂಗೈ ಆಳ್ವಾರರೊಡನೆ ಕೊನೆಯಾಗುವ ಆಳ್ವಾರರ ಸಮಕಾಲೀನರಾದವರು ಎಂದು ಪರಿಗಣಿತರಾಗಿದ್ದಾರೆ. ಮೊದಲಾಳ್ವಾರರು ವೆಣ್ಬಾ ವೃತ್ತದಲ್ಲಿ ಪಾಶುರ ರಚನೆ ಮಾಡಿದ್ದಾರೆ,ನಾಲ್ಕನೆಯವರು ವಿರುತ್ತಂ ಛಂದಸ್ಸಿನಲ್ಲಿ ಹಾಡಿದರು.

ಮೊದಲಾಳ್ವಾರರಂತಲ್ಲದೆ ನಮ್ಮಾಳ್ವಾರರ ತಿರುಮಲೆಯ ಉಲ್ಲೇಖ ಒಂದು ಸಾಹಿತ್ಯಕ ಅಭಿವ್ಯಕ್ತಿ. ತಿರುವಾಯ್ಮೊಳಿಯ ಹತ್ತು ಪಾಶುರಗಳನ್ನು ತಿರುಮಲೆಗೆ ಮೀಸಲಿಟ್ಟಿದ್ದಾರೆ. ಇಲ್ಲಿನ ಶ್ರೇಷ್ಠ ದೇವಾಲಯದ ವಿಶೇಷ ವರ್ಣನೆ ಮಾಡಿದ್ದಾರೆ. ಇತರ ದಶಕಗಳಲ್ಲೂ ತಿರುಮಲೆಯ ಬಗ್ಗೆ ಅಪ್ರತ್ಯಕ್ಷವಾಗಿ ಅಲ್ಲಲ್ಲಿ ಹೇಳಿದ್ದರೂ, ಈ ಗುಡಿಯನ್ನೇ ಮನಸ್ಸಿನಲ್ಲಿಟ್ಟುಕೊಂಡು ಹಾಡಿರುವುದು ಸ್ಪಷ್ಟವಾಗಿದೆ.

ನಮ್ಮಾಳ್ವಾರರ ತಿರುವಿರುತ್ತಂನಲ್ಲಿ ತಿರುಮಲೆಯ ಬಗ್ಗೆ ಏಳು ಉಲ್ಲೇಖಗಳಿವೆ. ತಿರುಪತಿಯ ಸಮೀಪದ ಬೆಟ್ಟಗಳಲ್ಲಿ ಶೋಭಾಕರವಾದ ಪುಷ್ಪಗಳ ತೋಟಗಳು ಉಂಟು. ತಿರುಮಲೆಯ ಬಗ್ಗೆ ನೇರವಾಗಿ ಹೇಳಿಲ್ಲವಾದರೂ ಪೆರಿಯ ತಿರುವಂದಾದಿಯಲ್ಲಿನ ಏಳನೇ ಪಾಶುರದಲ್ಲಿ ವಿಷ್ಣುವಿನ ವಕ್ಷಃಸ್ಥಲದಲ್ಲಿನ ಲಕ್ಷ್ಮಿಯನ್ನು, ತಿರುಮಲೆಯ ದೇವರ ಹೆಸರು-ಶ್ರೀನಿವಾಸ-ಎಂಬುದರ ಅರ್ಥ ಇದೇ- ಎಂಬುದನ್ನು ಕುರಿತು ಹೇಳಲಾಗಿದೆ.

### ಇತರ ಆಳ್ವಾರರು

ನಮ್ಮಾಳ್ವಾರರ ನಂತರ ಏಳು ಮಂದಿ ಆಳ್ವಾರರಿದ್ದು ತಮ್ಮ ಪ್ರಬಂಧಗಳಲ್ಲಿ ತಿರುಮಲೆಯನ್ನು ಕುರಿತು ಹಾಡಿದ್ದಾರೆ.

ವೈಷ್ಣವ ದೇವಾಲಯಗಳಲ್ಲಿ ಸಾಮಾನ್ಯವಾಗಿ ಆರಾಧಿಸಲ್ಪಡುವ ಗೋದಾದೇವಿಯ ನಾಚ್ಚಿಯಾರ್ ತಿರುಮೊಳಿಯನ್ನು ಹಾಗೂ ಚೇರ ದೇಶದ ರಾಜರಾಗಿದ್ದ ಕುಲಶೇಖರ ಆಳ್ವಾರರನ್ನು ವಿಶೇಷವಾಗಿ ಗುರುತಿಸಬೇಕು. ಕಾಲದಲ್ಲಿ ಅರ್ವಾಚೀನರಾದ ತಿರುಮಂಗೈ ಆಳ್ವಾರರ ತಿರುಮಲೆಯ ದೇವರನ್ನು ಹತ್ತಕ್ಕಿಂತ ಹೆಚ್ಚುಬಾರಿ ಹೆಸರಿಸುವರು.

ಹೀಗಾಗಿ ಕ್ರಿ.ಶ. 3 ನೇ ಶತಕದಿಂದ 8 ನೇ ಶತಕದವರೆಗೆ ಹರಡಿರಬಹುದಾದ ಕಾಲಘಟ್ಟದಲ್ಲಿ ತಿರುಮಲೆಯಲ್ಲಿ ವೆಂಗಡವೆಂಬ ದೇವಾಲಯ ವಿಷ್ಣುವಿಗೆ ಮೀಸಲಾಗಿದ್ದಿತು - ಎಂದು ಆಳ್ವಾರರ ಸಾಹಿತ್ಯಾಧಾರದಲ್ಲಿ ನಿರ್ಧರಿಸಬಹುದು. ಜ್ಞಾತ ಇತಿಹಾಸದ ಈ

ದಾಖಲೆಗಳು ಕ್ರಿ.ಶ. 8 ನೇ ಶತಕದವರೆಗೆ ತಿರುಮಲೆಯನ್ನು ಒಂದು ಪವಿತ್ರ ಕ್ಷೇತ್ರವೆಂದು ಗುರುತಿಸಿವೆ. ಕ್ರಿ.ಶ. 8ನೇ ಶತಕದ ನಂತರ ಶಾಸನಾಧಾರಗಳು ತಿರುಮಲೆಯ ಬಗ್ಗೆ ಆರಂಭ ವಾಗುವುವು.

### ಮಧ್ಯಕಾಲ - 9ನೇ ಶತಮಾನದಿಂದ 17ನೇ ಶತಮಾನ

### ಆಲಯ ಶಾಸನಗಳು

ಇತರ ಅನೇಕ ದೇವಾಲಯಗಳಂತೆಯೇ ತಿರುಮಲೆಯ ಆಲಯವೂ ಸಹ ಹಲವಾರು ಶಾಸನಗಳನ್ನು ಹೊಂದಿ ಆಲಯದ ಬಗ್ಗೆ ಪೂರ್ಣ ವಿವರವನ್ನೊದಗಿಸಿ ಆಸಕ್ತಿಯನ್ನು ಹೆಚ್ಚಿಸುತ್ತವೆ. ಇಲ್ಲಿನ ಶಾಸನಗಳು,ತಿರುಪತಿ,ತಿರುಚಾನೂರಿನಲ್ಲಿ ಕಂಡು ಬಂದಿರುವ ಶಾಸನಗಳೊಡನೆ ಸೇರಿ ಈ ಪ್ರಾಂತ್ಯದ ಆಲಯ ವ್ಯವಹಾರಗಳ ಬಗ್ಗೆ ಎಂಟು ಹತ್ತು ಶತಮಾನಗಳ ನಿರಂತರವಾದ ದಾಖಲೆಯನ್ನೊದಗಿಸಿವೆ. ಉದಾಹರಣೆಗೆ ವಿಜಯನಗರದ ರಾಜರ- ವಿಶೇಷವಾಗಿ ಕೃಷ್ಣದೇವರಾಯ ಹಾಗೂ ಅಚ್ಯುತರಾಯರ ತಿರುಮಲೆ ಯಾತ್ರೆಗಳ ಬಗ್ಗೆ, ಅವರು ಗಳು ಆಲಯಕ್ಕೆ ನೀಡಿದ ದಾನಗಳ ಬಗ್ಗೆ, ನಿರ್ಮಿಸಿದ ಕಟ್ಟಡಗಳ ಬಗ್ಗೆ - ಪೂರ್ಣ ಮಾಹಿತಿ ದೊರೆತಿದೆ. ತಿರುಮಲೆಯ ಆಲಯ ದೊಡನೆ ದಕ್ಷಿಣ ಭಾರತದ ಅತಿ ಶ್ರೇಷ್ಠ ಸಾಮ್ರಾಟರಲ್ಲಿ ಒಬ್ಬನಾದ ರಾಜರಾಜ ಚೋಳನು ನೇರ ಸಂಬಂಧ ಹೊಂದಿದ್ದನೆಂಬುದು ಅವನ ಆಳ್ವಿಕೆಯ 16 ನೇ ವರ್ಷದ ಒಂದು ದೋಷಪೂರ್ಣ, ಅಪೂರ್ಣ ಪ್ರತಿಯಾದ ಶಾಸನದಿಂದ ತಿಳಿದು ಬಂದಿದೆ. ಹದಿಮೂರು ಹದಿನಾಲ್ಕನೆಯ ಶತಾಬ್ದಗಳ ಹಾಗೂ ನಂತರದ ಆಲಯ ಜೀರ್ಣೋದ್ಧಾರ ಕಾರ್ಯಗಳಲ್ಲಿ ಅಂದಿಗಿಂತ ಮೊದಲು ಇದ್ದ ಅಸಂಖ್ಯ ಶಾಸನಗಳು ಲುಪ್ತವಾಯಿತೆಂಬುದನ್ನು ಈ ಆಸುಪಾಸಿನಲ್ಲಿ ದೊರೆತ ದಂತಿವರ್ಮನೇ ಮೊದಲಾದವರ ತ್ರುಟಿತ ಶಾಸನಗಳಿಂದ ತೀರ್ಮಾನಿಸಬಹುದು. ಏನೇ ಆದರೂ ಒಂದು ಸಾವಿರಕ್ಕೂ ಮಿಗಿಲಾದ ದೊರೆತಿರುವ ಶಾಸನಗಳನ್ನು ಸರಿಯಾಗಿ ವಿಶ್ಲೇಷಿಸಿದ್ದೇ ಆದರೆ,ಆಲಯದ ಇತಿಹಾಸದ ಬಗ್ಗೆ ಸಾಕಷ್ಟು ಖಚಿತವೂ,ನಿರಂತರವೂ ಆದ ವಿವರ ದೊರೆಯುತ್ತದೆ ಯಾಗಿ ಈ ದಿಸೆಯಲ್ಲಿನ ಪ್ರಯತ್ನವನ್ನು ಸಾದರಪಡಿಸಲಾಗಿದೆ.

### ಪ್ರಾಚೀನ ಶಾಸನ ದಾಖಲೆಗಳು

ತಿರುಮಲೆಯ ಆಲಯದಲ್ಲಿ ದೊರೆತಿರುವ ಅತಿ ಪ್ರಾಚೀನ ಶಾಸನ ಕ್ರಿ.ಶ.9 ನೇ ಶತಮಾನದ ಆದಿಭಾಗದಲ್ಲಿದ್ದ ಬಾಣ ರಾಜಕುಮಾರ ವಿಜಯಾದಿತ್ಯನ ಜನನವನ್ನು ಸೂಚಿಸುತ್ತದೆ. (ತಿ.ತಿ.429) ಈ ರಾಜಕುಮಾರ ತಿರುಚಾನೂರಿನ ಶ್ರೀವೆಂಕ ಟೇಶ್ವರ ಸ್ವಾಮಿಗೆ ಒಂದು ಕಾಣಿಕೆ ನೀಡಿದ (ಜಿ.ಟಿ.229).

### ತಿರುಮಲೆ ಹಾಗೂ ಪಲ್ಲವರು

ಪಲ್ಲವ ರಾಜರಲ್ಲಿ ಈಚಿನವನಾದ ಕೋ ವಿಜಯದಂತಿ ವಿಕ್ರಮವರ್ಮನ್ ತಿರುಚಾನೂರಿನ ಎರಡು ಶಾಸನಗಳಲ್ಲಿ ಪ್ರತಿನಿಧಿಸಲ್ಪಟ್ಟಿದ್ದಾನೆ. ಇದರಲ್ಲಿ ಒಂದು ಅವನ ಆಳ್ವಿಕೆಯ ಐವತ್ತೊಂದನೆಯ ವರ್ಷವನ್ನು ಸೂಚಿಸಿ ಇದು ಕ್ರಿ.ಶ. 830ಕ್ಕೆ ಹೊಂದುತ್ತದೆ. (ತಿ.ತಿ.219 ಜಿ.ಟಿ.223) ನಂತರದ ಶಾಸನದಲ್ಲಿ ತೇದಿಯಿಲ್ಲ.ಎರಡೂ ಶಾಸನಗಳೂ ಆಲಯದಲ್ಲಿ ನಂದಾ ದೀಪವನ್ನುರಿಸಲು ನೀಡಿದ ಚಿನ್ನದ ಕಾಣಿಕೆಯನ್ನು ವಿವರಿ ಸುತ್ತವೆ.

ಎರಡನೇ ಪರಾಂತಕನ ಸುಂದರ ಚೋಳನ ಸಮ ಕಾಲೀನ-ಕೋಪಾರ್ಥಿವೇಂದ್ರವರ್ಮನು ಒಂದನೇ ಆದಿತ್ಯ ನಿಂದ, ತೊಂಡಮಂಡಲದಿಂದ ಉಚ್ಚಾಟಿಸಲ್ಪಟ್ಟ ಪಲ್ಲವ ದೊರೆ ಗಳ ವಂಶಕ್ಕೆ ಪ್ರಾಯಶಃ ಸೇರಿರಬೇಕು. ಇವನ ಕೈಕೆಳಗೆ ಶಕ್ತಿ ವಿಟಂಕನ್ ಎಂಬ ಕಾಡವ ಅಧಿಕಾರಿಯಿದ್ದ. ಈ ಶಕ್ತಿ ವಿಟಂ ಕನ ರಾಣಿ ಸಾಮವೈ ದೇವಾಲಯಕ್ಕೆ ಎರಡು ದಾನಗಳನ್ನು ನೀಡಿದ ದಾಖಲೆಗಳಿವೆ.ಈಕೆ ಒಬ್ಬ ಪಲ್ಲವ ಪೆರ್ಗಡೆಯ ಮಗಳೆಂದು ಹೇಳಲಾಗಿದೆ. ಒಂದನೇ ರಾಜರಾಜ ಚೋಳನ ಮಹಾರಾಣಿ ದಂತಿಶಕ್ತಿ ವಿಟಂಕಿ ಲೋಕಮಹಾದೇವಿಯೊಂದಿಗೆ ಈ ಕಾಡವ ದೊರೆ ಶಕ್ತಿ ವಿಟಂಕನಿಗೆ ಬಂಧುತ್ವವಿದ್ದಿತು.

ಮಣವಾಳ ಪ್ಪೆರುಮಾಳರಿಗೆ ತಿರುಮುಡಿ,ಮಾಲೆಗಳು, ಉದರ ಬಂಧ,ತಿರುಮಗ್ರೈ ಪಟ್ಟಿಕೆ, ಬಾಹುವಲಯ,ತಿರು ಚಂದನ,ವಡಿಯಲ್, ಕಗ್ರೈ, ಪಾದಚಯಲಂ,ಪ್ರಭಾವಳಿ - ಮೊದಲಾದ ಅತಿ ಬೆಲೆ ಬಾಳುವ ಆಭರಣಗಳನ್ನು ಸಾಮವೈ ನೀಡಿದಳು. ಎರಡು ವಿಷು ಸಂಕ್ರಾಂತಿಗಳಲ್ಲಿ ಹಾಗೂ ಎರಡು ಆಯನ ಸಂಕ್ರಾಂತಿಗಳಲ್ಲಿ ದಿನವೂ ಅಭಿಷೇಕದ ನಂತರ ಅನ್ನ ನೈವೇದ್ಯಕ್ಕೂ ಏರ್ಪಾಡು ಮಾಡಿದಳು. ಚಿತ್ತಾ ನಕ್ಷತ್ರದಲ್ಲಿ ಅಂಕುರಾರ್ಪಣೆಯೊಂದಿಗೆ ಆರಂಭವಾಗುವ ಒಂಬತ್ತು ದಿನಗಳ ಪುರಟ್ಟಾಸಿ ಉತ್ಸವಗಳನ್ನೂ,ಅದಕ್ಕೂ ಮೊದಲು ಎರಡು ದಿನಗಳ ಉತ್ಸವವನ್ನೂ ಏರ್ಪಡಿಸಿದಳು (ತಿ.ತಿ.8) ಮಣವಾಳ ಪ್ಪೆರುಮಾಳರಿಗೆ ಮುಕ್ಕೋಟಿ ದ್ವಾದಶಿಯ ಮೊದಲು ಏಳುದಿವಸಗಳ ಉತ್ಸವಕ್ಕಾಗಿ ವೆಚ್ಚಗಳಿಗೆ ಭೂಮಿಯನ್ನೂ ದತ್ತಿ ನೀಡಿದಳು (ತಿ.ತಿ.9).

### ಚೋಳರ ಕಾಲದಲ್ಲಿ ತಿರುಮಲೆ

ಒಂದನೇ ಪರಾಂತಕ ಅಥವಾ ಮಧುರೈಕೊಂಡ ಕೋ ಪರಕೇಸರಿವರ್ಮನು ಕ್ರಿ.ಶ.905 ರಿಂದ 953 ರವರೆಗೆ ಆಳಿದ. ಅವನ ಶಾಸನವೇ ಆಲಯದ ಅತಿ ಪ್ರಾಚೀನ ಚೋಳ ಶಾಸನ. ಅವನ ಆಳ್ವಿಕೆಯ 20ನೇ ಹಾಗೂ 29ನೇ ವರ್ಷದಲ್ಲಿ ಆಲಯಕ್ಕೆ ದೀಪಗಳನ್ನು ನೀಡಿದ್ದನ್ನಿವು ದಾಖಲಿಸುತ್ತವೆ (ಜಿ.ಟಿ.232,234). ಜಿ.ಟಿ.232 ಅಂದು ತಿರುಚುಕನೂರು (ತಿರುಚಾನೂರು) ನಲ್ಲಿನ ಪ್ರತಿನಿಧಿ ಸಭೆಯನ್ನು ಕುರಿತು ಹೇಳುತ್ತದೆ. ಇದರಿಂದಾಗಿ ಪಲ್ಲವರ ಕಾಲದಲ್ಲಿ ಪ್ರಚಲಿತವಿದ್ದ ರಾಜ್ಯ ವಿಭಾಗಗಳೇ ಈ ಕಾಲದಲ್ಲೂ ಪ್ರಚಲಿತವಿದ್ದಿತೆಂದು ತಿಳಿದುಬರುತ್ತದೆ. ತೊಂಡಮಂಡಲವನ್ನು ವಶಪಡಿಸಿಕೊಂಡ ಚೋಳರು ತಮಗೆ ಸಿದ್ಧರೂಪದಲ್ಲಿ ದೊರೆತ

ಪಲ್ಲವ ಆಡಳಿತ ವ್ಯವಸ್ಥೆಯನ್ನು ತಮ್ಮದಾಗಿಸಿಕೊಂಡರೆಂದು ತೋರುತ್ತದೆ. ಇರುಂಗೋಲಕನ್ ಅಥವಾ ಗುಣವಾನ್ ಅಪರಾಜಿತನ್ ಸ್ವಲ್ಪ ಸುವರ್ಣವನ್ನು ದತ್ತಿ ನೀಡಿ ಇಬ್ಬರು ಬ್ರಾಹ್ಮಣರಿಗೆ ಸಮಾರಾಧನೆಯ ಏರ್ಪಾಡು ಮಾಡಿದ (ಜಿ.ಟಿ. 220) ಇವನು ಬಹುಶಃ ಒಂದನೇ ಪರಾಂತಕನ ಅಧೀನ ಅಧಿಕಾರಿಯಾಗಿರ ಬೇಕು.

ಎರಡನೇ ಪರಾಂತಕ ಸುಂದರ ಚೋಳನ ಬಗ್ಗೆ ನೇರ ಸಾಕ್ಷಿಯಿಲ್ಲದಿದ್ದರೂ,ತಿರುಮಲೆಯ ವೆಂಕಟೇಶ್ವರ ಆಲಯದ ಜೀರ್ಣೋದ್ಧಾರ ಮಾಡುವಾಗ ವೀರನರಸಿಂಹ ಯಾದವ ರಾಯನ ಆಜ್ಞೆಯಂತೆ ಪುನಃ ಅಚ್ಚಿಸಲಾದ ಒಂದು ಶಾಸನದ ಮೂಲಕ ಪೊನ್‌ಮಾಳಿಗೈಯಿಲ್ ತೂಂಜಿನಾನ್ ನ (ಚಿನ್ನದ ಮಾಳಿಗೆಯಲ್ಲಿ ಮಲಗಿದವನು) ರಾಣಿಯೆಂದು ಹೇಳಲಾದ ಪರಾಂತಕದೇವಿಯಮ್ಮನ್, ರಾಜ ರಾಜ ಚೋಳನ ಆಳ್ವಿಕೆಯ 16 ನೇ ವರ್ಷದಲ್ಲಿ ದೇವರಿಗೆ ಅನರ್ಘ್ಯ ವಜ್ರಗಳಿಂದ ಕೂಡಿದ ಒಂದು ಪಟ್ಟವನ್ನು ಸಮರ್ಪಿಸಿದಳೆಂದು ತಿಳಿದುಬರುತ್ತದೆ. (ಚಿನ್ನದ ಮಾಳಿಗೆಯಲ್ಲಿ ಮಲಗಿದವನು ಎರಡನೇ ಪರಾಂತಕ ಸುಂದರಚೋಳನೇ ಎಂಬುದು ಇತರ ಶಾಸಗಳಿಂದ ಸ್ಪಷ್ಟ) ಈ ಎರಡು ದಾಖಲೆಗಳು ತಿರುಮಲೆಗೆ ಪಟ್ಟದ ದಾನ ನೀಡಿದ ಪರಾಂತಕದೇವಿ ಅಮ್ಮನು ಸುಂದರ ಚೋಳನ ರಾಣಿಯೆಂಬುದನ್ನು ಖಚಿತ ಪಡಿಸುತ್ತವೆ.

ಒಂದನೇ ರಾಜರಾಜನು ಮೂರು ಶಾಸನಗಳಲ್ಲಿ ಕಂಡು ಬರುತ್ತಾನೆ. (ತಿ.ತಿ.17.ಜಿ.ಟಿ. 214,215) 28 ಮುತ್ತುಗಳು, ನಾಲ್ಕು ವಜ್ರಗಳು,ಆರು ಗೋಮೇಧಿಕಗಳ 52 ಕಳಂಜು ತೂಕದ ಚಿನ್ನದ ಪಟ್ಟವನ್ನು ಶ್ರೀವೆಂಕಟೇಶ್ವರಸ್ವಾಮಿಗೆ ನೀಡಿದ ಪರಾಂತಕ ದೇವಿ ಅಮ್ಮನ ಶಾಸನವನ್ನು ಕುರಿತು ಈಗಾಗಲೇ ಹೇಳಲಾಗಿದೆ.ಮಿಕ್ಕೆರಡು ಶಾಸನಗಳೂ ತ್ರುಟಿತವಾಗಿವೆ. ಮೊದಲನೆಯದು ಪ್ರಶಸ್ತಿಯ ಒಂದು ಭಾಗವನ್ನು ಉಲ್ಲೇಖಿಸಿದರೆ ಎರಡನೆಯದು ರಾಜರಾಜ ಮುವೇಂದವೇಲನ್ 40 ಕಳಂಜು ತೂಕದ ಚಿನ್ನವನ್ನು ದೇವರ ದೀಪಕ್ಕಾಗಿ ಆಲಯದ ಭಂಡಾರಕ್ಕೆ ಜಮೆ ಮಾಡಿದ್ದನ್ನು ಸೂಚಿಸುತ್ತದೆ.

ತಿರುಮಂಡ್ಯೈಯಂನ ಆಲಯದ ಸಭೆಯಾರರು ತಮ್ಮ ಕರ್ತವ್ಯವಾದ 24 ತುಪ್ಪದ ದೀಪಗಳನ್ನೂ, ಆರತಿಯನ್ನೂ ಮಾಡದೆ ಹೋದಾಗ, ರಾಜೇಂದ್ರ ಚೋಳನ ಆಳ್ವಿಕೆಯ ಮೊದಲ ವರ್ಷದಲ್ಲಿ ಒಬ್ಬ ಸ್ಥಳೀಯ ಅಧಿಕಾರಿ ವಿಚಾರಣೆ ನಡೆಸಿ, ವ್ಯವಸ್ಥೆಯನ್ನು ಪುನಃ ನೆಲೆಗೊಳಿಸಿದಂತೆ ತಿ.ತಿ.20 ನೇ ಶಾಸನದಿಂದ ತಿಳಿದುಬರುತ್ತದೆ. ಈ ಶಾಸನದಲ್ಲಿ ವಿಚಾರಣೆಯ ಪೂರ್ತಿ ವಿವರಗಳಿದ್ದು, ವಿಚಾರಣ ಕರ್ತನು ತಿರುವೆಂಗಡ ದೇವನ ಆಡಳಿತಗಾರರು, ಸೇವಕರನ್ನು ಕರೆದು ದೇವರಿಗೆ ನಿತ್ಯವೂ ನೈವೇದ್ಯ ನೀಡುವ ನಿಮಂದನಪ್ಪಡಿಯಲ್ಲಿ ಅರೆಕೊರೆಗಳೇನಾದರೂ ಇದ್ದವೇ ಎಂಬುದನ್ನು ವಿಚಾರಿಸಿದ. ದೇವದಾನಕ್ಕೆಂದು ಸ್ವೀಕರಿಸಲಾದ ತಿರುಮಂಡ್ಯೈಯಂ ಗ್ರಾಮದ ಪಂಚಾಯತಿಯು 23 ಪೊನ್‌ಗಳನ್ನು ಪಡೆದು ಶಿಲಾಶಾಸನೋಕ್ತವಾದಂತೆ ಶ್ರೀವೆಂಕಟೇಶ್ವರಸ್ವಾಮಿಯ ಆಲಯದಲ್ಲಿ 23 ದೀಪಗಳು ಹಾಗೂ ಒಂದು ಕರ್ಪೂರದ ಆರತಿಯನ್ನು ಬೆಳಗಿಸುವಲ್ಲಿ,ತಮ್ಮ ಕರ್ತವ್ಯ ಲೋಪ ಮಾಡಿ,ಗ್ರಾಮಸ್ಥರ ಅಸಾಮರ್ಥ್ಯದಿಂದ ಎರಡೇ ದೀಪಗಳನ್ನು ಬೆಳಗಿಸುತ್ತಿರುವರೆಂದು ಪ್ರಕಟವಾಯಿತು. ವಿಚಾರಣೆಯಿಂದ ತಿರುಮಂಡ್ಯೈಯಂ ಗ್ರಾಮ ಸಭೆಯ ಉದಾಸೀನ ಮನೋಭಾವ ಹಾಗೂ ನಂಬಿಕೆ ದ್ರೋಹದ ಅರಿವಾದ ಅಧಿಕಾರಿಯು, ತಿರುಚಾನೂರಿನಲ್ಲಿದ್ದ ತಿರುಮಂಡ್ಯೈಯಂ ಸಭೆಯ 20 ಪೊನ್‌ಗಳನ್ನು ಆಲಯಕ್ಕೆ ಹಿಂದಿರುಗಿಸಬೇಕೆಂದೂ, ತಿರುಮಂಡ್ಯೈಯಂ ಸಭೆಯ ಸೇವೆಗಾಗಿ ನೀಡಬೇಕಾದ ಆಲಯ ಬಾಕಿಯಿದ್ದ ಮೂರು ಪೊನ್‌ಗಳು ಸೇರಿಸಿ 23 ಪೊನ್‌ಗಳನ್ನಾಗಿಸಿ ಆಲಯದ ಅಧಿಕಾರಿಗಳು ಆಲಯಕ್ಕೆ 23 ದೀಪಗಳಿಗೆ ಬೇಕಾದ ತುಪ್ಪವನ್ನೂ ಆರತಿಗೆ ಬೇಕಾದ ಕರ್ಪೂರವನ್ನೂ ಒದಗಿಸಬೇಕೆಂದೂ,ಆಜ್ಞೆ ಮಾಡಿದ.

ತಿರುಮಲೆಯ ಹಲವು ಶಾಸನಗಳಲ್ಲಿ ಕುಲೋತ್ತುಂಗನ ಮೈಕೀರ್ತಿಯ ಐತಿಹಾಸಿಕ ದಾಖಲೆಗಳು ಚೂರುಪಾರಾಗಿ ದೊರೆತಿವೆ. ಒಂದನೇ ಕುಲೋತ್ತುಂಗನ ರಾಣಿಯು ಆಲಯಕ್ಕೆ ಹಾಲು, ಮೊಸರುಗಳಿಗಾಗಿ ದಾನ ನೀಡಿದಳು. (ತಿ.ತಿ.71) ಮೂರನೇ ರಾಜರಾಜನ ಆಳ್ವಿಕೆಯ 19 ನೇ ವರ್ಷದಲ್ಲಿ ತಿರುಪತಿಯ ಗೋವಿಂದ ರಾಜಸ್ವಾಮಿ ಆಲಯದ ಶಾಸನವು (ಜಿ.ಟಿ.126) ಸ್ಥಳೀಯ ರಾಜಕಾರಣದ ಸಭೆಗಳ ಕೆಲಸಗಳು ಹಾಗೂ ಅಧಿಕಾರಗಳನ್ನು ವಿವರಿಸಿ ಆಲಯಕ್ಕೆ ಬೇಕಾದ ಭೂಮಿಯ ದೇಣಿಗೆಗಾಗಿ ರಾಜನಲ್ಲಿ ಮನವಿ ಮಾಡುವ ವಿಧಾನಗಳನ್ನು ಕುರಿತು ಹೇಳುತ್ತದೆ.ತಿರುಕ್ಕುಡವೂರಿನ ಪೆರಿಯ ನಾಟ್ಟಾರನು ಗೋವಿಂದರಾಜ ಸ್ವಾಮಿ ಆಲಯದಲ್ಲಿ ತಿರುಮಂಗೈ ಆಳ್ವಾರರ ವಿಗ್ರಹವನ್ನು ಪ್ರತಿಷ್ಠಾಪಿಸಿದ, ಆದರೆ ಅದರ ದಿನವಹಿ ಪೂಜೆಗೆ ಏರ್ಪಾಡು ಮಾಡಲಿಲ್ಲ. ಶಠಗೋಪ ದಾಸರ್ ಪಿಳ್ಳೈ ಮತ್ತಿತರ ಮೂವರು ಆಲೋಚಿಸಿ, ಆಲಯದಲ್ಲಿ ಪೂರ್ಣ ಪ್ರಮಾಣದಲ್ಲಿ ಸಮಾವೇಶವಾದ ತಿರುಚಾನೂರು ಸಭೆಯಾರರ ಮುಂದೆ ವಿಷಯವನ್ನು ತಂದಾಗ ಅವರು ಒಂದು ತೀರ್ಮಾನ ಮಾಡಿದರು. ಸಭೆಯಾರರ ತೀರ್ಮಾನ ಶಿಫಾರಸ್ಸು ಮಾತ್ರವೇ ಆದಾಗಲೂ ರಾಜ ಅದನ್ನು ಪೂರ್ತಿಯಾಗಿ ಅನುಮೋದಿಸಿ ಅದರಂತೆ ಕ್ರಮಗಳನ್ನು ಕೈಗೊಳ್ಳಲು ಆಜ್ಞೆ ನೀಡಿದ. ತಿರುಕ್ಕುಡುವೂರ್‌ನಾಟ್ಟಾರನು, ಕುಡುವೂರು ಗ್ರಾಮದ ಮಾಲಿಪತ್ತಿನಲ್ಲಿ ಚಳುಕ್ಕಿ (ಚಾಲುಕ್ಯ ನಾರಾಯಣಕಲ್) ಅಳತೆಯಲ್ಲಿ ಪಟ್ಟಿಗೆ ಐದು ತೂಂಬು ಧಾನ್ಯ ಬೆಳೆಯುವ ಒಂದು ಸ್ಥಳವನ್ನು ಪೂಜೆಗೆಂದು ಬಿಟ್ಟುಕೊಟ್ಟು ರಾಜಾಜ್ಞೆಯನ್ನು ಅಮಲಿಗೆ ತಂದ.ದೈನಂದಿನ ಪೂಜೆಯ ಸಾಹಿತ್ಯವು ಹೀಗೆ ತಿರುಮಂಗೈ ಆಳ್ವಾರರ ವಿಗ್ರಹವನ್ನು ಪ್ರತಿಷ್ಠಾಪಿಸಿದ ಪೆರಿಯನಾಟ್ಟಾರನಿಂದಲೇ ದೊರೆಯುವಂತಾಗಿ ತಿರುಕ್ಕುಡುವೂರಿನ ಮಹಾಜನಗಳ ಸಮ್ಮತಿಯಂತೆ ಪೆರಿಯ ನಾಟ್ಟುವೇಲನು ಈ ದಾಖಲೆಗೆ ಸಹಿ ಮಾಡಿದ.

(ಮುಂದುವರೆಯುತ್ತದೆ)



ತಿರುಮಲೆ ತಿರುಪತಿ ದೇವಸ್ಥಾನಗಳು, ತಿರುಪತಿ

# ಶ್ರೀ ಗೋದಾ ಅಷ್ಟೋತ್ತರ ಶತನಾಮಾವಳಿ

ಓಂ ಶ್ರೀ ರಂಗನಾಯಕಾಯೈ ನಮಃ
ಓಂ ಶ್ರೀ ಗೋದಾಯೈ ನಮಃ
ಓಂ ಶ್ರೀ ವಿಷ್ಣುಚಿತ್ತಾತ್ಮಜಾಯೈ ನಮಃ
ಓಂ ಶ್ರೀ ಸತ್ಯೈ ನಮಃ
ಓಂ ಶ್ರೀ ಗೋಪೀವೇಷಧರಾಯೈ ನಮಃ
ಓಂ ಶ್ರೀ ದೇವ್ಯೈನಮಃ
ಓಂ ಶ್ರೀ ಭೂಸುತಾಯೈ ನಮಃ
ಓಂ ಶ್ರೀ ಭೋಗಶಾಲಿನ್ಯೈ ನಮಃ
ಓಂ ಶ್ರೀ ತುಳಸೀವನಸಂಜಾತಾಯೈ ನಮಃ
ಓಂ ಶ್ರೀ ಶ್ರಿಯೈ ನಮಃ 10
ಓಂ ಶ್ರೀ ಧನ್ವಿಪುರವಾಸಿನ್ಯೈ ನಮಃ
ಓಂ ಶ್ರೀ ಭಟ್ಟನಾಥಪ್ರಿಯಕರಾಯೈ ನಮಃ
ಓಂ ಶ್ರೀ ಕೃಷ್ಣಯುತ ಭೋಗಿನ್ಯೈ ನಮಃ
ಓಂ ಶ್ರೀ ಅಮುಕ್ತಮಾಲ್ಯದಾಯೈ ನಮಃ
ಓಂ ಶ್ರೀ ಬಾಲಾಯೈ ನಮಃ
ಓಂ ಶ್ರೀ ರಂಗನಾಥ ಪ್ರಿಯಾಯೈ ನಮಃ
ಓಂ ಶ್ರೀ ವರಾಯೈ ನಮಃ
ಓಂ ಶ್ರೀ ವಿಶ್ವಂಭರಾಯೈ ನಮಃ
ಓಂ ಶ್ರೀ ಕಲಾಲಾಪಾಯೈ ನಮಃ
ಓಂ ಶ್ರೀ ಯತಿರಾಜ ಸಹೋದರ್ಯೈ ನಮಃ 20
ಓಂ ಶ್ರೀ ಕೃಷ್ಣಾನುರುಕ್ತಾಯೈ ನಮಃ
ಓಂ ಶ್ರೀ ಸುಭಗಾಯೈ ನಮಃ
ಓಂ ಶ್ರೀ ಸುಲಭ ಶ್ರಿಯೈ ನಮಃ
ಓಂ ಶ್ರೀ ಸುಲಕ್ಷಣಾಯೈ ನಮಃ
ಓಂ ಶ್ರೀ ಲಕ್ಷ್ಮೀಪ್ರಿಯ ಸಖ್ಯೈ ನಮಃ
ಓಂ ಶ್ರೀ ಶ್ಯಾಮಾಯೈ ನಮಃ
ಓಂ ಶ್ರೀ ದಯಾನ್ವಿತ - ದೃಗಂಚಲಾಯೈ ನಮಃ
ಓಂ ಶ್ರೀ ಫಲ್ಗುಣ್ಯ ವಿರ್ಭಾವಾಯೈ ನಮಃ
ಓಂ ಶ್ರೀ ರಮ್ಯಾಯೈ ನಮಃ
ಓಂ ಶ್ರೀ ಧನುರ್ಮಾಸಕೃತ ವ್ರತಾಯೈ ನಮಃ 30
ಓಂ ಶ್ರೀ ಚಂಪಕಾಶೋಕಪುನಾಗ -
ಮಾಲತೀ ವಿಲಸ್ಕತ ಚಾಯೈ ನಮಃ
ಓಂ ಶ್ರೀ ಆಕಾರತ್ರಯ ಸಂಪನ್ನಾಯೈ ನಮಃ
ಓಂ ಶ್ರೀ ನಾರಾಯಣ ಪದಾಶ್ರಿತಾಯೈ ನಮಃ
ಓಂ ಶ್ರೀ ಮದಷ್ಟಾಕ್ಷರೀ ಮಂತ್ರರಾಜ-
ಸ್ಥಿತಮನೋರಥಾಯೈ ನಮಃ
ಓಂ ಶ್ರೀ ಮೋಕ್ಷ ಪ್ರದಾನ ನಿಪುಣಾಯೈ ನಮಃ
ಓಂ ಶ್ರೀ ಮಹಾರಾಜಾದಿ ದೇವತಾಯೈ ನಮಃ
ಓಂ ಶ್ರೀ ಬ್ರಾಹ್ಮಣಾಯೈ ನಮಃ
ಓಂ ಶ್ರೀ ಲೋಕ ಜನನ್ಯೈ ನಮಃ
ಓಂ ಶ್ರೀ ಲೀಲಾಮಾನುಷರೂಪಿಣ್ಯೈ ನಮಃ
ಓಂ ಶ್ರೀ ಬ್ರಹ್ಮಜ್ಞಾನಪ್ರದಾಯೈ ನಮಃ 40
ಓಂ ಶ್ರೀ ಮಾಯಾಯೈ ನಮಃ
ಓಂ ಶ್ರೀ ಸಚ್ಚಿದಾನಂದ ವಿಗ್ರಹಾಯೈ ನಮಃ
ಓಂ ಶ್ರೀ ಮಹಾಪತಿವ್ರತಾಯೈ ನಮಃ
ಓಂ ಶ್ರೀ ವಿಷ್ಣುಗುಣ ಕೀರ್ತನ -
ಲೋಲುಪಾಯೈ ನಮಃ
ಓಂ ಶ್ರೀ ಪ್ರಪನ್ನಾರ್ತಿಹರಾಯೈ ನಮಃ
ಓಂ ಶ್ರೀ ನಿತ್ಯಾಯೈ ನಮಃ
ಓಂ ಶ್ರೀ ವೇದಸೌಧ ವಿಹಾರಿಣ್ಯೈ ನಮಃ
ಓಂ ಶ್ರೀ ರಂಗನಾಥ ಮಾಣಿಕ್ಯ -
ಮಂಜರ್ಯೈ ನಮಃ
ಓಂ ಶ್ರೀ ಮಂಜುಭಾಷಿಣ್ಯೈ ನಮಃ
ಓಂ ಶ್ರೀ ಪದ್ಮಪ್ರಿಯಾಯೈ ನಮಃ 50
ಓಂ ಶ್ರೀ ಪದ್ಮಹಸ್ತಾಯೈ ನಮಃ
ಓಂ ಶ್ರೀ ವೇದಾಂತದ್ವಯ ಬೋಧಿನ್ಯೈ ನಮಃ
ಓಂ ಶ್ರೀ ಸುಪ್ರಸನ್ನಾಯೈ ನಮಃ
ಓಂ ಶ್ರೀ ಭಗವತ್ಯೈ ನಮಃ
ಓಂ ಶ್ರೀ ಜನಾರ್ದನ ದೀಪಿಕಾಯೈ ನಮಃ
ಓಂ ಶ್ರೀ ಸುಗಂಧಾವಯವಾಯೈ ನಮಃ
ಓಂ ಶ್ರೀ ಚಾರುಮಂಗಳ ದೀಪಿಕಾಯೈ ನಮಃ
ಓಂ ಶ್ರೀ ಧ್ವಜವಸ್ತ್ರಾಂಕುಶಾಬ್ಜಾಂಕ -
ಮೃದುಪಾದ ತಲಾನ್ವಿತಾಯೈ ನಮಃ
ಓಂ ಶ್ರೀ ತಾರಕಾಕಾರ ನಖರಾಯೈ ನಮಃ
ಓಂ ಶ್ರೀ ಪ್ರವಾಳ ಮೃದುಳಾಂಗುಳ್ಯೈ ನಮಃ 60
ಓಂ ಶ್ರೀ ಕರ್ಮೋಪಮೇಯ ಪಾದ -
ಊರ್ಧ್ವಭಾಗಾಯೈ ನಮಃ
ಓಂ ಶ್ರೀ ಶೋಭನ ಪಾರ್ಷ್ಣಿಕಾಯೈ ನಮಃ
ಓಂ ಶ್ರೀ ವೇದಾಂತಭಾವ ತತ್ವಜ್ಞಾಯೈ ನಮಃ
ಓಂ ಶ್ರೀ ಲೋಕಾ ರಾಧ್ಯಾಂಘ್ರಿ -
ಪಂಕಜಾಯೈ ನಮಃ
ಓಂ ಶ್ರೀ ಆನಂದ ಬುದ್ಬುದಾಕಾರ -
ಸುಗುಲ್ಫಾಯೈ ನಮಃ
ಓಂ ಶ್ರೀ ಪರಮಾಂಶುಕಾಯೈ ನಮಃ
ಓಂ ಶ್ರೀ ಅತುಲ ಪ್ರತಿಭಾಯೈ ನಮಃ
ಓಂ ಶ್ರೀ ಭಾಸ್ವದಂಗುಳೀಯಕ -
ಭೂಷಿತಾಯೈ ನಮಃ
ಓಂ ಶ್ರೀ ಮೀನಕೇತನ ತೂಣೀರ ಚಾರು -
ಜಂಘಾ ವಿರಾಜಿತಾಯೈ ನಮಃ
ಓಂ ಶ್ರೀ ಕಕುದಬ್ಜಾ-ಸುಯುಗ್ಮಾಢ್ಯಾಯೈ ನಮಃ 70
ಓಂ ಶ್ರೀ ಸ್ವರ್ಣ ರಂಭಾಭ ಸಕ್ಥಿಕಾಯೈ ನಮಃ
ಓಂ ಶ್ರೀ ವಿಶಾಲ ಜಘನಾಯೈ ನಮಃ
ಓಂ ಶ್ರೀ ಪೀನ ಸುಶ್ರೋಣ್ಯೈ ನಮಃ
ಓಂ ಶ್ರೀ ಮಣಿ ಮೇಖಲಾಯೈ ನಮಃ
ಓಂ ಶ್ರೀ ಆನಂದ ಸಾಗರಾವರ್ತ ಗಂಭೀರ -
ಅಂಭೋಜನಾಭಿಕಾಯೈ ನಮಃ
ಓಂ ಶ್ರೀ ಪೂರ್ಣಲಾವಣ್ಯ ಸಂಯುತಾಯೈ ನಮಃ
ಓಂ ಶ್ರೀ ಕಲ್ಪಮಾಲಾನಿಭಭುಜಾಯೈ ನಮಃ
ಓಂ ಶ್ರೀ ಚಂದ್ರಖಂಡ ನಖಾಂಚಿತಾಯೈ ನಮಃ
ಓಂ ಶ್ರೀ ಪ್ರವಾಳಾ ಗುಳಿವಿನ್ಯಸ್ತ ಮಹಾ -
ರತ್ನಾಂಗುಳೀಯ ಕಾಯೈ ನಮಃ
ಓಂ ಶ್ರೀ ನವಾರುಣ ಪ್ರವಾಳಾಭ ಪಾಣಿದೇಶ -
ಓಂ ಶ್ರೀ ಸುಚುಬುಕಾಯೈ ನಮಃ 80
ಓಂ ಶ್ರೀ ಬಿಂಬೋಷ್ಠ್ಯೈ ನಮಃ
ಓಂ ಶ್ರೀ ಕುಂದದಂತಯುಜೇ ನಮಃ
ಓಂ ಶ್ರೀ ಕಾರುಣ್ಯರಸ ನಿಷ್ಯಂದ ಲೋಚನ -
ದ್ವಯಶಾಲಿನ್ಯೈ ನಮಃ
ಓಂ ಶ್ರೀ ಕಮನೀಯ ಪ್ರಭಾ ಭಾಸ್ವತ್ -
ಚಂಪಕಾನಿಭನಾಸಿಕಾಯೈ ನಮಃ
ಓಂ ಶ್ರೀ ದರ್ಪಣಾಕಾರ ವಿಪುಲ ಕಪೋಲ -
ದ್ವಿತಯಾನ್ವಿತಾಯೈ ನಮಃ
ಓಂ ಶ್ರೀ ಅನಂತಾರ್ಕಪ್ರಕಾಶೋದ್ಯನ್ಮಣಿ -
ತಾಟಂಕ ಶೋಭಿತಾಯೈ ನಮಃ
ಓಂ ಶ್ರೀ ಕೋಟಿಸೂರ್ಯಾಗ್ನಿ ಸಂಕಾಶನಾನಾ
ಭೂಷಣ ಭೂಷಿತಾಯೈ ನಮಃ
ಓಂ ಶ್ರೀ ಸುಗಂಧ ವದನಾಯೈ ನಮಃ
ಓಂ ಶ್ರೀ ಸುಭ್ರುವೇ ನಮಃ
ಓಂ ಶ್ರೀ ಅರ್ಧಚಂದ್ರಲಲಾಟಕಾಯೈ ನಮಃ 90
ಓಂ ಶ್ರೀ ಪೂರ್ಣಚಂದ್ರಾನನಾಯೈ ನಮಃ
ಓಂ ಶ್ರೀ ನೀಲಕುಟಿಲಾಲಕ ಶೋಭಿತಾಯೈ ನಮಃ
ಓಂ ಶ್ರೀ ಸೌಂದರ್ಯ ಸೀಮಾವಿಲಾಸ -
ಕಸ್ತೂರೀ ತಿಲಕೋಜ್ವಲಾಯೈ ನಮಃ
ಓಂ ಶ್ರೀ ಧಗದ್ಧ ಗಾಯಮಾನೋದ್ಯನ್ಮಣಿ -
ಭೂಷಣ ರಾಜಿತಾಯೈ ನಮಃ
ಓಂ ಶ್ರೀ ಜಾಜ್ವಲ್ಯಮಾನ ಸದ್ರತ್ನ ದಿವ್ಯ -
ಚೂಡಾವತಂಸ ಕಾಯೈ ನಮಃ
ಓಂ ಶ್ರೀ ಚಂದ್ರಸೂರ್ಯಾದಿ ಕಲ್ಯಾಣಭೂಷ -
ಣಾನ್ವಿತವೇಣಿ ಕಾಯೈನಮಃ
ಓಂ ಶ್ರೀ ಅತ್ಯರ್ಕಾನಲ ತೇಜೋವನ್ಮಣಿ -
ಕಂಚುಕಧಾರಿಣ್ಯೈ ನಮಃ
ಓಂ ಶ್ರೀ ಸದ್ರತ್ನ ಜಾಲ ವಿದ್ಯೋತದ್ವಿದುತ್
ಪುಂಜಾಭಶಾಟಿಕಾಯೈ ನಮಃ
ಓಂ ಶ್ರೀ ಪರಿಭಾಸ್ವದ್ರತ್ನ ಪುಂಜರಾಜ -
ನ್ಮಣಿ ವಿಶೋಷಕಾಯೈ ನಮಃ 100
ಓಂ ಶ್ರೀ ನಾನಾಮಣಿಗಣಾಕೀರ್ಣ ಕಾಂಚ
ನಾಂಗದ ಭೂಷಿತಾಯೈ ನಮಃ
ಓಂ ಶ್ರೀ ಕುಂಕುಮಾಗರು ಕಸ್ತೂರೀದಿವ್ಯ
ಚಂದನ ಚರ್ಚಿತಾಯೈ ನಮಃ
ಓಂ ಶ್ರೀ ಸ್ವೋಚಿತೋಜ್ವಲ ವಿದ್ಯೋತದ್
ವಿಚಿತ್ರಮಣಿ ಹಾರಿಣ್ಯೈ ನಮಃ
ಓಂ ಶ್ರೀ ಅಸಂಖ್ಯೇಯಸುಖಸ್ಪರ್ಶ -
ಸರ್ವಾವಯವ -ಭೂಷಿತಾಯೈ ನಮಃ
ಓಂ ಶ್ರೀಮಲ್ಲಿಕಾ ಪಾರಿಜಾತಾದಿ ದಿವ್ಯ -
ಪುಷ್ಪ ಚಯನಾನ್ವಿತಾಯೈ ನಮಃ
ಓಂ ಶ್ರೀರಂಗನಿಲಯಾಯೈ ನಮಃ
ಓಂ ಶ್ರೀಪೂಜ್ಯಾಯೈ ನಮಃ
ಓಂ ಶ್ರೀಸವಾಭೀಷ್ಟ ಫಲ ಪ್ರದಾಯೈ ನಮಃ 108

**ಸರ್ವೇ ಜನಾಃ ಸುಖಿನೋ ಭವಂತು**

# ತಿರುಪ್ಪಾವೈ ಸೌರಭ



ಗೋದಾದೇವಿ ಶ್ರೀಕೃಷ್ಣನ ಅನುಗ್ರಹಕ್ಕಾಗಿ ತಿರುಪ್ಪಾವೈ ವ್ರತವನ್ನು ಶ್ರೀವಿಲ್ಲಿಪುತ್ತೂರಿನಲ್ಲಿರುವ ತನ್ನ ಸ್ನೇಹಿತೆಯರೊಂದಿಗೆ ಸೇರಿ ಆಚರಿಸಿದಳು, ಆಕೆ ಆಚರಿಸಿದ ಈ ವ್ರತ ವಿಧಾನವನ್ನು ನಮಗೆ ತಿಳಿಸಿ ಕೊಟ್ಟಿದ್ದಾರೆ. ಅದೇ "ತಿರುಪ್ಪಾವೈ". ಈ ಪ್ರಬಂಧದಲ್ಲಿ 30 ಪಾಶುರ ಗಳಿವೆ.

**ಈ 30 ಪಾಶುರಗಳ ಭಾವವನ್ನು ನಮ್ಮ "ಸಪ್ತಗಿರಿ" ಓದುಗರಿಗಾಗಿ ನೀಡುತ್ತಿದೆ. ಆಸ್ವಾದಿಸೋಣ ಬನ್ನಿ...!!!**

ತೆಲುಗು ಮೂಲ : ಡಾ ॥ ಎಂ. ವೆಂಕಟಾಚಾರ್ಯ
ಅನುವಾದ : ಕೆ.ಎಸ್. ರಾಮಮೂರ್ತಿ

**ಮೊದಲನೆಯ ಪಾಶುರ – ಮಾರ್ಗಳಿ –**

ರೇಪಲ್ಲಿಯಲ್ಲಿನ ಕನ್ಯೆಗಳೇ ! ಇದು ಮಾರ್ಗಶಿರ ಶುಕ್ಲಪಕ್ಷ ನಾವು ನಾರಾಯಣ ಸ್ವರೂಪನಾದ ಶ್ರೀಕೃಷ್ಣನನ್ನು ಆರಾಧಿಸಿದರೆ, ಆತನು ನಮ್ಮ ವ್ರತಕ್ಕೆ ಬೇಕಾದ ಪರ್ತೆ ಎಂಬ ವಾದ್ಯವನ್ನು ನೀಡುವನು ಬನ್ನಿ.

**ಎರಡನೆಯ ಪಾಶುರ – ವೈಯತ್ತು –**

ಈ ವ್ರತ ಮಾಡುವಾಗ ನಿಷ್ಠೆಯಿಂದ ಪ್ರತಿದಿನ ಪ್ರಾತಃ ಕಾಲದಲ್ಲೇ ಸ್ನಾನ ಮಾಡೋಣ.ನಾವು ಹಾಲು ಕುಡಿಯ ಬಾರದು, ಕಾಡಿಗೆ ಹಚ್ಚದೆ, ಹೂ ಗಳನ್ನು ಮುಡಿಯಬಾರದು. ಕೆಟ್ಟ ಮಾತನ್ನು ಮಾತನಾಡಬಾರದು. ಹಿರಿಯ ರನ್ನು ಗೌರವಿಸ ಬೇಕು. ಭಿಕ್ಷೆ ನೀಡಬೇಕು.



**ಮೂರನೆಯ ಪಾಶುರ – ಓಂಗಿ –**

ತ್ರಿವಿಕ್ರಮನನ್ನು ನಾವು ಉಷಃಕಾಲದಲ್ಲಿ ಸ್ನಾನ ಮಾಡಿ ಸ್ತುತಿಸಿದರೆ ಮೂರು ಸಲ ಮಳೆ ಸುರಿಯುತ್ತದೆ. ಎಂದಿಗೂ ಸವೆಯದ ಸಂಪತ್ತು ಲಭಿ ಸುತ್ತದೆ.

**ನಾಲ್ಕನೆಯ ಪಾಶುರ – ಆಳಿಮಳೈಕ್ಕಣ್ಣಾ –**

ಓ ಮೇಘವೆ ನೀನು ಸಮುದ್ರದಲ್ಲಿನ ನೀರನ್ನು ಕುಡಿದು ಆಕಾಶಕ್ಕೆ ಸೇರಿ ನಮ್ಮ ವ್ರತಕ್ಕೆ ಬೇಕಾದ ವರ್ಷವನ್ನು ಚೆನ್ನಾಗಿ ಸುರಿಯುವೆಯಾ.

**ಐದನೆಯ ಪಾಶುರ – ಮಾಯನ್ನೈ–**


ಮಧುರಾಧಿಪತಿ, ಗೊಲ್ಲರ ಕುಲಕ್ಕೆಮಂಗಳದೀಪವಾದ ಶ್ರೀಕೃಷ್ಣನನ್ನು ಸ್ತುತಿಸಿ, ಹೂಗಳನ್ನರ್ಪಿಸಿ ಧ್ಯಾನಿಸಿ ವ್ರತ ಮಾಡಿದರೆ, ನಮ್ಮ ಪಾಪಗಳೆಲ್ಲವು ಬೆಂಕಿಯಲ್ಲಿ ಬಿದ್ದ ಹತ್ತಿಯಂತೆ ನಾಶವಾಗುತ್ತದೆ.

**ಆರನೆಯ ಪಾಶುರ – ಪುಳ್ಳುಮ್ –**

ಬಾಲೆಯೆ! ಪಕ್ಷಿಗಳು ಕೂಗುತ್ತಿವೆ. ದೇವಾಲಯದಲ್ಲಿ ಶಂಖ ಧ್ವನಿ ಮೊಳಗುತ್ತಿದೆ. ಪೂತನಿಯ ಹಾಲು ಕುಡಿದ ಭಗವಂತ ನನ್ನು ತಮ್ಮ ಹೃದಯ ದಲ್ಲಿ ಧ್ಯಾನಿಸುತ್ತಾ, ಯೋಗಿಗಳು ಹೇಳುವ ಹರಿನಾಮ ಸ್ಪಷ್ಟವಾಗಿ ಕೇಳಿ ಬರು ತ್ತಿದೆ, ಎದ್ದು ಬಾ.

**ಏಳನೆಯ ಪಾಶುರ – ಕೀಚು ಕೀಚು –**

ಎಲ್ಲೈ ಹುಚ್ಚು ಹುಡುಗಿ! ಭಾರದ್ವಾಜಪಕ್ಷಿಗಳು ಮಾಡುವ ಕಿಚು ಕಿಚು ಶಬ್ದಗಳು ಕೇಳಿಸುತ್ತಿಲ್ಲವೆ? ರೇಪಲ್ಲಿಯ ಗೃಹಿಣಿಯರು ನಿದ್ದೆಯಿಂದೆದ್ದು ಮೊಸರು ಕಡೆಯುವ ಧ್ವನಿ ಕೇಳಲಿಲ್ಲವೆ? ಕೇಶವನನ್ನು ನಾವು ಕೀರ್ತಿಸ ಬೇಕು ಎದ್ದು ಬಾ .




**ಎಂಬನೆಯ ಪಾಶುರ – ಕೀಳ್ವಾನಮ್ –**

ಬಾಲೆಯೆ! ಬೆಳಗಾಗಿದೆ. ಪಶುಗಳು ಹುಲ್ಲನ್ನು ಮೇಯಲು ಹೋಗುತ್ತೀವೆ. ಗೋಪಿಕೆಯರೆಲ್ಲರೂ ಶ್ರೀ ಕೃಷ್ಣನನ್ನು ಕೀರ್ತಿಸಲು ತೆರಳುತ್ತಿರುವರು. ನಿನಗಾಗಿ ಅವರು ಹೋಗದಂತೆ ತಡೆದಿರುವೆ. ದೇವಾದಿದೇವನನ್ನು ಕೀರ್ತಿಸಿದರೆ ಆ ಸ್ವಾಮಿ ನಮ್ಮ ಮೇಲೆ ದಯೆ ತೋರುತ್ತಾನೆ. ಬಾ !

**ಒಂಬತ್ತನೆಯ ಪಾಶುರ – ತೂಮಣಿ ಮಾದತ್ತು –**

ಮಣಿ ಖಚಿತವಾದ ಭವನದಲ್ಲಿ ದೀಪಗಳ ನಡುವೆ ನಿದ್ರಿಸುತ್ತಿರುವ ಸೋದರ ಮಾವನ ಮಗಳೆ! ಎದ್ದು ಬಾ ಅತ್ತೆ ನೀವೆ ಈಕೆಯನ್ನು ನಿದ್ದೆಯಿಂದ  ಎಚ್ಚಿಸಿ. ನಿನ್ನ ಮಗಳು ಮೂಕಿಯೇ? ಇಲ್ಲವೆ ಆಕೆಗೆ  ಕಿವುಡಾ? ಮಾಧವನ ನಾಮವನ್ನು ನಾವೆಲ್ಲರು ಸೇರಿ ಕೀರ್ತಿಸೋಣ. ಆಕೆಯನ್ನು ಬರಲು ಹೇಳು.

**ಹತ್ತನೆಯ ಪಾಶುರ – ನೋತ್ತು –**

ಬಾಲೆಯೆ ಬಾಗಿಲು ತೆಗೆಯದೆ ಹೋದರು, ಕಡೇಪಕ್ಷ ಉತ್ತರವನ್ನಾದರು ಕೊಡು ನಾರಾಯಣ ಸ್ವರೂಪನಾದ ಶ್ರೀ ಕೃಷ್ಣನನ್ನು ನಾವು ಕೀರ್ತಿಸಿದರೆ ನಮಗೆ ವಾದ್ಯವನ್ನು ಕೊಡುತ್ತಾನೆ. ಕುಂಭಕರ್ಣನು ಸಾಯುವಾಗ ತನ್ನ ಗಾಢ ನಿದ್ರೆಯನ್ನು ನಿನಗೆ ಕೊಟ್ಟನಾ?  ಏನು ಬಾಗಿಲನ್ನು ತೆರೆ.

**ಹನ್ನೊಂದನೆಯ ಪಾಶುರ – ಕಟ್ರುಕ್ಕರವೈ –**

ಗೋಸಂಪತ್ತಿನಿಂದ ಕೂಡಿದ, ಹಾಲು ಕರೆಯುವುದರಲ್ಲಿ ಸಮರ್ಥನಾದ ಗೋಪಾಲಕರ ವಂಶದಲ್ಲಿ ಹೊಳೆಯುವ ಬಂಗಾರದ ಬಳ್ಳಿಯೇ ! ನಮ್ಮ  ಸಖಿಯರೆಲ್ಲರು ಬಂದು ನಿನ್ನ ಬಾಗಿಲಲ್ಲಿ ನಿಂತಿ ರುವರು. ಶ್ರೀ ಕೃಷ್ಣನನ್ನು ಕೀರ್ತಿಸುತ್ತಿದ್ದರೂ ಸಹ ನೀನು ಎದ್ದು ಬರುತ್ತಿಲ್ಲ! ಇದರ ಅರ್ಥವೇನು?

**ಹನ್ನೆರಡನೆಯ ಪಾಶುರ – ಕನ್ನೈತ್ತು –**

ಶ್ರೀಕೃಷ್ಣನ  ಸೇವೆಯಲ್ಲಿ  ಗೋರಕ್ಷಣೆಯನ್ನು  ಸಹ ಮರೆಯುವ ದೊಡ್ಡ  ಭಗವಾತ್‌ಕೈಂಕರ್ಯ ಸಂಪತ್ತಿನಿಂದ ಕೂಡಿದ ಗೋಪಾ ಲನ ತಂಗಿಯೆ ! ನಮ್ಮೆಲ್ಲರಿಗೂ ಭೋಗ್ಯನಾದ ಸ್ವಾಮಿಯನ್ನು ಕೀರ್ತಿ ಸಿದರೂ, ನೀನು ಮಾತ್ರ ಮಾತನಾಡುತ್ತಿಲ್ಲ ! ನಿದ್ದೆಯಿಂದೇಳು!

**ಹದಿಮೂರನೆಯ ಪಾಶುರ –ಪುಳ್ಳಿನ್ ವಾಯ್ –**

ಬಕಾಸುರನನ್ನು, ರಾವಣನನ್ನು ವಧಿಸಿದ ಸ್ವಾಮಿಯನ್ನು ಕುರಿತು ಹಾಡುತ್ತಾ ಗೋಪಿಕೆಯರೆಲ್ಲರೂ ವ್ರತ ನಡೆಯುವ ಸ್ಥಳಕ್ಕೆ ಬಂದು ಸೇರಿರುವರು. ಅಂದವಾದ ಕಣ್ಣುಗಳುಳ್ಳ ಗೋಪಿಕಾ ಎದ್ದು ಬಾ. ನಮ್ಮೊಂದಿಗೆ ಸೇರಿಕೂ .

**ಹದಿನಾಲ್ಕನೆಯ ಪಾಶುರ –ಉಂಗಳ್ ಪುಳ್ಳೈಕ್ಕಡೈ –**

ಓ ಗೋಪಿಕೆ ನಿನ್ನ ಮನೆಯ ಹಿತ್ತಲಿನ ಬಾವಿಯಲ್ಲಿ ಕೆಂದಾವರೆಗಳು ಅರಳಿವೆ. ಸನ್ಯಾಸಿಗಳು ಭಗವತ್ಸೇವೆಗಾಗಿ ದೇವಾಲಯಕ್ಕೆ ಹೋಗುತ್ತಿರುವರು ಇನ್ನೂ ನಿದ್ದೆ ಮಾಡುತ್ತಿರುವೆಯಾ? ಭಗವಂತನನ್ನು ಕೀರ್ತಿಸಬೇಕು ಏಳು !

**ಹದಿನೈದನೆಯ ಪಾಶುರ –ಎಲ್ಲೇ –**

ಎಳೆಯ ಗಿಣಿಯಂತಿರುವ ಗೋಪಿಕೆಯೆ! ಎದ್ದು ಬಾ. ನೀನು ಮಾತಿನಲ್ಲಿ ಬಹಳ ಬುದ್ಧಿವಂತೆಯೆಂಬುದು ಗೊತ್ತಿದೆ. ನಿನ್ನ ಓರಗೆಯ ಗೋಪಿಕೆಯರೆಲ್ಲರೂ ಬಂದಿರುವರು. ಶ್ರೀ ಕೃಷ್ಣನನ್ನು ನಮ್ಮೊಂದಿಗೆ ಸೇರಿ ಕೀರ್ತಿಸಬೇಕು ಎದ್ದು ಬಾ.

### ಹದಿನಾರನೆಯ ಪಾಶುರ–ನಾಯಕ ನಾಯ್ –

ನಂದಗೋಪಾಲನ ಮನೆಯನ್ನು ರಕ್ಷಿಸುವವನೆ! ಮಣಿ ಮಯವಾದ ಬಾಗಿಲನ್ನು ತೆರೆ. ಗೊಲ್ಲಬಾಲಕರಾದ ನಮಗೆ ಶ್ರೀ ಕೃಷ್ಣನು ವಾದ್ಯವನ್ನು ಕೇಳಿಸುತ್ತೇನೆಂದು ಮಾತು ಕೊಟ್ಟಿದ್ದಾನೆ. ನಮ್ಮನ್ನು ಒಳಗೆ ಬಿಡು.

### ಹದಿನೇಳನೆಯ ಪಾಶುರ–ಅಂಬರಮ್ –

ವಸ್ತ್ರಗಳನ್ನು, ನೀರನ್ನು, ಅನ್ನವನ್ನು ದಾನ ಮಾಡುವ ನಂದ ಗೋಪಾಲಾ!ಸ್ತ್ರೀಕುಲಕ್ಕೆ,ಗೋಪಕುಲಕ್ಕೆ ದೀಪವೆನಿಸಿದ ಯಶೋದಾ! ಮೂರು ಲೋಕಗಳನ್ನು ಅಳೆದ ಸ್ವಾಮಿ! ಅಂದವಾದ ಕೆಂಪನೆಯ ಕಂಕಣಗಳನ್ನು ತೊಟ್ಟಿರುವ ಬಲರಾಮಾ! ನಿದ್ದೆ ಯಿಂದೆದ್ದು ಬನ್ನಿ!

### ಹದಿನೆಂಟನೆಯ ಪಾಶುರ–ಉಂದು ಮದಕಳಿತ್ತನ್ –

ಗಜ ಸಂಪತ್ತಿನಿಂದ ಕೂಡಿದ, ಅಪಜಯವೇ ತಿಳಿಯದ ನಂದ ಗೋಪಾಲನ ಸೊಸೆಯೆ ! ನೀಳಾದೇವಿ ನಿದ್ದೆಯಿಂದೇಳು! ಕೋಳಿಗಳು, ಕೋಗಿಲೆಗಳು ಕೂಗುತ್ತಿದೆ. ಸ್ವಾಮಿಯನ್ನು ಕೀರ್ತಿ ಸಲು ಬಂದಿರುವೆವು ದ್ವಾರವನ್ನು ತೆರೆದು ನಮ್ಮನ್ನು ಒಳಕ್ಕೆ ಬಿಡು.

### ಹತ್ತೊಂಬತ್ತನೆಯ ಪಾಶುರ–ಕುತ್ತುವಿಳಕ್ಕೂ –

ಸಾಲುಸಾಲಾಗಿ ದೀಪಗಳು ಬೆಳಗುತ್ತಿರುವಾಗ, ಮೆತ್ತನೆಯ ಹಾಸಿಗೆಯಲ್ಲಿ ನೀಳಾದೇವಿಯೊಂದಿಗೆ ನಿದ್ರಿಸುತ್ತಿರುವ ಸ್ವಾಮಿಯೇ! ಒಂದಾದರು ಮಾತನ್ನಾಡು ನೀಳಾದೇವಿಯೇ ಒಂದು ಕ್ಷಣವಾದರೂ ನೀನು ಪತಿಯ ವಿರಹವನ್ನು ನಮಗಾಗಿ ಸಹಿಸಿ ಕೊಳ್ಳಲಾರೆಯೆ ? ಇದು ಸರಿಯಲ್ಲ!

### ಇಪ್ಪತ್ತನೆಯ ಪಾಶುರ–ಮುಪ್ಪತ್ತು –

ದೇವತೆಗಳ ಭಯವನ್ನು ದೂರಮಾಡುವ ಬಲಶಾಲಿಯೆ! ನಿರ್ಮಲನೆ, ಅಂದವಾದ ವಕ್ಷಸ್ಸು ಹೊಂದಿದ ನೀಳಾದೇವಿಯೇ ನಿದ್ದೆ ಯಿಂದೇಳಿ ನಮ್ಮ ವ್ರತಕ್ಕೆ ಪದಾರ್ಥಗಳನ್ನು ನೀಡಿ, ನಮ್ಮ ವ್ರತವನ್ನು ಸುಸಂಪನ್ನವನ್ನಾಗಿಸು.

### ಇಪ್ಪತ್ತೊಂದನೆಯ ಪಾಶುರ–ಏತ್ತ ಕಲಂಗಳ್ –

ನಂದ ಗೋಪಾಲ ಕುಮಾರ ! ಶ್ರೀ ಕೃಷ್ಣ ನಿದ್ದೆಯಿಂದೇಳು ! ನಿನ್ನ ಶತ್ರುಗಳು ನಿನ್ನ ಬಲದಿಂದ ಸೋತು ನಿನ್ನನ್ನು ಸ್ತುತಿಸುವಂತೆ ನಾವು ಸಹ ನಮ್ಮ ದುರಭಿಮಾನವನ್ನು ತೊಳೆದು ನಿನ್ನನ್ನು ಕೀರ್ತಿ ಸಲು ಬಂದಿದ್ದೇವೆ.

### ಇಪ್ಪತ್ತೆರಡನೆಯ ಪಾಶುರ–ಅಂಗಣ್‌ಮಾಲಮ್ –

ಈ ಭೂಮಿಯನ್ನು ಪಾಲಿಸಿದ ರಾಜರೆಲ್ಲರೂ ಸ್ವಾಭಿಮಾನ ವನ್ನು ಬಿಟ್ಟು ನಿನ್ನ ಬಳಿಗೆ ಬಂದು ಸೇರುವಂತೆ, ನಾವು ಸಹ ನಿನ್ನ ಪಾದಗಳ ಬಳಿ ಸೇರಿರುವೆವು. ಸ್ವಾಮಿ! ಸೂರ್ಯಚಂದ್ರರಂತಿರುವ ನನ್ನ ನೇತ್ರಗಳನ್ನು ಕಟಾಕ್ಷಿಸು. ನಮ್ಮ ಪಾಪಗಳೆಲ್ಲವು ತೊಲಗುತ್ತವೆ.

### ಇಪ್ಪತ್ಮೂರನೆಯ ಪಾಶುರ – ಮಾರಿಮಲೈಮುಳಂಜಿಲ್ –

ಮಳೆಗಾಲದಲ್ಲಿ ಪರ್ವತ ಗುಹೆಗಳಲ್ಲಿ ನಿದ್ರಿಸುವ ವೀರ ಸಿಂಹವು ಗುಹೆಯಿಂದ ಹೊರಕ್ಕೆ ಬರುವಂತೆ ಕೃಷ್ಣಾ! ನೀನು ನಿನ್ನ ಭವನದಿಂದ ಹೊರಬಂದು ಸಭೆಯ ಸಿಂಹಾಸನದಲ್ಲಿ ಕುಳಿತು ನಮ್ಮ ಮನವಿಯನ್ನಾಲಿಸು.





**ಇಪ್ಪತ್ನಾಲ್ಕನೆಯ ಪಾಶುರ - ಅನ್ಱಿವ್ವುಲಕ್ಕಮ್ -**

ಅಂದು ಲೋಕವನ್ನಳೆದ ಸ್ವಾಮಿಯೆ! ನಿನ್ನ ಪಾದಗಳಿಗೆ, ನಿನ್ನ ಬಲಕ್ಕೆನಿನ್ನ ಕೀರ್ತಿಗೆ ಮಂಗಳ. ನಿನ್ನ ವಾತ್ಸಲ್ಯಗುಣಗಳಿಗೆ, ನಿನ್ನ ವೇಲಾಯುಧಕ್ಕೆಮಂಗಳವೆಂದು ನಿನ್ನನ್ನು ಸ್ತುತಿಸಿ ನಿನ್ನ ಬಳಿಯಿರುವ ವಾದ್ಯವನ್ನು ಪಡೆದುಕೊಳ್ಳಲು ನಿನ್ನ ಬಳಿಗೆ ಬಂದಿರುವೆ ಸ್ವಾಮಿ! ದಯೆ ತೋರು.

**ಇಪ್ಪತ್ತೈದನೆಯ ಪಾಶುರ -ಬರುತ್ತಿ -**

ಒಂದೇ ರಾತ್ರಿಯಲ್ಲಿ ದೇವಕಿಯ ಪುತ್ರನಾಗಿ, ಯಶೋದೆಯ ಮಗನಾಗಿ ಬೆಳದ ನಿನ್ನನ್ನು ಕೊಲ್ಲಲು ಪ್ರಯತ್ನಿಸಿದ ಕಂಸನ ಹೊಟ್ಟೆಯಲ್ಲಿ ಬೆಂಕಿಯಂತೆ ನಿಂತ ಕೃಷ್ಣನೆ ! ನಿನ್ನ ವಾದ್ಯವನ್ನು ನಮಗೆ ಅನುಗ್ರಹಿಸು. ನಿನ್ನ ವೀರಗಾಥೆಯನ್ನು ಹಾಡುತ್ತಾ ನಾವು ಕೃತಾರ್ಥರಾಗುವೆವು.

**ಇಪ್ಪತ್ತಾರನೆಯ ಪಾಶುರ -ಮಾಲೇ -**

ಭಕ್ತರ ಮೇಲೆ ಪ್ರೇಮವುಳ್ಳ ಮಣಿವಣ್ಣಾ! ಈ ವ್ರತವನ್ನು ನಾವು ಮಾಡಲು ನಮಗೆ ನಿನ್ನ ಪಾಂಚಜನ್ಯದ ಶಂಖಗಳನ್ನು ಭೇರಿಯೆಂಬ ವಾದ್ಯವನ್ನು ಪಲ್ಲಾಂಡು ಹಾಡುವವರನ್ನು ಅಂದವಾದ ದೀಪ, ಧ್ವಜವನ್ನು ನಮಗೆ ದಯಪಾಲಿಸು.

**ಇಪ್ಪತ್ತೇಳನೆಯ ಪಾಶುರ -ಕೂಡಾರೈ -**

ಕೂಡದವರನ್ನು ಜಯಿಸುವ ಗೋವಿಂದಾ ! ನಿನ್ನನ್ನು ಕೀರ್ತಿಸಿ ಪಡೆಯುವಂತಹ ಗೌರವ, ನಿನ್ನ ಹಸ್ತಗಳಿಂದ ಆಭರಣಗಳನ್ನು ಅಲಂಕರಿಸಿಕೊಂಡು, ಅಂ ದವಾದ ಬಟ್ಟೆಗಳನ್ನು ಧರಿಸುವೆವು. ಹಾಲಿನಿಂದ, ತುಪ್ಪದಿಂದ ಮಾಡಿದ ಪಾಯಸವನ್ನು ನಿನ್ನೊಂದಿಗೆ ಸೇವಿಸುವೆವು.

**ಇಪ್ಪತ್ತೆಂಟನೆಯ ಪಾಶುರ -ಕರವೈಗಳ್ -**

ಗೋವುಗಳನ್ನು ಕಾಡಿನಲ್ಲಿ ಮೇಯಿಸಿ ಜೀವಿಸುವ ನಾವು, ಜ್ಞಾನಿಗಳಲ್ಲ ಆದರೂ ಸಹ ನೀನು ನಮ್ಮ ಕುಲದಲ್ಲಿ ಹುಟ್ಟಿರುವನೆಂಬ ಹೆಮ್ಮನಮ್ಮದು. ಗೋವಿಂದಾ! ನಿನ್ನೊಂದಿಗೆ ನಮಗಿರುವ ಅನುಬಂಧ ಶಾಶ್ವತವಾದುದು. ಏನೂ ತಿಳಿಯದ ನಮ್ಮನ್ನೂ ಕ್ಷಮಿಸಿ ವಾದ್ಯವನ್ನು ದಯಪಾಲಿಸು.

**ಇಪ್ಪತ್ತೊಂಬತ್ತನೆಯ ಪಾಶುರ -ಶಿಱ್ರುಮ್ ಶಿರುಕಾಲೇ -**

ಗೊಲ್ಲಕುಲದಲ್ಲಿ ಜನಿಸಿದ ಓ ಗೋವಿಂದಾ ನಮ್ಮ ಸೇವೆಯನ್ನು ಸ್ವೀಕರಿಸಿ ಜನ್ಮದ ಅನುಬಂಧವನ್ನು ಸ್ಥಿರಗೊಳಿಸುವ ನಿನ್ನ ಸೇವೆಗೆ ಅವಕಾಶ ಕಲ್ಪಿಸು.

**ಮುವತ್ತನೆಯ ಪಾಶುರ - ವಂಗಕ್ಕಡಲ್ -**

ಮಾಧವನು, ಕೇಶವನು ಆಗಿರುವ ಶ್ರೀಕೃಷ್ಣನನ್ನು ಸುಂದರಿಯರಾದ ಭಾಮೆಯರು ಸ್ತುತಿಸಿ, ಆ ಸ್ವಾಮಿಯಿಂದ ಪ್ರಯೋಜನವನ್ನು ಪಡೆದುಕೊಂಡ ವೃತ್ತಾಂತವನ್ನು ಶ್ರೀವಿಲ್ಲಿಪುತ್ತೂರಿನ ಭಟ್ಟನಾಥನ ಪುತ್ರಿ ಗೋದಾದೇವಿ 30 ದ್ರಾವಿಡ ಪಾಶುರಗಳಲ್ಲಿ ತಿಳಿಸಿ ಕೊಟ್ಟಿದ್ದಾಳೆ. ಇದನ್ನು ಅನುಸರಿಸುವವರು ಶ್ರೀಪತಿಯ ಅನುಗ್ರಹವನ್ನು ಇಹಪರಗಳಲ್ಲಿ ಹೊಂದುವರು.

# ಗೋದಾ ದೇವಿಯ ಅಪ್ರತಿಮ ಭಕ್ತಿ

- ಅಖಿಲ ಮಧು
6363164078

ಭಕ್ತಿ ಚಳುವಳಿಯ ಪೋಷಿಸಿದ ಮತ್ತು ಪ್ರವರ್ತಕರಾದ ಅಸಂಖ್ಯಾತ ಸಂತರಲ್ಲಿ ಆಳ್ವಾರರು ಪ್ರಮುಖ ಸ್ಥಾನವನ್ನು ಪಡೆದರು. ಅವರೆಲ್ಲರೂ ವಿಭಿನ್ನ ಹಿನ್ನೆಲೆಯಿಂದ ಬಂದವರಾಗಿದ್ದರೂ, ಅವರು ದೇವರ ಅತೀಂದ್ರಿಯ ಹಾಗೂ ಅರ್ಥಗರ್ಭಿತ ಸಾಕ್ಷಾತ್ಕಾರದಲ್ಲಿ ಒಂದಾಗಿದ್ದರು. ಈ ಎಲ್ಲಾ ವೈಷ್ಣವ ಸಂತರು ಶ್ರೀಹರಿಯ ಹೆಸರಿನ ಮೂಲಕ ಮುಕ್ತಿಯನ್ನು ಪಡೆಯುವುದು ಪರಮ ಸಾಧನವೆಂದು ವೈಭವೀಕರಿಸಿದರು.

ಶ್ರೀಮನ್ ನಾರಾಯಣನ ಹನ್ನೆರಡು ದೈವಿಕ ಸಂದೇಶ ವಾಹಕರಲ್ಲಿ ಶ್ರೀಆಂಡಾಳ್ ಅಥವಾ ಗೋದಾದೇವಿಯು ಏಕೈಕ ಮಹಿಳೆ. ಸಂಪ್ರದಾಯದ ಪ್ರಕಾರ, ಅವಳು ಭೂಮಿ ತಾಯಿಯ ಅವತಾರ ಎಂದು ಹೇಳಲಾಗುತ್ತದೆ. ಅವಳ ಎರಡು ಸ್ತೋತ್ರಗಳು "ತಿರುಪ್ಪಾವೈ" ಮತ್ತು "ನಾಚಿಯಾರ್ ತಿರುಮೋಳಿ" ತನ್ನ ಪ್ರೀತಿಯ ಮಹಾವಿಷ್ಣುವಿನೊಂದಿಗಿನ ಐಕ್ಯಕ್ಕಾಗಿ ಅವಳ ಆಳವಾದ ಹಂಬಲವನ್ನು ವ್ಯಕ್ತಪಡಿಸುತ್ತವೆ.

ತಿರುಪ್ಪಾವೈ ಅನ್ನು ಕೇಳದ ವೈಷ್ಣವರು ಇರಲಾರರು. "ತಿರು" ಎಂದರೆ ಪವಿತ್ರ ಮತ್ತು "ಪ್ಪಾವೈ" ಎಂದರೆ ಪ್ರಾರ್ಥನೆ.ಇದು ಮೂವತ್ತು ಚರಣಗಳನ್ನು ಒಳಗೊಂಡಿರುವ ಅತ್ಯುನ್ನತ ತಮಿಳು ಸಾಹಿತ್ಯವಾಗಿದೆ. ಇದು ಕೇವಲ ಧರ್ಮನಿಷ್ಠೆ ಮತ್ತು ಭಕ್ತಿಯಿಂದ ಕೂಡದೆ, ಪ್ರಕೃತಿಯ ಸೊಗಸಾದ ವಿವರಣೆಯನ್ನು ಸಹ ಹೊಂದಿದೆ.

ತಿರುಪ್ಪಾವೈಯ ಧ್ಯೇಯ ಮತ್ತು ನಿರ್ಮಾಣವನ್ನು ಅರ್ಥ ಮಾಡಿಕೊಳ್ಳಲು, ಅದರ ಲೇಖಕಿ ಆಂಡಾಳ್ ಅವರ ದೈವಿಕ ಮತ್ತು ಭವ್ಯವಾದ ಜೀವನಕ್ಕೆ ನಾವು ತಿಳಿದುಕೊಳ್ಳಲೇಬೇಕು.

ಶ್ರೀವಿಲ್ಲಿಪುತ್ತೂರಿನ ವಿಷ್ಣುಚಿತ್ತ ಅಥವಾ ಪೆರಿಯಾಳ್ವಾರ್ ಅವರು ಸರ್ವವ್ಯಾಪಿ ವೈಷ್ಣವ ಶಕ್ತಿಯಾದ ನಾರಾಯಣನಿಗೆ ಪರಿಮಳಯುಕ್ತ ಹೂವುಗಳಿಂದ ತಾಜಾ ಮಾಲೆಗಳನ್ನು ಸಿದ್ಧಪಡಿಸುತ್ತಿದ್ದರು. ಒಂದು ಮುಂಜಾನೆ ತಮ್ಮ ತೋಟದಲ್ಲಿ ತುಳಸಿ ಎಲೆಗಳನ್ನು ಸಂಗ್ರಹಿಸುತ್ತಿದ್ದಾಗ, ಅವರಿಗೆ ಸಿಹಿಯಾದ ನಗು, ಹರ್ಷಚಿತ್ತದ ಮುಖ ಮತ್ತು ಚಿನ್ನದಂತ ಅಂಗಗಳನ್ನು ಹೊಂದಿರುವ ದಿವ್ಯ ತೇಜಸ್ಸಿನ ಹೆಣ್ಣು ಮಗುವನ್ನು ಕಂಡರು.ಮೃದುವಾದ ಸೂರ್ಯನ ಬೆಳಕಿನ ಜೊತೆಗೆ ತಂಪಾದ ಗಾಳಿಯಲ್ಲಿ ಅರಳಿದ ಶುದ್ಧ ಕಮಲದಂತೆ ಮಗು ಹೊಳೆಯಿತು. ಅವರು ಮಗುವನ್ನು ದೇವರ ಉಡುಗೊರೆಯಾಗಿ ಸ್ವೀಕರಿಸಿದರು ಮತ್ತು ಆಕೆಗೆ "ಗೋದಾದೇವಿ" ಎಂದು ಹೆಸರಿಸಿದರು, ಅಂದರೆ ಭೂಮಿಯಿಂದ ಜನಿಸಿದ ಹೆಣ್ಣೆಂದು ಅರ್ಥ, ರಾಜ ಜನಕನು ಸೀತೆಯನ್ನು ಭೂಮಿಯಿಂದ ಸ್ವೀಕರಿಸಿದಂತೆಯೇ, ಪೆರಿಯಾಳ್ವಾರ್ ಗೋದಾದೇವಿಯನ್ನು ತಮ್ಮ ಮಗಳಾಗಿ ದತ್ತು ಪಡೆದರು.

ಬಾಲ್ಯದುದ್ದಕ್ಕೂ ಗೋದಾದೇವಿಯು ಮಹಾವಿಷ್ಣುವಿನ ಭಾವಾನುವಾದದಲ್ಲಿ ಆನಂದಮಯವಾದ ಮನಃಸ್ಥಿತಿಯಲ್ಲಿದ್ದಳು. ಒಂದು ಸಂಜೆ ವಿಷ್ಣುಚಿತ್ತ ದೇವರಿಗೆ ಅರ್ಪಿಸಲು ತುಳಸಿ ಎಲೆಗಳುಳ್ಳ ಸುವಾಸನೆ ಬೀರುವ ಮಾಲೆಯನ್ನು ಸಿದ್ಧಪಡಿಸಿ ಸ್ನಾನ ಮಾಡಲು ಹೊರಟರು. ಗೋದಾದೇವಿ ಮಾಲೆಯನ್ನು ಅಲಂಕರಿಸಿ, ಕೊರಳಲ್ಲಿ ಧರಿಸಿ, ಕನ್ನಡಿಯಲ್ಲಿ ತನ್ನ ಸೌಂದರ್ಯವನ್ನು ಮೆಚ್ಚಿದಳು.ಇದ್ದಕ್ಕಿದ್ದಂತೆ ಕುಟೀರವನ್ನು ಪ್ರವೇಶಿಸಿದ ವಿಷ್ಣುಚಿತ್ತರು ಮಾಲೆಯನ್ನು ಧರಿಸಿದ ಗೋದಾದೇವಿಯನ್ನು ನೋಡಿದರು. ದೇವರಿಗೆ ಮಾಲೆಯನ್ನು ಅರ್ಪಿಸಬೇಕಾಗಿರುವುದರಿಂದ ಅವರು ಕೋಪಗೊಂಡರು, ದುಃಖಿತರಾದರು ಮತ್ತು ದೇವರ ಕೋಪಕ್ಕೆ ಹೆದರಿದರು.ಆಂಡಾಳ್ ಶ್ರೀಹರಿಯ ಮೇಲಿನ ಅಪ್ರತಿಮ ಭಕ್ತಿಯ ಬಗ್ಗೆ ತಿಳಿದಿದ್ದ ವಿಷ್ಣುಚಿತ್ತರು ಅವಳನ್ನು ಅಪಚಾರದಲ್ಲಿ ತಪ್ಪಿಸ್ಥಳೆಂದು ಪರಿಗಣಿಸಲಿಲ್ಲ.



ಮರುದಿನ ಬೆಳಿಗ್ಗೆ ವಿಷ್ಣುಚಿತ್ತರು ಎದ್ದಾಗ, ಹಿಂದಿನ ಸಂಜೆಯಂತೆ ತಾಜಾಮಾಲೆಯನ್ನು ನೋಡಿ ಅವರು ಅಘಾತಕ್ಕೊಳಗಾದರು ಆಗ ಆ ಪರಮಾತ್ಮನ ಶಕ್ತಿಯೇ ಪರಮ ಸತ್ಯವೆಂದು ಅರಿತು ಮಾಲೆಯನ್ನು ದೇವರಿಗೆ ಅರ್ಪಿಸಿದರು. ಅವರ ಆಶ್ಚರ್ಯಕ್ಕೆ ಹಾರವು ದುಪ್ಪಟ್ಟು ತಾಜಾ ತನ ಮತ್ತು ಹೊಳಪಿನಿಂದ ಹೊಳೆಯಿತು. ಮೊದಲೇ ತರುಣಿ ಗೋದಾ ದೇವಿಯು ಧರಿಸಿದ್ದ ಮಾಲೆಯನ್ನು ಮುಗುಳ್ನಗೆಯಿಂದ ಸ್ವೀಕರಿಸಿದಂತೆ ದೇವರು ವಿಷ್ಣುಚಿತ್ತರಿಗೆ ಭಾಸವಾದಂತಾಯಿತು. ಭಾವಪರವಶತೆಯಲ್ಲಿ, ಅವರು ತಮ್ಮ ಮಗಳ ಪರಿಶುದ್ಧ ಭಕ್ತಿಯ ಬಗ್ಗೆ ಹೆಮ್ಮೆಪಟ್ಟರು.

ಸಂಪೂರ್ಣ ಶರಣಾಗತಿಯಲ್ಲಿ,ಗೋದಾದೇವಿಯು ಶ್ರೀರಂಗನಾಥನ ಬಳಿಗೆ ಬಂದು ಭಗವಂತನೊಂದಿಗಿನ ತನ್ನ ಶಾಶ್ವತ ಸಂಬಂಧವನ್ನು ವ್ಯಕ್ತಪಡಿಸಿದಳು. ಅವಳು ದೇವರೊಂದಿಗೆ ಒಂದಾದಳು.ಆದ್ದರಿಂದ ಅವಳು "ಶ್ರೀರಂಗನಾಯಕಿ" ಎಂಬ ಹೆಸರನ್ನು ಪಡೆಯುತ್ತಾಳೆ. ಶ್ರೀರಂಗನಾಥನ ಪತ್ನಿ ಮತ್ತು ಸಾರ್ವತ್ರಿಕ ತಾಯಿ ಎಂದು ಅವಳನ್ನು ಪರಿಗಣಿಸಲಾಗಿದೆ. ಆಂಡಾಳ್ ಯಾವಾಗಲೂ ಭಕ್ತಿಯಿಂದ ಭಗವದ್ಗುಣಾನುಭವನ್ನು ಅನುಭವಿಸಿದಳು. ಅದು ಮಂಗಳಕರ ಭಾವನೆ ಮಾತ್ರವಲ್ಲದೆ ಪ್ರಕೃತಿ ಮತ್ತು ಸೃಷ್ಟಿಯಲ್ಲಿನ ಸರ್ವವ್ಯಾಪಿ ಶಕ್ತಿಯ ಅದ್ಭುತ ಗುಣಗಳು ಸತ್ಯ ಮತ್ತು ಧರ್ಮದ ಪ್ರತೀಕವಾದ, ಸಂಪೂರ್ಣ ವಿಶ್ವದ ಪ್ರಮುಖ ಶಕ್ತಿಯ ವ್ಯಕ್ತಿತ್ವವಾಗಿದ್ದ ಶ್ರೀಕೃಷ್ಣನನ್ನು ಅವಳು ಅಂತರಾಳದಿಂದ ಪ್ರೀತಿಸುತ್ತಿದ್ದಳು.

ಪವಿತ್ರವಾದ ಧನುರ್ಮಾಸ ಅಥವಾ ಮಾರ್ಗಳಿ ಮಾಸದಲ್ಲಿ ಆಂಡಾಳ್ ಶ್ರೀಕೃಷ್ಣನ ಬಳಿಗೆ ಬಂದು ತನ್ನ ಹಂಬಲ ಮತ್ತು ಮನವಿಯನ್ನು ತಿರುಪ್ಪಾವೈ ಮೂಲಕ ವ್ಯಕ್ತಪಡಿಸುತ್ತಾಳೆ.

ಆತ್ಮಜ್ಞಾನವನ್ನು ಪಡೆದ ಗೋದಾದೇವಿಯ ವಿನವು ಆತ್ಮವು ಭಗವಂತನ ಸಾರ್ವತ್ರಿಕ ಮತ್ತು ಶಾಶ್ವತ ಆತ್ಮದ ಶೇಷವಾಗಿದೆ. ನಿಸ್ವಾರ್ಥ ಆರಾಧನೆ ಮತ್ತು ಭಕ್ತಿಯಿಂದ ಸಾಧಿಸಬಹುದಾದ ವೈಷ್ಣವ ಆತ್ಮಾ ಮತ್ತು ಮೋಕ್ಷ ಭಾವದ ಪರಮಾನಂದದ ಪ್ರಜ್ಞೆಯನ್ನು ಪ್ರತಿಯೊಬ್ಬ ಮನುಷ್ಯನೂ ಅನುಭವಿಸಬೇಕೆಂಬುದೇ ಗೋದಾದೇವಿಯ ಬಯಕೆ.



ಭಕ್ತರು ದೇವಸ್ಥಾನದಲ್ಲಿ ಮೌನವನ್ನು ಆಚರಿಸಬೇಕು.
ಜೊತೆಗೆ " ಓಂ ನಮೋ ವೇಂಕಟೇಶಾಯ" ಎಂದು
ನಾಮ ಸ್ಮರಣೆಯನ್ನು ಧ್ಯಾನಿಸಬೇಕು.

ಕ್ಯೂಲೈನ್‌ನಲ್ಲಿ ಹೋಗುವಾಗ ಗೋವಿಂದ ನಾಮ
ಸ್ಮರಣೆಯನ್ನು ಮಾಡಬೇಕು.

ಬೇರೆಯವರನ್ನು ಸಂಬೋದನೆಯನ್ನು ಮಾಡು ವಾಗ
ಗೋವಿಂದಾ ಎಂದು ಸಂಬೋಧನೆಯನ್ನು ಮಾಡೋಣ.

ಇದರಿಂದ ಯಾವಾಗಲೂ ದೇವರ ಸ್ಮರಣೆಯಲ್ಲಿ
ಇರಬಹುದು.

# ತಿರುಪ್ಪಾವೈ ಅಸದೃಶ್ಯ ಹಿರಿಮೆ

**-ಡಿ॥ ಎ.ಗೀತ ವೀರರಾಘವನ್**

ತಿರುಪ್ಪಾವೈ ಅತ್ಯಂತ ವಿಶೇಷವಾದ ಎಣೆಯಿಲ್ಲದ ಶ್ರೇಷ್ಠತೆಯುಳ್ಳ ಒಂದು ಪ್ರಬಂಧ. "ವೇದಶ್ರಾಸ್ತ್ರಾತ್ ಪರಂ ನಾಸ್ತಿ" ಎಂದು ಹೇಳಲ್ಪಡುವ ಪರಮ ಶ್ರೇಷ್ಠವಾದ ವೇದಶಾಸ್ತ್ರಕ್ಕೆ ತಿರುಪ್ಪಾವೈಯನ್ನು ಒತ್ತೆ ಇಡಬಹುದೆಂದು "ವೇದಮನೈತ್ತು ಕ್ಕುಂ ವಿತ್ತಾಹಂ" ಎಂದು ಇದರ ಹಿರಿಮೆಯನ್ನು ನಮ್ಮ ಆಚಾರ್ಯರುಗಳು ಕೊಂಡಾಡುತ್ತಾರೆ. ಲೋಕದಲ್ಲಿ ಋಷಿಗಳು, ಮುನಿಗಳು, ವೇದ ಶಾಸ್ತ್ರಜ್ಞರು, ವೇದಾಂತಿಗಳಾದ ಆಚಾರ್ಯರು ಲೋಕಕಲ್ಯಾಣಕ್ಕಾಗಿ ಮಾನವನ ಜನ್ಮಸಾರ್ಥಕ್ಯಕ್ಕೆ ದಾರಿಯನ್ನು ಕಂಡು ಉಪದೇಶ ಮಾಡಿದ್ದಾರೆ ಮಾಡುತ್ತಲಿದ್ದಾರೆ. ಇವುಗಳನ್ನು ಆಚರಿಸುವುದು ಅಷ್ಟು ಸುಲಭವಲ್ಲ. ಆದರೆ ತಿರುಪ್ಪಾವೈ ಉಪದೇಶಿಸುವ ರೀತಿ ಬೇರೆಯದಾಗಿ ಅತ್ಯಂತ ವಿಶಿಷ್ಟವಾಗಿದೆ ಅತ್ಯಂತ ಸುಲಭವಾಗಿದೆ. ಶ್ರೀಗೋದಾದೇವಿ ಅದನ್ನು ಪ್ರಾಯೋಗಿಕವಾಗಿ ಆಚರಿಸಿ ತೋರಿದ್ದಾಳೆ. ತನ್ನೊಡನೆ ಸಖಿಯರನ್ನು ಕರೆದುಕೊಂಡು ಹೊರಟು ಅವರಿಗೆ ಜ್ಞಾನವನ್ನು ಉಪದೇಶಿಸುತ್ತಾ ಅವರಿಗೆ ಬರಬಹುದಾದ ಸಂದೇಹ ಗಳನ್ನು ಪರಿಹಾರ ಮಾಡುತ್ತಾ ಕೊನೆಯಲ್ಲಿ ಭಗವಂತನ ಮುಂದೆ ನಿಂತು "ತಮ್ಮ" ಕೋರಿಕೆಯನ್ನು ಅರಿಕೆ ಮಾಡಿದ್ದಾಳೆ. ಈ ಅರಿಕೆಯೂ ಆ ವರೆಗೆ ಯಾರೂ ಮಾಡದ, ಆಶ್ಚರ್ಯಕರವಾದುದು, ವಿಶಿಷ್ಟವಾದುದು ಹಾಗೂ ಎಲ್ಲಾ ಕಾಲದಲ್ಲಿ ಎಲ್ಲಾ ಮಕ್ಕಳೂ ಆಚರಿಸಬಹುದಾದಂತಹುದು.

ಈ "ಪಾವೈ" ಎಂಬ ಕೃತಿಗಳು ಒಂದು ಬಗೆಯ ಗೀತ ನಾಟಕಗಳು. ಈ ಕೃತಿಗಳು ದೈವ ಸಂಗೀತಕ್ಕೆ ಸೇರಿದವು. ಲೋಕ ವಿಚಾರಗಳನ್ನೂ ಒಳ ಗೊಂಡಿರುತ್ತವೆ. ಓದುಗರಿಗೆ ಆಶ್ಚರ್ಯವನ್ನೂ ಆನಂದವನ್ನೂ ಉಂಟು ಮಾಡುತ್ತವೆ. ಭಕ್ತರಿಗಂತೂ ಪರವಶತೆಯನ್ನುಂಟು ಮಾಡುತ್ತವೆ. ಪಾವೈ ಗ್ರಂಥಗಳ ಸಾಮಾನ್ಯ ವಿಷಯ - ಹೆಣ್ಣು ಮಕ್ಕಳು ತಮ್ಮ ಹಿರಿಯರು ಆಚರಿಸಿ ತೋರಿಸಿರುವಂತಹ ವ್ರತವನ್ನು ತಮ್ಮ ಇಷ್ಟ ದೇವತೆಯನ್ನು ಕುರಿತು ಆಚರಿಸಿ ತಮ್ಮ ಬೇಡಿಕೆಯನ್ನು ಹೊಂದುವುದು. ತಿರುಪ್ಪಾವೈನಲ್ಲಿ ಶ್ರೀಕೃಷ್ಣ ಪರ ಮಾತ್ಮನ ಮುಂದೆ ನಿಂತು ಆಂಡಾಳ್ "ಮೇಲೈಯಾರ್ ಶಯ್ಯನಹಳ್". (ಹಿರಿಯರು ಮಹಾಲಕ್ಷ್ಮಿ ದೇವಿ ಮೊದಲಾದವರು ಆಚರಿಸಿರುವುದು) ಎಂದು ಅರಿಕೆ ಮಾಡಿಕೊಂಡಿದ್ದಾಳೆ. ಇಂದು ಲಭ್ಯವಿರುವ ಪಾವೈ ಗ್ರಂಥಗಳು ಎರಡು. ತಿರುವೆಂಬಾವೈ ಎಂಬ ಹೆಸರುಳ್ಳ ೨೦ ಪದ್ಯಗಳು ಶೈವ ಕೃತಿ ಮತ್ತೊಂದು "ತಿರುಪ್ಪಾವೈ"೩೦ ಪದ್ಯಗಳನ್ನುಳ್ಳದು.

ಗೋಪಕನ್ಯೆಯರು ಹೇಮಂತ ಋತುವಿನ ಮೊದಲ ತಿಂಗಳಲ್ಲಿ "ಕಾತ್ಯಾಯಿನೀ" ವ್ರತವನ್ನು ಉಷಃಕಾಲದಲ್ಲಿ ಎದ್ದು ಒಬ್ಬರ ಕೈಯನ್ನು ಮತ್ತೊ ಬ್ಬರು ಹಿಡಿದುಕೊಂಡು ಶ್ರೀಕೃಷ್ಣನ ಸ್ತೋತ್ರಗಳನ್ನು ಹೇಳುತ್ತಾ ಕಾಳಿಂದಿಗೆ ಹೋಗಿ, ಅಲ್ಲಿ ಮಿಂದು ದೇವಿಯನ್ನು ಕುರಿತು ತಮಗೆ ಶ್ರೀಕೃಷ್ಣನು ಪತಿಯಾಗು ವಂತೆ ಅನುಗ್ರಹಿಸಬೇಕೆಂದು ಬೇಡಿಕೊಂಡು ಆಚರಿಸಿದ ವ್ರತವನ್ನು ಭಾಗ ವತದಲ್ಲಿ ಹೇಳಲ್ಪಟ್ಟಿದೆ.

ಶ್ರೀಗೋದಾದೇವಿ ತಿರುಪ್ಪಾವೈ ರಚಿಸಿರುವ ಹಿನ್ನೆಲೆ ಹಿರಿಯರು ತಿಳಿಸಿರುವುದು ಈ ರೀತಿಯಾಗಿದೆ.

ಶ್ರೀವೈಕುಂಠನಾಥನೂ ಸರ್ವೇಶ್ವರನೂ ಆದ ಲಕ್ಷ್ಮೀ ಪತಿಯು ಲೋಕವನ್ನು ಉದ್ಧರಿಸಿಲೋಕಕ್ಕೆ ವೇದ ಶಾಸ್ತ್ರಗಳನ್ನೂ ತನ್ನನ್ನು ಪಡೆಯುವ ಉಪಾಯವನ್ನು ತೋರಿಸಿ ಕೊಡಲು ಕೃಪಾ ಸಾಗರನಾಗಿ ತಾನೇ ಗೋಕುಲ ದಲ್ಲಿ ಅವತರಿಸಿ ತನ್ನ ಸೌಂದರ್ಯದಿಂದಲೂ ಗುಣಾತಿಶಯದಿಂದಲೂ ಆ ಊರಿನ ಐದು ಲಕ್ಷ ಗೃಹಗಳಲ್ಲಿನ ಎಲ್ಲಾ ಹೆಣ್ಣು ಮಕ್ಕಳ ಮನಸ್ಸನ್ನು ಆಕರ್ಷಿಸಿ ಅವರೊಡನೆ ಆಡಿ ಬೆಳೆದು ಯೌವನಕ್ಕೆ ಕಾಲಿಟ್ಟನು. ಆಗ ಗೋಪವೃದ್ಧರೆಲ್ಲಾ ಸೇರಿ ಕೃಷ್ಣನು ಸರಿಯಾದ ದಾರಿ ಹಿಡಿಯುತ್ತಿಲ್ಲಾ ಅವನೊಡನೆ ಹೆಣ್ಣು ಮಕ್ಕಳು ಬೆಳೆಯುವುದು ಹಿತವಲ್ಲ ಹೆಣ್ಣುಮಕ್ಕಳು ಕೃಷ್ಣನ ಮುಖವನ್ನು ನೋಡ ಕೂಡ ದೆಂದು ಕಟ್ಟು ಮಾಡಿದರು. ಹೆಣ್ಣು ಮಕ್ಕಳ ಭಾಗ್ಯ ಮತ್ತು ಶ್ರೀಕೃಷ್ಣನ ಪರ ಮಾನುಗ್ರಹದಿಂದ ಗೋಕುಲದಲ್ಲಿ ಮಳೆ ಬರಲಿಲ್ಲ. ಮಳೆಯೇ ಜೀವನಾ ಧಾರವಾದ ಕಾರಣ ಗೋಪ ವೃದ್ಧರಿಗೆ ಯೋಚನೆಯಾಯಿತು. ಎಲ್ಲರೂ ಯೋಚಿಸಿ ಕನ್ಯೆಯರಿಂದ ಮಳೆಗಾಗಿ ವ್ರತಾಚರಣೆ ಮಾಡಿಸುವುದು. ಅದನ್ನ ವರು ಯೋಗ್ಯರೀತಿಯಲ್ಲಿ ನೆರವೇರಿಸಲು ಗೋಪ ನಾಯಕರಾದ ನಂದ ಗೋಪರ ಕುಮಾರ ಶ್ರೀಕೃಷ್ಣನನ್ನೂ ಕರೆದು, ಮಳೆ ಬೇಕೇಬೇಕಾಗಿರುವು ದರಿಂದ ಶ್ರೀಕೃಷ್ಣನು ಮುಂದಾಳಾಗಿ ನಿಂತು ಗೋಪಕನ್ಯೆಯರಿಂದ ಈ ವ್ರತಾ ಚರಣೆ ಮಾಡಿಸಬೇಕು ಎಂದರು. ಕೂಡಲೇ ಶ್ರೀಕೃಷ್ಣನು "ಇದು ಸಾಧ್ಯವಿಲ್ಲ. ನಾನು ಒಪ್ಪಿಕೊಳ್ಳುವುದಿಲ್ಲ" ಎಂದನು. ಕಾರಣವನ್ನು ಊಹಿಸಿದ ಹಿರಿಯರು ಕೃಷ್ಣನನ್ನು ನಯವಾಗಿ ಒತ್ತಾಯಿಸಿ ಒಪ್ಪಿಸಿ ಕನ್ಯೆ ಯರನ್ನು ಅವನಲ್ಲಿ ಒಪ್ಪಿಸಿ ಹೊರಟರು.

ಆಗ ಕೃಷ್ಣನು ಕನ್ಯೆಯರಿಗೆ ನಾವು ಹೆಚ್ಚು ಕಾಲ ಇಲ್ಲಿದ್ದರೆ ಹಿರಿಯರು ಸಂದೇಹಪಡುತ್ತಾರೆ ಎಲ್ಲರೂ ನಿಮ್ಮ ನಿಮ್ಮ ಮನೆಗೆ ಹೋಗಿ. ಉಷಃಕಾಲಕ್ಕೆ ಮೊದಲೇ ಬಂದು ನನ್ನನ್ನು ಎಬ್ಬಿಸಿ. ಎಲ್ಲರೂ ಬೇಕಾದ ಸಲಕರಣೆಗಳೊಡನೆ ಸ್ನಾನಕ್ಕೆ ಹೋಗೋಣ ಎಂದನು. ಕನ್ಯೆಯರೆಲ್ಲಾ ಹೊರಟರು. ಯಾರಿಗೂ ರಾತ್ರಿ ನಿದ್ರೆ ಬರಲಿಲ್ಲ. ಬೇಗನೆ ಎದ್ದವರು ಹೊರಟು ಇತರರನ್ನು ಎಬ್ಬಿಸಿ ಕೊಂಡು ಶ್ರೀನಂದಗೋಪನ ಅರಮನೆ ಸೇರಿ ಶ್ರೀಕೃಷ್ಣನನ್ನು ಎಬ್ಬಿಸಿ ತಮ್ಮ ಅಪೇಕ್ಷಿತವನ್ನು ಬಿನ್ನವಿಸಿಕೊಂಡು ಸ್ವಾಮಿ ತಮ್ಮ ಕೋರಿಕೆಯನ್ನು ನೆರವೇರಿ ಸುವದಾಗಿ ವಾಗ್ದಾನ ಮಾಡಿದ ಮೇಲೆ ನೆಮ್ಮದಿಯಿಂದಿದ್ದರು.

ಗೋದಾದೇವಿ ತಿರುಪ್ಪಾವೈನಲ್ಲಿ ವ್ರತವನ್ನು ಕುರಿತು ಪ್ರಾರಂಭದಲ್ಲಿ ಹೇಳಿದ್ದರೂ ಗೋಪವೃದ್ಧರು ನಿಯಮಿಸಿದಂತೆ ಮಾಡಿ ಮುಗಿಸಿದ ವಿಚಾರ ಇಲ್ಲ. ಭಗವಂತನಿಗೆ ಸುಪ್ರಭಾತ ಹಾಡಿ ಎಬ್ಬಿಸಿ, ವಿಚಿತ್ರವಾದ ಒಂದು ಆಜ್ಞೆ ಯನ್ನು ಮಾಡಿ ಅದರಂತೆ ಸ್ವಾಮಿ ನಡೆದುಕೊಳ್ಳಲು, ತಮ್ಮ ವ್ರತಾಚರಣೆಯು ಹೊಸ ಮಾರ್ಗವಾದುದಲ್ಲವೆಂದೂ ತಾವು ಸ್ವಾಮಿಯನ್ನು ಅರಿತವರೆಂದೂ ತಮಗಾಗುವ ಲಾಭವನ್ನೂ ತಿಳಿಯ ಹೇಳುತ್ತಾರೆ ಮತ್ತು ಅವರು ಸ್ವಾಮಿಗೆ "ನಾವು ನಿನ್ನ ದಿವ್ಯ ಪಾದಾರವಿಂದಗಳಲ್ಲಿ ಪ್ರಣಾಮಪೂರ್ವಕ ಸ್ತುತಿಸುವುದರಲ್ಲಿ ಅರ್ಥವಿದೆ. ಅದನ್ನು ನಾವು ತಿಳಿಸಿಯೇ ನೀನು ತಿಳಿದುಕೊಳ್ಳಬೇಕು. ತಿಳಿಸು ತ್ತೇವೆ ಕೇಳು ಸ್ವಾಮಿ" ಎಂದು ಅದನ್ನು ತಿಳಿಯಪಡಿಸುತ್ತಾರೆ. ಅದೇ ರೀತಿ ತಿರುಮಂಗೈ ಆಳ್ವಾರವರು ಕೃಷ್ಣನಿಗೆ, ಕಣ್ಣಾ ನನ್ನ ಕಾವ್ಯದ ಸವಿ ತಿಳಿಯುವ ಆಸೆಯಿದ್ದರೆ ನನ್ನನ್ನೇ ಕೇಳು, ತಿಳಿಯ ಹೇಳುತ್ತೇನೆ." ಎನ್ನುತ್ತಾರೆ.

''ಗೋದೈ ತಮಿಳ್ ಐಯ್ಯೆದುಂ ಐನ್ದುಂ ಅರಿಯಾದ ಮಾನಿಡರ್ರೈ ವೈಯಂ ಶುಮಪ್ಪದುಂವಂಬು'' (ಗೋದಾದೇವಿ ಅನುಗ್ರಹಿಸದ ಐದೈದೂ ಐದು ಆದ ತಿರುಪ್ಪಾವೈಯನ್ನು ತಿಳಿದುಕೊಳ್ಳದ ಮನುಷ್ಯರನ್ನು ಭೂದೇವಿಯು ಧರಿಸಿಕೊಂಡಿರಬಹುದೇ ಎಂದರ್ಥ) ಇದರಿಂದ ಮುವತ್ತು ಪಾಶುರಗಳನ್ನು ಐದೈದಾಗಿ ವಿಂಗಡಿಸಿರುವುದು ತಿಳಿದುಬರುತ್ತದೆ.

'ತಿರುಪ್ಪಾವೈ' ಎಂದರೆ ದಿವ್ಯಳಾದ ಹೆಂಗಸು ಎಂದರ್ಥ.ಇದು ಆಂಡಾಳನ್ನೇ ಸೂಚಿಸುತ್ತದೆ. ಪಾವೈ ಎಂದರೆ 'ವ್ರತ' ಎಂದರ್ಥ. ಸಿರಿ ನೋಂಬನ್ನು ಆಚರಿಸಿದುದನ್ನು ವರ್ಣಿಸುವುದರಿಂದ ಇದು 'ತಿರುಪ್ಪಾವೈ' ಎಂದು ಈ ಪ್ರಬಂಧ ಹೆಸರು ಪಡೆಯಿತು.

ಶ್ರೀಕೃಷ್ಣನಲ್ಲಿ ಆಂಡಾಳ್‌ಗಿದ್ದ ಅತ್ಯತಿಶಯ ಅನುರಾಗವೇ ಈ ಪ್ರಬಂಧ ಹಾಡಲು ಮುಖ್ಯ ಕಾರಣ.ಮುರಳೀ ಮನೋಹರ ದಿವ್ಯ ಗೋಪಾಲ ಗೋಪಿಯರ ಹೃದಯವನ್ನು ಅಪಹರಿಸಿದ ಈ ಪ್ರಬಂಧದ ಸಂದರ್ಭ ಸನ್ನಿವೇಷಗಳು ಅದನ್ನು ಸೂಚಿಸುತ್ತವೆ. ಆಂಡಾಳ್ ತನ್ನನ್ನು ಒಬ್ಬ ಗೋಪಿಯಾಗಿ ಭಾವಿಸಿ ಈ ಪ್ರಬಂಧವನ್ನು ಹಾಡುತ್ತಿದ್ದಾಳೆ. ನಿದ್ರೆಯಲ್ಲಿದ್ದ ಸಖಿಯರನ್ನು ಎಬ್ಬಿಸಿ ಜೊತೆಯಲ್ಲಿ ಕರೆದುಕೊಂಡು ಗುಂಪಾಗಿ ಶ್ರೀಕೃಷ್ಣನು ಶಯನಿ ಸಿರುವ ಮಂದಿರಕ್ಕೆ ಹೋಗಿ ಅವನನ್ನು ಎಬ್ಬಿಸಿ ಅವನು ಪ್ರೀತ್ಯನು ಗ್ರಹದ ಸಂಕೇತವನ್ನು ಕೊಡಬೇಕೆಂಬ ಬೇಡಿಕೆಯನ್ನು ಅವನಲ್ಲಿ ಸಲ್ಲಿಸಿರುವುದನ್ನು ಇಲ್ಲಿ ಚಿತ್ರಿಸಲಾಗಿದೆ.

ಈ ಪ್ರಬಂಧದ ಐದು ಭಾಗಗಳನ್ನು ಈ ರೀತಿ ಮಾಡುವುದುಂಟು.

೧) ಈ ವ್ರತ ಉದ್ದೇಶ ಮೊದಲ ಐದು ಪಾಶುರ (ಪದ್ಯ) ಗಳಿದೆ. 'ನಾರಾಯಣನೇ ನಮಕ್ಕೇ ಪರೈತರುವಾನ್' (ನಾರಾಯಣನೇ ನಮಗೆ ಪರೈ ಅನುಗ್ರಹಿಸುವವನು) 'ನೀಂಗಾದ ಶೆಲ್ವಂ ನಿರೈಂದು (ನಾಶವಾಗಲಾರದಂತಹ ಸಂಪತ್ತು ತುಂಬಿ ಬರುವುದು) 'ನಾಂಗಳುಂ ಮಾರ್ಹಳಿ ನೀರಾಡಮಹಿಂನ್ದು' (ನಾವು ಮಾರ್ಗಶಿರ ಮಾಸದಲ್ಲಿ ನಲಿದು ನೀರಾಡುವಂತೆ) 'ಪೋಯ ಪಿಳ್ಳೈಯುಂ ಪುಹತರುವಾ ನಿನ್ರನವುಂ ತೀಯಿನಿಲ್ ತೂಶಾಹುಂ' (ನಮ್ಮ ಹಿಂದೆ ಸಂಭವಿಸಿದ ಹಾಗೂ ಮುಂದೆ ಬರಲಿರುವ ಪಾಪಗಳು ಬೆಂಕಿಯಲ್ಲಿ ಹಾಕಿದ ಹತ್ತಿಯ ನಾಶವಾಗುವುದು) ಎಂಬಲ್ಲಿ ಕಾಣಬಹುದು.

೨) ಈ ಪ್ರಬಂಧದ ೬ ನೆಯ ಪಾಶುರದಿಂದ ೧೫ ನೇ ಪಾಶುರ ಪೂರ್ತಿ ನಿದ್ರೆಯಲ್ಲಿರುವ ಸಖಿಯರನ್ನು ಎಬ್ಬಿಸಿ ವ್ರತಾಚರಣೆಗೆ ಕರೆ ನೀಡಲಾಗಿದೆ. ಈ ಸಖಿಯರು ಭಗವತ್ಸಂಬಂಧವನ್ನು ಪಡೆದವರು, ಭಗವದ್ವಿಷಯ, ಭಾಗವತ ವಿಷಯವನ್ನು ಅರಿತು ಮರೆತವರು, ಭಗವದಭಿಮತರು, ಉಪಾಯ ನಿಷ್ಠರು, ಭಗವತನಿಷ್ಠರು ಮೊದಲಾದ ಭಕ್ತೆಯರು.

೩) ಈ ಪ್ರಬಂಧದ ೧೬,೧೭, ೧೮, ಪಾಶುರಗಳಲ್ಲಿ ಭಗವಂತನ ತಿರುಮಾಳಿಗೆಯಲ್ಲಿ ನಿದ್ರಿಸಿರುವವರನ್ನು ಎಬ್ಬಿಸಿರುವುದು. ಇವರು ಪುರುಷಾಕಾರ ಭೂತರಾದವರು.

೪) ಪ್ರಬಂಧದ ೧೯ ರಿಂದ ೨೫ ಪಾಶುರದವರೆಗೆ ಯೋಗ ನಿದ್ರೆಯಲ್ಲಿರುವ ಜಗನ್ಮೋಹನ ಕೃಷ್ಣನನ್ನು ಎಬ್ಬಿಸಿ ಅವನಲ್ಲಿ ತಮ್ಮ ಬೇಡಿಕೆಯನ್ನು ಒಪ್ಪಿಸಿರುವುದು.

೫) ಪ್ರಬಂಧದ ೨೬ ರಿಂದ ೩೦ ಪಾಶುರಗಳಲ್ಲಿ ಈ ವ್ರತದ ಫಲವನ್ನು ಪ್ರತಿಪಾದಿಸಿದೆ. ಈ ಪ್ರಬಂಧದಲ್ಲಿ ವರ್ಣಿಸಿರುವ ಪ್ರಕೃತಿ ಸೌಂದರ್ಯ ಅತ್ಯದ್ಭುತವಾಗಿದೆ. ಬೆಳಕು ಹರಿಯುವ ಮೊದಲು ಕಂಡು ಬರುವ ಸನ್ನಿವೇಶಗಳ ವರ್ಣನೆ ಅತ್ಯಂತ ಮನೋಹರವಾಗಿದೆ.

''ಉನ್ ತನ್ನೋಡುತ್ತೋಮೇ ಯಾವೋಂ ಉನಕ್ಕೇ ನಾಮ್ ಆಳ್ ಚಯ್ಯೋಮ್ ಮತ್ತನಂ ಕಾಮಂಗಳ್ ಮಾತ್ತು'' (ಭಗವಂತನೊಡನೆ ನಮ್ಮದು ನಿತ್ಯ ಸಂಬಂಧ.) ಅವನಿಗೆ ಶೇಷಭೂತರಾದ ನಾವು ಅವನ ನಿತ್ಯ ಕೈಂಕರ್ಯವನ್ನು ಪಡೆದುಕೊಳ್ಳಬೇಕು ಎಂದು ಈ ಪ್ರಾರ್ಥನೆಯನ್ನು ಸಲ್ಲಿಸಲಾಗಿದೆ.

ಪರಮಪುರುಷಾರ್ಥವಾದ ಮೋಕ್ಷಸಾಧನೆಯನ್ನು ಒಬ್ಬ ಚೇತನನು ಹೇಗೆ ಸಾಧಿಸಬೇಕೆಂಬುದನ್ನು ಶಾಸ್ತ್ರಗಳು ಉಪದೇಶಿಸುತ್ತವೆ. ಮುಖ್ಯವಾಗಿ ರಾಗದ್ವೇಷಾದಿಗಳನ್ನು ಕಡಿಮೆ ಮಾಡಿಕೊಂಡು ಆತ್ಮಗುಣಗಳನ್ನು ಬೆಳಸಿಕೊಳ್ಳಬೇಕು. ಆತ್ಮಗುಣಗಳಿಲ್ಲದೆ ಹೋದರೆ ಭಕ್ತಿ ಮಾರ್ಗವಾಗಲೀ ಪ್ರಪತ್ತಿಯಾಗಲೀ ಸಿದ್ಧಿಸುವುದಿಲ್ಲ. ಈ ಆತ್ಮಗುಣಗಳ ಮಹತ್ವವನ್ನು ವಿಧವಿಧ ರೀತಿಯಲ್ಲಿ ಆಚಾರ್ಯರು ಉಪದೇಶಿಸಿದ್ದಾರೆ.

ಗೌತಮರು ತಮ್ಮ ಧರ್ಮಶಾಸ್ತ್ರದಲ್ಲಿ ನಲವತ್ತು ಸಂಸ್ಕಾರಗಳನ್ನು ನಿರೂಪಿಸಿದ್ದಾರೆ. ನಂತರ ಎಂಟು ಆತ್ಮಗುಣಗಳನ್ನೂ ಉಪದೇಶಿಸಿದ್ದಾರೆ. ದಯಾ ಸರ್ವಭೂತೇಷು, ಕ್ಷಾಂತಿ, ಅನಸೂಯ, ಶೌಚಂ, ಅನುಮಾನ, ಮಂಗಳ, ಅಕಾರ್ಪಣ್ಯ ಹಾಗೂ ಅಸ್ಪೃಹ, ನಲವತ್ತು ಸಂಸ್ಕಾರಗಳು ಪೂರ್ಣವಾಗಿದ್ದರೂ ಈ ಆತ್ಮಗುಣಗಳಿಲ್ಲದಿದ್ದರೆ ಅವನಿಗೆ ಬ್ರಹ್ಮಪ್ರಾಪ್ತಿ ಆಗುವುದಿಲ್ಲ.

ಸಾಧನ ಸಪ್ತಕಗಳಲ್ಲಿ 'ಕಲ್ಯಾಣ' ಎಂಬುವುದನ್ನು ಸತ್ಯ, ಆರ್ಜವ, ದಯಾ, ದಾನ, ಅಹಿಂಸಾ, ಅನಭಿದ್ಯಾ ಎಂದು ನಿರೂಪಿಸಿದ್ದಾರೆ.

ಭಗವದ್ಗೀತೆಯಲ್ಲಿ ಶ್ರೀಕೃಷ್ಣನು ಒಬ್ಬ ಚೇತನನು ಶರೀರ ಸಂಬಂಧವನ್ನು ಹೊಂದಿರುವಾಗ ಶರೀರ ಸಂಬಂಧದಿಂದ ಬರುವ ದೋಷಗಳನ್ನು ಪರಿಹರಿಸಿಕೊಂಡು. 'ಅಮಾನಿತ್ವಂ ಅದಂಭಿತ್ವ' ಮೊದಲಾದ ಗುಣಗಳನ್ನು ಬೆಳೆಸಿಕೊಳ್ಳಬೇಕೆಂದು ತಿಳಿಸಿದ್ದಾರೆ. ಅದ್ವೇಷ್ಟಾ ಸರ್ವ ಭೂತಮೈತ್ರಿ, ಕರುಣೆ, ನಿರ್ಮಮ, ನಿರಹಂಕಾರ, ಕ್ಷಮೆ ಎಲ್ಲವನ್ನೂ ಬೆಳೆಸಿಕೊಳ್ಳಬೇಕೆಂದು ಗೀತೆ ಉಪದೇಶಿಸಿದೆ.

ಯೋಗಶಾಸ್ತ್ರದಲ್ಲಿ ಯಮ, ನಿಯಮಗಳನ್ನು ಒತ್ತಿ ಹೇಳಿದ್ದಾರೆ. ಅಹಿಂಸಾ, ಸತ್ಯ, ಅಸ್ತೇಯ, ಬ್ರಹ್ಮಚರ್ಯ, ಅಪರಿ ಗ್ರಹ ಎಂಬುವ ಯಮಗಳು. ಶೌಚ, ಸಂತೋಷ, ತಪಸ್ಸು, ಸ್ವಾಧ್ಯಾಯ, ಈಶ್ವರ-ಪ್ರಣಿಧಾನ ಎಂಬುವ ನಿಯಮಗಳು.

ಎಲ್ಲಾ ಶಾಸ್ತ್ರಗಳು ಆಧ್ಯಾತ್ಮಯ ಸಾಧನೆಗೆ ಆತ್ಮಗುಣಗಳ ಅತ್ಯವಶ್ಯಕವೆಂದು ದೃಢವಾಗಿ ಪ್ರತಿಪಾದಿಸಿದೆ.

ಆಂಡಾಳ್ ತನ್ನ ತಿರುಪ್ಪಾವೈ ದಿವ್ಯ ಪ್ರಬಂಧದಲ್ಲಿ ಈ ಆತ್ಮಗುಣಗಳ ಸಂವರ್ಧನೆಯ ಅನಿವಾರ್ಯತೆಯನ್ನು ಮೊದಲಿನಿಂದ ಕೊನೆಯವರೆಗೂ ಸೂಚಿಸಿದ್ದಾಳೆ. ಭಗವಂತನ ಕರುಣಾ ಸಾಗರದಲ್ಲಿ ಪ್ರೀತಿ ಪ್ರವಾಹದಲ್ಲಿ ಅವಗಾಹನೆ ಮಾಡುವ ಪ್ರಯೋಜನವನ್ನೇ ಈ ಪ್ರಬಂಧ ಮುಖ್ಯ ವಿಷಯವಾಗಿ ಹೊಂದಿದೆ. ಅದಕ್ಕೆ ಅವಶ್ಯಕವಾದ ಅರ್ಹತೆ ಮನಶುದ್ಧಿಯೆಂದು ಎಲ್ಲಾ ಪಾಶುರಗಳಲ್ಲೂ ಸೂಚಿಸಿ ೨೯ ನೇ ಪಾಶುರದಲ್ಲಿ ಪರಮ ಪುರುಷಾರ್ಥವಾದ ನಿತ್ಯ ಕೈಂಕರ್ಯ ಪ್ರಾಪ್ತಿಯ, ಮೊದಲ ೨೮ ಪಾಶುರಗಳಲ್ಲಿ ಹೇಳಿದ ರೀತಿಯಲ್ಲಿ ಪರಿಶುದ್ಧವಾದ ಮನಸ್ಸಿನಿಂದ ನಡೆಸಿದ ದೃಢವಾದ ಭಗವತ್ ಚಿಂತನದಿಂದ ಪ್ರಸನ್ನವಾದ ಭಗವಂತನ ಅನುಗ್ರಹದಿಂದ ಲಭ್ಯವಾಗುವ ಪರಮ ಫಲ ಎಂದು ತಿಳಿಸಿದೆ.





# ಗಾಯಿತ್ರಿ ಚಿಂತನ

-ಶ್ರೀಮತಿ. ರಾಧಾಪ್ರಸಾದ್

ಶ್ರೀಮದ್ಭಗದ್ಗೀತೆ ಮಾನಸಿಕ ತುಮುಲಗಳನ್ನು ವಿಮರ್ಶಿಸುವಂತಹ ಒಂದು ಶ್ರೇಷ್ಠವಾದ ಕೃತಿ. ಗಾತ್ರದಲ್ಲಿ ವಾಮನನಾದರೂ ಅರ್ಥ ವೈಶಾಲ್ಯದಲ್ಲಿ ತ್ರಿವಿಕ್ರಮನಿದ್ದಂತೆ. ಅರ್ಜುನನ್ನು ನಿಮಿತ್ತವಾಗಿಟ್ಟುಕೊಂಡು ನಮ್ಮೆಲ್ಲರ ಸಂಶಯಗಳನ್ನು ಕೃಷ್ಣ ಅರ್ಜುನನ ಮೂಲಕ ಉತ್ತರಿಸಿದ್ದಾನೆ. ಕೃಷ್ಣ ಯಶೋದಾಳಿಗೆ ಬಾಯಲ್ಲಿ ಬ್ರಹ್ಮಾಂಡ ತೋರಿಸಿ ಮುದಗೊಳಿಸಿದ ಅಂತೆಯೇ ಗೀತೆಯೆಂಬ ಪುಟ್ಟ ಗ್ರಂಥದಲ್ಲಿ ಇಡೀ ತತ್ವ ಶಾಸ್ತ್ರವನ್ನೇ ಅಡಗಿಸಿಟ್ಟು ಕೃಷ್ಣ ಜ್ಞಾನಿಗಳಿಗೆ ಮುದವನ್ನು ನೀಡಿದ್ದಾನೆ. ಮಹಾಭಾರತ ಹದಿನೆಂಟು ಪರ್ವಗಳ ಪರ್ವತವಾದರೆ ಗೀತೆ ಹದಿನೆಂಟು ಸಣ್ಣ ಶಿಖರಗಳಿಂದ ಕೂಡಿದ ಗೌರಿಶಂಕರ. ಮಹಾಭಾರತದಲ್ಲಿ ನಾಲ್ಕು "ಗೀ" ವಾಕ್ಯಗಳ ಪ್ರಶಂಸೆ ಬಂದಿದೆ "ಗೀತಾ ಗಂಗಾ ಗಾಯತ್ರಿ ಗೋವಿಂದೇತಿ ಹೃದಿಸ್ಥಿತೇ ಚತುರ್ಗಕಾರ ಸಂಯುಕ್ತ ಪುನರ್ಜನ್ಮ ನ ವಿದ್ಯತೇ (ಭೀಷ್ಮಪರ್ವ ಅಧ್ಯಾಯ 43) ಸಂಸ್ಕೃತ ಬಲ್ಲವರಾದರೆ ಗೀತೆಯನ್ನು ಅರ್ಥಮಾಡಿಕೊಳ್ಳಲು ಮತ, ಧರ್ಮ, ಪ್ರದೇಶಗಳೆಂಬ ಸೀಮೆಯೇ ಇಲ್ಲ. ಆದ್ದರಿಂದಲೇನೋ ಗೀತೆಗೆ ಇಷ್ಟೊಂದು ವ್ಯಾಖ್ಯಾನಗಳಿವೆ. ಪ್ರಾಯಃ ಗೀತೆ ಬಿಟ್ಟರೆ ಬೇರಾವ ಧರ್ಮ ಗ್ರಂಥಕ್ಕೆ ಈ ವೈಭವವಿಲ್ಲ. ಗೀತೆ ಸುಂದರ ಸರಳ ಸಂಸ್ಕೃತದಿಂದ ಎಲ್ಲರಿಗೂ ಅವರವರ ಮಟ್ಟಿಗೆ ಅರ್ಥವಾಗುವಂತಹ ಕೃತಿ. ಕೃಷ್ಣನ ವಾಕ್ಯದ ಅಂತರಾರ್ಥ ತಿಳಿಯದೆ ತಮಗೆ ತೋಚಿದ್ದನ್ನು ವ್ಯಾಖ್ಯಾನ ಎಂದು ಹೇಳಿಕೊಂಡಿರುವುದು ವಿಪರ್ಯಾಸ. ಕೃಷ್ಣನ ಅಂತರಾಳವನ್ನು ಸರೆ ಹಿಡಿದಿರುವುದು ಶ್ರೀಮಧ್ವಾಚಾರ್ಯರೊಬ್ಬರೆ. ಗೀತೆಯ ವಾಕ್ಯಗಳು ಬಹಳ ಸುಲಭ ಎನ್ನಿಸುತ್ತದೆ ಆದರೆ ವಾಕ್ಯಗಳ ಅರ್ಥವೈಶಾಲ್ಯ ತುಂಬ ವಿಸ್ತಾರವಾದದ್ದು (ಬಾಲಸಂಘಮಪಿ ಬೋಧಯದ್ವಶಂ ದುರ್ನಿರೂಪವಚನಂ ಚ ಪಂಡಿತೈಃ ಸುಮದ್ವವಿಜಯ 9/10) ಓದಿದಾಗ ಸುಲಭ ಎನಿಸುವುದಾದರೂ ಯಥಾರ್ಥ ತಿಳಿದುಕೊಳ್ಳುವುದು ಅಪ್ಪೇಕರಿಣ.ಗೀತೆ ಹಾಲಿದ್ದಂತೆ, ಶ್ರೀಮಧ್ವಾಚಾರ್ಯರು ಬೆಣ್ಣೆಯಿದ್ದಂತೆ. ಅವರ ಪರಂಪರೆಯಲ್ಲಿ ಬಂದಂತಹ ಜ್ಞಾನಿವರೇಣ್ಯರು ತುಪ್ಪ ಇದ್ದಂತೆ. ಗೀತೆಯೆಂಬ ಅಮೃತ (ಹಾಲಿಗೆ ಅಮೃತ ಎಂಬ ಹೆಸರಿದೆ)ವನ್ನು ಹೆಪ್ಪು ಹಾಕಿ ಮೊಸರನ್ನು ಮಥಿಸಿದಾಗ ಬರುವುದು ಗೀತಾಭಾಷ್ಯ. ತಾತ್ಪರ್ಯ ನಿರ್ಣಯಗಳೆಂಬ ಬೆಣ್ಣೆ. ಟೀಕಾಕೃತ್ಪಾದರು. ಗುರುಸಾರ್ವಭೌಮರೇ ಮೊದಲಾದ ಜ್ಞಾನಿವರೇಣ್ಯರು ಆಚಾರ್ಯರು ರಚಿಸಿದ ಭಾಷ್ಯ ನಿರ್ಣಯಗಳಿಗೆ ರಚಿಸಿದ ಟೀಕಾ ಟಿಪ್ಪಣಿಗಳೇ ತುಪ್ಪ ಹೇಗೆ ಹಾಲಿನಲ್ಲಿ ಅಡಕವಾಗಿದೆಯೋ, ಹಾಗೆ ನಮಗೆ ಗೀತೆಯ ವಾಕ್ಯಗಳು ಅರ್ಥವಾಗಬೇಕಾದರೆ ಗುರುಗಳ ಅನುಗ್ರಹ ಹಾಗೂ ಜ್ಞಾನಿವರೇಣ್ಯರ ಟೀಕಾ ಟಿಪ್ಪಣಿಗಳು ಅತ್ಯಗತ್ಯ.

ಅಡವಿ ಜಯತೀರ್ಥಾಚಾರ್ಯರರೆಂದು ಖ್ಯಾತರಾದ ವಿಷ್ಣು ತೀರ್ಥರು ತಮ್ಮ "ಚತುರ್ದಶಿ" ಗ್ರಂಥದಲ್ಲಿ ಗಾಯಿತ್ರಿ ಮಂತ್ರದ ಅರ್ಥವನ್ನು "ಉಪನಯನ ಪ್ರಕರಣ'ದಲ್ಲಿ ಹೀಗೆ ಹೇಳಿದ್ದಾರೆ. ಯಾವನು ಜಗತ್ತಿಗೆ ಹುಟ್ಟುಕೊಡುವುದರ ಮೂಲಕ "ಸವಿತಾ" ಎಂದು ಕರೆಸಿಕೊಂಡಿದ್ದಾನೆಯೋ, ಕ್ರೀಡಾದಿಗುಣ ವಿಶಿಷ್ಟವುಳ್ಳನಾದ್ದರಿಂದ "ದೇವಾ ಎಂದು ಕರೆಸಿಕೊಂಡಿದ್ದಾನೆಯೋ. ನಮ್ಮನ್ನು ಹೊತ್ತುಕೊಂಡು ಮೋಕ್ಷದ ಕಡೆಗೆ ಸಾಗುವುದರಿಂದ "ಭರ್ಗ" ಎಂದು ಕರೆಸಿಕೊಂಡಿದ್ದಾನೆಯೋ ಅಂತಹ ಸೂರ್ಯ ಮಂಡಲ ಮಧ್ಯವರ್ತಿಯಾದ ನಾರಾಯಣನನ್ನೂ ಶ್ರೇಷ್ಠನೂ ಸರ್ವವ್ಯಾಪ್ತನು ಎಂದು ಚಿಂತಿಸಲೇಬೇಕಾದ ನಮ್ಮ ಬುದ್ಧಿಯನ್ನು ಅವನ ಕಡೆಗೇ ಪ್ರೇರಣ ಮಾಡುವಂಥ ಅದ್ಭುತ ರೂಪವನ್ನು ಚಿಂತನೆ ಮಾಡುವೆನು.

ಗಾಯಿತ್ರಿಮಂತ್ರದ ಅರ್ಥವನ್ನು ಗೀತೆಯಲ್ಲಿ ಕೆಲ ಸಂದರ್ಭಗಳಲ್ಲಿ ಕೃಷ್ಣ ನೇರವಾಗಿ ಹೇಳಿದ್ದಾನೆ ಕೆಲವು ಕಡೆ ಸೂಚ್ಯವಾಗಿ ಹೇಳಿದ್ದಾನೆ. ಗಾಯಿತ್ರಿ ಮಂತ್ರದ ಅರ್ಥವನ್ನು ಭಗವದ್ಗೀತೆಯಲ್ಲಿ ಸಮನ್ವಯ ಮಾಡುವುದೇ ಈ ಲೇಖನದ ಮುಖ್ಯ ಉದ್ದೇಶವಾಗಿದೆ.

**ಪ್ರಣವ :**

ಪ್ರಣವಶಬ್ದಕ್ಕೆ ಸಕಲಗುಣಪರಿಪೂರ್ಣ ಎಂದರ್ಥ. "ಸಮಂ ಪಶ್ಯನ್ ಹಿ ಸರ್ವತ್ರ ಸಮವಸ್ಥಿತಮೀಶ್ವರಮ್" (13/29) ಭಗವಂತನನ್ನು ಯಾರು ಎಲ್ಲರಲ್ಲಿಯೂ ಇದ್ದು ದೋಷರಹಿತನಾಗಿದ್ದಾನೆ. ಗುಣಪರಿಪೂರ್ಣನಾಗಿದ್ದಾನೆ, ಒಂದೇ ಪ್ರಕಾರದಲ್ಲಿದ್ದಾನೆ. ಎಲ್ಲರಿಗೂ ಸ್ವಾಮಿಯಾಗಿದ್ದಾನೆ ಎಂದು ತಿಳಿದು ಉಪಾಸನೆ ಮಾಡಿದವರು ನರಕದ ಹಾದಿಯನ್ನು ಹಿಡಿಯುವುದೇ ಇಲ್ಲ ಎಂದು ಕೃಷ್ಣ ಕ್ಷೇತ್ರ ಕ್ಷೇತ್ರಜ್ಞ ಯೋಗದಲ್ಲಿ ತಿಳಿಸಿದ್ದಾನೆ. ಹರಿಕಥಾಮೃತ ಸಾರದ ಕಕ್ಷಾತರಾತಮ್ಯ ಸಂಧಿಯಲ್ಲಿ ಪರಮಾತ್ಮನ ಪಾರಮ್ಯವನ್ನು ಹೀಗೆ ಕೊಂಡಾಡಿದ್ದಾರೆ "ಶ್ರೀರಮಣ ಸರ್ವೇಶ ಸರ್ವಗ ಸಾರಭೋಕ್ತ ಸ್ವತಂತ್ರ ದೋಷವಿದೂರ ಜ್ಞಾನನಂದ ಬಲ ಐಶ್ವರ್ಯಗುಣಪೋರ್ಣಃ (32/1)

**ಭೂ:**

ಭೂ ಶಬ್ದಕ್ಕೆ ಪರಿಪೂರ್ಣ ಎಂದೂ ಒಂದೊಂದು ಗುಣಗಳಿಂದ ಪರಿಪೂರ್ಣಯೆಂಬ ಅರ್ಥವಿದೆ. ಪರಿಪೂರ್ಣ ಎಂದು ಅರ್ಥವಿಟ್ಟುಕೊಂಡಾಗ, ಕೃಷ್ಣ ಹೇಳುತ್ತಾನೆ "ತಸ್ಮಾತ್ ಸರ್ವೇಶು ಕಾಲೇಷು ಮಾಮ ನುಸ್ಮರ ಯುದ್ಧ್ಯ ಚ ।ಮಯ್ಯರ್ಪಿತ ಮನೋಬುದ್ಧಿರ್ಮಾಮೇ ವೈಷ್ಯಸ್ಯ ಸಂಶಯ (8 /7) ನನ್ನನ್ನು ಸರ್ವಕಾಲದಲ್ಲೂ ನೆನೆ ಮನಸ್ಸು ಬುದ್ದಿಗಳನ್ನು ನನ್ನಲ್ಲೇ ತೊಡ ಗಿಸಿಕೊಂಡಾಗ ನೀನು ನನ್ನನ್ನೇ ಹೊಂದುವಿ ಸಂಶಯವಿಲ್ಲ. ಭಗವಂತ

ನೊಬ್ಬನೇ ಪರಿಪೂರ್ಣ ಹಾಗಾಗಿ ಕೃಷ್ಣ ಅರ್ಜುನನಿಗೆ ನನ್ನನ್ನು ನೆನೆಸಿಕೋ ನಿನಗೆ ಯಾವುದೇ ವಿಧವಾದ ಅನಿಷ್ಟಗಳಿರುವುದಿಲ್ಲ ಎಂದು ಭರವಸೆ ಕೊಡುತ್ತಾನೆ. ಹರಿಕಥಾಮೃತಸಾರದ ವ್ಯಾಪ್ತಿ ಸಂಧಿಯಲ್ಲಿ ಪರಮಾತ್ಮನಿಗೆ ಜ್ಞಾನವೆಂಬುದು ಪ್ರಧಾನವಾದ ಗುಣ ಆದರೂಳಗೆ ಎಲ್ಲ ಗುಣಗಳು ಅಡಗಿವೆ ಎಂಬುದನ್ನು "ಒಂದು ಗುಣದೊಳನಂತ ಗುಣಗಳು ಒಂದು ರೂಪುದೊಳಿಹವು ಲೋಕದೊಳೊಂದು ರೂಪದಿ ಧರಿಸಿ ತದ್ಗತ ಪದಾರ್ಥದೊಳ ಹೊರಗೆ (3/31 ) ಎಂದು ನಿರೂಪಿಸಿದ್ದಾರೆ.

**ಭುವಃ :**

ಭುವಃ ಎಂದರೆ ಲಕ್ಷ್ಮಿಗಿಂತಲೂ ಶ್ರೇಷ್ಠ ಅಥವಾ ಸರ್ವೋತ್ತಮ ಎಂದು ಅರ್ಥ. ಕೃಷ್ಣ ಜ್ಞಾನಯೋಗದಲ್ಲಿ (ಹನ್ನೆರಡನೆ ಅಧ್ಯಾಯ) ವಿಶೇಷವಾಗಿ ಲಕ್ಷ್ಮೀಗಿಂತಲೂ ನಾನೇ ಶ್ರೇಷ್ಠ ಎಂದು ಅಧ್ಯಾಯದ ಪೂರ್ತಿ ಹೇಳಿದ್ದಾನೆ. "ಬ್ರಹ್ಮಣೋ ಹಿ ಪ್ರತಿಷ್ಠಾಽಹಮ ಮೃತಸ್ಯಾವ್ಯ ಯಸ್ಯ ಚ ಶಾಶ್ವತಸ್ಯ ಚ ಧರ್ಮಸ್ಯ ಸುಖಸ್ಯೈ ಕಾಂತಿಕಸ್ಯ ಚಃ"॥ (12/27) ಎಂಬ ಶ್ಲೋಕದಲ್ಲಿ ಎಂದೂ ಅಳಿಯದ ಬದಲೂ ಆಗದ ಚಿತ್ರಕೃತಿ ಅಂದರೆ ಮಹಾಲಕ್ಷ್ಮೀಗೂ ನಾನೇ ಆಸರೆ. ಸನಾತನಧರ್ಮಕ್ಕೂ ಕೇವಲ ಸುಖಸ್ವರೂಪದ ಮೋಕ್ಷಕ್ಕೂ ಸಹ ನಾನೇ ನೆಲೆ ಎನ್ನುವ ಮೂಲಕ ತಾನೇ ಸರ್ವೋತ್ತಮ ಹಾಗೂ ತಾನೊಬ್ಬನೇ ಮೋಕ್ಷಪ್ರದ ಎಂದು ನೇರವಾಗಿ ತಿಳಿಸಿದ್ದಾನೆ. ಇದನ್ನು ಸಮರ್ಥಿಸಲು ಕೃಷ್ಣನ ಮಾತಗಳು ಹೀಗಿದೆ "ಕ್ಲೇಶೋಽದಿ ಕತರಸ್ತೇಷಾ ಮವ್ಯಕ್ತಾಸಕ್ತಚೇತಸಾಮ್ ಅವ್ಯಕ್ತಾ ಹಿ ಗತಿ ರ್ದುಃಖಂ ದೇಹವದ್ಭಿರ ವಾಪ್ಯತೇ (12/5). ನೀವು ಕೇವಲ ಲಕ್ಷ್ಮೀಯನ್ನು ಉಪಾಸನೆ ಮಾಡುವುದು ಬಹಳ ಕಷ್ಟ ಹೆಚ್ಚು ಶ್ರಮ, ಕಷ್ಟಪಟ್ಟು ಉಪಾಸನೆ ಮಾಡಿದರೂ ಲಕ್ಷ್ಮೀ ಮೋಕ್ಷ ಕೊಡಲು ಸ್ವತಂತ್ರಳಲ್ಲ ಅವಳು ನನ್ನನ್ನು ಮೊರೆ ಹೋಗಲೇಬೇಕು. ಈ ಶ್ಲೋಕದಲ್ಲಿ ಅವ್ಯಕ್ತ ಶಬ್ದ ಇದೇ ಅದಕ್ಕೆ ಅರ್ಥ ಅವ್ಯಕ್ತ ತತ್ವ ಅಂದರೆ ಮಹಾಲಕ್ಷ್ಮೀ ಎಂದು ಅರ್ಥ, ಹರಿಕಥಾಮೃತಸಾರದ ಕಕ್ಷಾತಾರತಮ್ಯ ಸಂಧಿಯಲ್ಲಿ ಪರ ಮಾತ್ಮ ಮಹಾಲಕ್ಷ್ಮಿಗಿಂತಲೂ ಶ್ರೇಷ್ಠ ಎಂದು ಮಹಾಲಕ್ಷ್ಮೀಯ ಕೈಲ್ಲೇ ಹೇಳಿಸಿದ್ದಾರೆ. "ಶ್ರೀ ಮಹಿಳೆ ಸುರೂಪ ಗುಣಗಳ ಸೀಮೆಗಾಣದೆ ಯೋಚಿಸುತ ಮಮ ಸ್ವಾಮಿ ಮಹಿಮೆಯ ದೆಂತುಂಟೇಂದಡಿಗಡಿಗೆ ಬೆರಗಾದ (32/3)

**ಸ್ವಃ :**

ಸ್ವಃ ಎಂದರೆ ಸುಖರೂಪಿ ಎಂಬರ್ಥ. ಕ್ಷೇತ್ರಕ್ಷೇತ್ರಜ್ಞ ಯೋಗದಲ್ಲಿ ಕೃಷ್ಣ ತಾನು ಸುಖರೂಪಿ ಎಂದು ಗೂಡಾರ್ಥದಲ್ಲಿ ಹೇಳಿದ್ದಾನೆ." ಶರೀರಸ್ಥೋಪಿ ಕೌಂತೇಯ ನ ಕರೋತಿ ನ ಲಿಪ್ಯತೇಃ (13/32). ದೇಹದೊಳಗೆ ನಾನು ಜೀವನೊಡನಿದ್ದರೂ ಜೀವನ ಸುಖ ದುಃಖಾದಿಗಳಿಂದ ನನಗೆ ಯಾವುದೇ ವಿಕಾರವಿಲ್ಲ. ನಾನು ಎಲ್ಲವನ್ನು ಮಾಡಿಯೂ ಮಾಡ ದಂತೆ ಇರುವೆನು. "ಆನಂದಮಯಗೆ ಚಿನ್ಮಯಗೆ ಶ್ರೀಮನ್ನಾರಾಯಣಗೆ. " ಎಂಬ ದೇವರ ನಾಮದಲ್ಲಿ ವಾದಿರಾಜರು ಆನಂದ ಶಬ್ದವನ್ನು ನಾರಾಯಣನಲ್ಲಿ ಸಮನ್ವಯ ಮಾಡಿದ್ದಾರೆ.

**ತತ್ :**

ತತ್ ಎಂದರೆ ವ್ಯಾಪ್ತ ಅಂದರೆ ಎಲ್ಲೆಡೆ ತುಂಬಿದ್ದಾನೆ. ಪರಮಾತ್ಮ ಎಲ್ಲ ಕಾಲದಲ್ಲೂ ಎಲ್ಲ ದೇಶಗಳಲ್ಲೂ ಹಾಗೂ ಎಲ್ಲ ಗುಣಗಳಿಂದ ತುಂಬಿದ್ದಾನೆ. ಕೃಷ್ಣ ತನ್ನ ವಿಭೂತಿ ರೂಪಗಳನ್ನು ಹೇಳುವಾಗ ಈ ರೀತಿ ಅರ್ಥಬರುವಂತಹ ಶ್ಲೋಕ ಹೇಳಿದ್ದಾನೆ ' "ಅಹಮಾತ್ಮಾ ಗುಡಕೇಶಾ ಸರ್ವಭೂತಾಶಯಸ್ಥಿತಃ"...॥ (10/20) . ನಾನು ಎಲ್ಲೆಡೆ ತುಂಬಿದ್ದು ಸಕಲ ಜೀವಿಗಳ ಹೃದಯ ಗುಹೆಯಲ್ಲಿ ಅಂತರ್ಯಾಮಿಯಾಗಿ ನೆಲೆಸಿರುವೆನು. ಇಲ್ಲಿ ಅರ್ಜುನ ನಿಗೆ ಗುಡಾಕೇಶ ಎಂದು ಕರೆದಿರುವುದು ವಿಶೇಷ. ದೇವತೆಗಳು ಅನಿಮಿಷರು ಅಂದರೆ ನಿದ್ರೆಯನ್ನು ಗೆದ್ದವರು ಎಂದರ್ಥ, ಅರ್ಜುನ ಮೂಲರೂಪದಿಂದ ಇಂದ್ರ ಎಂಬುದನ್ನು ಕೃಷ್ಣ ಸೂಚಿಸಿದ್ದಾನೆ. ಇನ್ನೊಂದು ಶ್ಲೋಕ ಹೀಗಿದೆ. "ಯಸ್ಯಾಂತಸ್ಥಾನಿ ಭೂತಾನಿ ಯೇನ ಸರ್ವಮಿದಂ ತತಮ್" (8/22) ನಾನು ಎಲ್ಲರ ಒಳಗೆ ಹೊರಗೆ ತುಂಬಿಕೊಂಡಿದ್ದೇನೆ, ಎಂದ ತನ್ನ ಸ್ವರೂಪವನ್ನು ಸ್ಪಷ್ಟವಾಗಿ ಹೇಳಿದ್ದಾನೆ. ಅರ್ಜುನ ನೋಡಿದ ವಿಶ್ವರೂಪವಂತೂ ಪರಮಾತ್ಮ ಎಲ್ಲೆಡೆ ವ್ಯಾಪ್ತ ಎಂಬುದನ್ನು ನೇರವಾಗಿ ತಿಳಿಯುತ್ತದೆ. ಹನ್ನೊಂದನೆ ಅಧ್ಯಾಯ ಉದ್ದಕ್ಕೂ ವ್ಯಾಪ್ತ ಎಂಬ ಗುಣ ಚಿಂತನೆಯಿದೆ. ಜಗನ್ನಾಥ ದಾಸರು ಹರಿಕಥಾಮೃತಸಾರದಲ್ಲಿ ಪರಮಾತ್ಮನ ವ್ಯಾಪ್ತತೆ ಯನ್ನು ನಿರೂಪಿಸಲು ವ್ಯಾಪ್ತಿ ಸಂಧಿ ಎಂಬ ಪ್ರತ್ಯೇಕ ಸಂಧಿ ಯನ್ನೇ ರಚಿಸಿದ್ದಾರೆ. ಅದರಲ್ಲಿ ಒಂದು ಉದಾಹರಣೆ ನೋಡು ವುದಾದರೆ "ಎಲ್ಲಿ ಕೇಳಿದರೆಲ್ಲ ನೋಡಿದರೆಲ್ಲ ಬೇಡಿದರಲ್ಲಿ ನೀಡಿದರೆಲ್ಲಿ ಓಡಿದರಲ್ಲಿ ಆಡಿದರೆಲ್ಲಿ ಇರತಿಹನು.. (3/21).

**ಸವಿತಾ :**

ಸವಿತಾ ಶಬ್ದದ ಅರ್ಥ ಸೃಷ್ಟಿಕರ್ತ. "ಮಯಾಽಧ್ಯ ಕ್ಷೇಣ ಪ್ರಕೃತಿಃ ಸೂಯತೇ ಸಚರಾಚರಮ್" (9/10) ಈ ಶ್ಲೋಕದಲ್ಲಿ ಕೃಷ್ಣ ತಾನು ಸೃಷ್ಟಿಕರ್ತ ಎಂಬುದನ್ನು ಅರ್ಜುನನಿಗೆ ನೇರವಾಗಿ ತಿಳಿಸಿದ್ದಾನೆ. ಅರ್ಜುನನಿಗೆ ವಿಶ್ವರೂಪವನ್ನು ತೋರಿಸುವ ಸಂದರ್ಭದಲ್ಲಿ ತಾನು ಸೃಷ್ಟಿಕರ್ತನೆಂಬುದನ್ನು ಸೂಚ್ಯವಾಗಿ ಅರ್ಜುನನ ಮೂಲಕ ಹೇಳಿದ್ದಾನೆ. "ಪಶ್ಯಾಮಿ ದೇವಾಂ ಸ್ತವ ದೇವ ದೇಹೇ ಸರ್ವಾಂಸ್ತಥಾ ಭೂತವಿಶೇಷ ಸಂಘಾನ್॥ (11/15) ಈ ಶ್ಲೋಕದಲ್ಲಿ ಅರ್ಜುನ ಕೃಷ್ಣನ ದೇಹದಲ್ಲಿ ಎಲ್ಲ ದೇವತೆಗಳನ್ನು, ಎಲ್ಲ ಪ್ರಾಣಿಗಳನ್ನು ಹಾಗೂ ಎಲ್ಲ ಜೀವ ರಾಶಿಗಳನ್ನು ನೋಡುತ್ತಾನೆ. ಪರಮಾತ್ಮನ ದೇಹವೆಂದರೆ ಬ್ರಹ್ಮಾಂಡ ಅದರಲ್ಲಿ ಎಲ್ಲರೂ ಇದ್ದಾರೆ ಎಂದರೆ ತಾನೇ ಸೃಷ್ಟಿಕರ್ತ ಎಂಬುದಾಗಿ ಯುಕ್ತಿಯಿಂದ ಹೇಳಿದ್ದಾನೆ.

ಹರಿಕಥಾಮೃತಸಾರದ ಕರುಣಾಸಂಧಿಯಲ್ಲಿ ಪರಮಾತ್ಮನು ಬ್ರಹ್ಮನಲ್ಲಿದ್ದು ಈ ಜಗತ್ತನ್ನು ಸೃಷ್ಟಿಸುತ್ತಾನೆ ಎಂಬ ಪ್ರಮೇಯವನ್ನು ನಿರೂಪಿಸುತ್ತಾರೆ "ಜಗವನೆಲ್ಲದ ನಿರ್ಮಿಸುವ ನಾಲ್ಮೊಗನೊಳಗೆ ತಾನಿದ್ದು ಸಲುಹುವ ಗಗನ ಕೇಶನೊಳಿದ್ದು ಸಂಹರಿಸುವನು ಲೋಕಗಳ" (2/8)

**ವರೇಣ್ಯಂ :**

ಎಲ್ಲರಿಂದಲೂ ವಂದಿತನಾದವನು ಅಥವಾ ಎಲ್ಲ ರಿಂದ ಪೂಜ್ಯನಾದವನು ಎಂದು ಅರ್ಥ. ಈ ಪ್ರಮೇಯವನ್ನು ಗೀತೆಯ ಉದ್ದಗಲಕ್ಕೂ ಕಂಠತಃ ಹೇಳಿದ್ದಾನೆ. ಒಂದು ಉದಾಹರಣೆ ನೋಡುವುದಾದರೆ 'ಕಸ್ಮಾಚ್ಚ ತೇ ನ ನಮೇರನ್ ಮಹಾತ್ಮನ್ ಗರೀಯಸೇ ಬ್ರಹ್ಮಣೋಽಪಾದಿಕರ್ತೇ (11/37) ಓ ಮಹಾತ್ಮನೆ । ಆತ್ಮಂತ ಹಿರಿಯನೂ, ಚತುರ್ಮುಖ ಬ್ರಹ್ಮ ನಿನಗೆ ಮೂಲಕಾರಣಾದ ನಿನಗೆ ಯಾರು ತಾನೆ ನಮಸ್ಕಾರ (ಶ್ಲೋಕದಲ್ಲಿ ನಾಮ ವಾಕ್ಯವಿದೆ ಅದಕ್ಕೆ ನಮಸ್ಕಾರ ಎಂದು ಅರ್ಥ) ಮಾಡುವುದಿಲ್ಲ. ಈ ಶ್ಲೋಕದಲ್ಲಿ ವಂದ್ಯ ಎಂಬ ಗುಣವನ್ನು ಅರ್ಜುನನ ಮೂಲಕ ಸಮರ್ಥಿಸುತ್ತಿದ್ದಾನೆ. ಹೇಗೆಂ ದರೆ ಬ್ರಹ್ಮದೇವರೆ ನಿನಗೆ ನಮಸ್ಕಾರ ಮಾಡುವಾಗ ಮಿಕ್ಕ ದೇವತೆಗಳು ಮಾಡದೆ ಇರುತ್ತಾರೆಯೇ ಎಂಬ ಅನುಮಾನದಿಂದ ವಂದ್ಯತ್ವವನ್ನು ನಿರೂಪಮಾಡಿದ್ದಾನೆ. ಹರಿಕಥಾಮೃತಸಾರ ಕರ್ಮವಿಮೋಚನೆ ಸಂಧಿಯ

ಹರಿಕಥಾಮೃತಸಾರ ಕರ್ಮವಿಮೋಚನೆ ಸಂಧಿಯ ಕೊನೆಯ ಪದ್ಯದಲ್ಲಿ ಬ್ರಹ್ಮಾದಿ ದೇವತೆಗಳಿಂದ ಪರಮಾತ್ಮವಂದ್ಯ ಎನ್ನುವ ಪ್ರಮೇಯವನ್ನು ನಿರೂಪಿಸುತ್ತಾರೆ "ಶ್ರೀವಿರಿಂಚಾದ್ಯರ ವಂದಿತ ಈ ವಸುಂಧರೆಯೊಳಗೆ.(19/35)

**ಭರ್ಗ:**

ಭರ್ಗ ಎಂದರೆ ಎಲ್ಲರನ್ನು ಧರಿಸಿದವನು ಎಂದು ಅರ್ಥ. ಕೃಷ್ಣ ಅಧಿಭೂತ, ಅಧಿದೈವ ಹಾಗೂ ಆಧ್ಯಾತ್ಮದ ಬಗ್ಗೆ ಹೇಳುವಾಗ ತಾನು ಎಲ್ಲರನ್ನು ಧರಿಸಿದವನು ಎಂದು ಹೀಗೆ ಹೇಳುತ್ತಾನೆ. "ಸರ್ವಸ್ಯ ಧಾತಾರಮಚಿಂತ್ಯರೂಪಮಾದಿತ್ಯ ವರ್ಣಂ ತಮಸಃ ಪರಸ್ತಾತ್॥"(8/9). ನಾನು ಸರ್ವಜ್ಞ ಅನಾದಿ. ಅಣುವಿಗಿಂತ ಅಣು, ಎಲ್ಲರನ್ನು ಧರಿಸಿದ್ದೇನೆ, ಇಂತಹ ನನ್ನನ್ನು ಅಂತ್ಯಕಾಲದಲ್ಲಿ ವಿಶೇಷವಾಗಿ ಸ್ಮರಿಸಬೇಕು. ಆಧ್ಯಾತ್ಮ ಎಂದರೆ ದೇಹ, ದೇಹದಲ್ಲಿ ಪರಮಾತ್ಮನೇ ಎಲ್ಲ ಚೇಷ್ಟೆಗಳನ್ನು ಮಾಡುವುದು ಮಾಡಿಸುವುದು.ತತ್ವಾಭಿಮಾನಿ ದೇವತೆಗಳ ಅಂತರ್ಯಾಮಿಯಾಗಿದ್ದುಕೊಂಡು ದೇಹದ ಎಲ್ಲ ವ್ಯಾಪಾರ ಗಳನ್ನು ಮಾಡಿಸುವನು. ಹರಿಕಥಾಮೃತಸಾರ ಕರ್ಮ ವಿಮೋಚನ ಸಂಧಿಯಲ್ಲಿ "ನಾಶರಹಿತ ಜಗತ್ತಿನೊಳಗವಕಾಶ ವನು ತಾನಾಗಿ ಯೋಗೀಶಾಶಯಸ್ಥಿತ ತನ್ನೊಳ್ಳೆಲ್ಲರನಿಟ್ಟು ಸಲಹುವನು" (19/4) ಪರಮಾತ್ಮ ಎಲ್ಲರನ್ನು ಧಾರಣೆ ಮಾಡುತ್ತಾನೆಂದು ಹೇಳಿದ್ದಾರೆ.

**ದೇವ:**

ದೇವ ಎಂದರೆ ಕ್ರೀಡಾವಿಶಿಷ್ಟನು ಎಂಬ ಅರ್ಥ ಪ್ರಸಿದ್ಧ. ಪರಮಾತ್ಮ ನಮ್ಮ ದೇಹದಲ್ಲಿ ನಮ್ಮ ಎಲ್ಲ ವ್ಯಾಪಾರಗಳನ್ನು ನಿರಾಯಾಸವಾಗಿ ಮಾಡುತ್ತಾನೆ ಎಂದು ". ಸರ್ವತ್ರಾವಸ್ಥಿತೋ ದೇಹೇ ತಥಾಽತ್ಮಾನೋಪಲಿಷ್ಯತೇ" (13/33) ಹೇಳಿದ್ದಾನೆ. ಈ ಶ್ಲೋಕದಲ್ಲಿ ಪರಮಾತ್ಮನು ದೇಹದೊಳಗಿದ್ದರೂ ಜೀವನ ಸುಖದುಃಖಗಳ ಅನುಭವ ಅವನಿಗಾಗುವುದಿಲ್ಲ ಎಂದು ಒಂದು ದೃಷ್ಟಾಂತದ ಮೂಲಕವಾಗಿ ತೋರಿಸುತ್ತಾನೆ. ಹೇಗೆ ಆಕಾಶದಲ್ಲಿ ಸೂರ್ಯ, ಚಂದ್ರ, ನಕ್ಷತ್ರ ಇವುಗಳಿದ್ದರೂ ಆಕಾಶಕ್ಕೆ ಹೇಗೆ ಭಾದಕವಿಲ್ಲವೋ ಹಾಗೇ ಪರಮಾತ್ಮ ಜೀವನ ದೇಹದಲ್ಲಿದ್ದರೂ ಅವನಿಗೆ ಜೀವನ ವಿಕಾರಗಳಿಂದ ಅವನಿಗೇನೂ ಲೇಪವಿಲ್ಲ. ಹರಿಕಥಾಮೃತಸಾರದ ವ್ಯಾಪ್ತಿ ಸಂಧಿಯಲ್ಲಿ ಪರಮಾತ್ಮ ಸೃಷ್ಟಿ ಹಾಗೂ ಸಂಹಾರಗಳನ್ನು ಲೀಲೆಯಿಂದ ಮಾಡುತ್ತಾನೆಂಬ ಪ್ರಮೇಯವನ್ನು ಉದಾಹರಣೆಯ ಮೂಲಕ ಸಾದರ ಪಡಿಸುತ್ತಾರೆ "ಮಳಲ ಮನೆಗಳ ಮಾಡಿ ಮಕ್ಕಳು ಕೆಲವು ಕಾಲದದಾಡಿ ಮೋದದಿ ತುಳಿದು ಕೆಡಿಸುವ ತೆರದಿ ಲಕುಮೀರ ಮಣ ಲೋಕಗಳ (3/28)

**ಧೀಮಹಿ:**

ಧೀಮಹಿ ಎಂದರೆ ಧ್ಯಾನಿಸುತ್ತೇವೆ ಎಂದು ಅರ್ಥ. ಕೃಷ್ಣ ವಿಶ್ವರೂಪ ತೋರಿಸಿದಾಗ ಮೊದಲು ಭಯಪಟ್ಟವನಾದರೂ ನಂತರೂ ಆ ರೂಪವನ್ನು ತನ್ನ ಯೋಗ್ಯತಾನುಸಾರವಾಗಿ ನೋಡುವಾಗ ಆದ ಅನುಭವವನ್ನು ಗೀತೆ ಹೀಗೆ ದಾಖಲು ಮಾಡುತ್ತದೆ "ತತಃ ಸ ವಿಸ್ಮಯಾವಿಷ್ಟೋ ಹೃಷ್ಟರೋಮಾ ಧನಂಜಯ ಪ್ರಣಮ್ಯ ಶಿರಸಾ ದೇವಂ ಕೃತಾಂಜಲಿರಭಾಷತ" (11/14). ಅಚ್ಚರಿಯಲ್ಲಿ ಮುಳುಗಿ ರೋಮಾಂಚನ ಗೊಂಡ ಧನಂಜಯನು ದೇವನಾದ ಶ್ರೀಕೃಷ್ಣನಿಗೆ ಶಿರಬಾಗಿ ವಂದಿಸಿ ಬದ್ಧಾಂಜಲಿ ಯಾಗಿ ಸ್ತುತಿಸಿದನು.ವಿಜಯದಾಸರ ಕಷ್ಟಗಳೆಲ್ಲ ಕಳೆದು ಅವರಿಗೆ ಒಳ್ಳೆಯ ದಿನಗಳು ಬಂದಾಗ ಅವರ ಉದ್ಗಾರ "ನಿನ್ನ ಒಲುಮೆಯಿಂದ ನಿಖಿಳ ಜನರು ಬಂದು ಮನ್ನಿಸು ವರೋ ಮಹಾರಾಯ ಎನ್ನದೇನಿಲ್ಲ ನಿಂದೇ ಇದೆಲ್ಲಾ ಸಕಲ ಸಂಪತ್ತು"

**ಧಿಯೋ ಯೋನಃ ಪ್ರಚೋದಯಾತ್:**

ಇದು ಸಂಯುಕ್ತ ಪದ (ಧಿಯಃ ಯಃ ನಃ, ಪ್ರಚೋದಯಾತ್) ಧೀ ಎಂದರೆ ಬುದ್ಧಿ, ಬುದ್ಧಿ ಎಂದರೆ ಜ್ಞಾನ, ಜ್ಞಾನ ವಿಜ್ಞಾನ ಯೋಗದಲ್ಲಿ ಕೃಷ್ಣ ಜ್ಞಾನ ಎಂದರೇನು ಎಂದು ಹೀಗೆ ಹೇಳುತ್ತಾನೆ . "ಜ್ಞಾನಂ ತೇಽಹಂ ಸವಿಜ್ಞಾನಮಿದಂ ವಕ್ಷ್ಯಾಮ್ಯಶೇಷತಃ ಯಜ್ಞಾತ್ವಾ ನೇಹ ಭೂಯೋಽನ್ಯಜ್ಞಾತಮವಶಿಷ್ಯತೇ" ಅರ್ಜುನ ನಾನು ವಿಜ್ಞಾನ ಸಮೇತವಾದ ಜ್ಞಾನವನ್ನು ಸಮಗ್ರವಾಗಿ ತಿಳಿಸುವೆನು. ಅದನ್ನು ತಿಳಿದರೆ ತಿಳಿಯಬೇಕಾದ ವಿಷಯ ಇನ್ನೊಂದಿಲ್ಲ. ತನ್ನ ಬಗ್ಗೆ ತಿಳಿದುಕೊಳ್ಳುವ ತತ್ವಜ್ಞಾನವೇ ನಮ್ಮ ಆತ್ಮೋದ್ಧಾರದ ಜ್ಞಾನವೇ ಹೊರತು ಇದಕ್ಕಿಂತ ಬೇರೆ ಜ್ಞಾನ ಮೋಕ್ಷಸಾಧನವಲ್ಲ ಎಂದು ಕೃಷ್ಣನ ಅಭಿಪ್ರಾಯ ಯಃ ಅಂದರೆ ಯಾವಾತನೋ ಅರ್ಥಾತ್ ಪರಮಾತ್ಮ ಎಂದು ಅರ್ಥ. ನಃ ಎಂದರೆ ನಮಗೆ ಎಂದರ್ಥ ಪ್ರಚೋದಯಾತ್ ಎಂದರೆ ಚೆನ್ನಾಗಿ ಪ್ರೇರೇಪಿಸುವುದು ಎಂದು ಅರ್ಥ.

ಪ್ರಹ್ಲಾದರಾಜರು ನವವಿಧಭಕ್ತಿಯ ಲಕ್ಷಣಗಳ ಬಗ್ಗೆ ಹೇಳಬೇಕಾದರೆ ಶ್ರವಣ ಮೊದಲು ಹೇಳಿದರು. ಏಕೆಂದರೆ ಭಗವಂತನ ಮಹಾತ್ಮ್ಯೆಯ ಕಥೆಗಳ ನಿರಂತರ ಶ್ರವಣದಿಂದ ನಮಗೆ ಪರಮಾತ್ಮನ ಬಗ್ಗೆ ಹೆಚ್ಚು ಹೆಚ್ಚು ತಿಳಿದುಕೊಳ್ಳಬೇಕು ಎಂಬ ಪ್ರೇರೇಪಣೆ ನೀಡುವುದೇ ಶ್ರವಣ. ಹರಿಕಥಾಮೃತಸಾರವನ್ನು ಉಪಸಂಹಾರವನ್ನು ಗೊಳಿಸುತ್ತಾ ಜಗನ್ನಾಥದಾಸರು ಹೀಗೆ ಹೇಳುತ್ತಾರೆ. "ಜಯ ಜಯತು ಜಾಹ್ನವಿಜನಕ ಜಯ ಜಯತು ದೈತ್ಯಕುಲಾಂತಕ ಭವಾಮಯಹರ ಜಗನ್ನಾಥವಿಠಲ ಪಾಹಿಮಾಂ ಸತತ" (32/56)

ಗಾಯಿತ್ರಿಮಂತ್ರಕ್ಕೂ ಗೀತೆಯ ನಡುವೆಯೂ ಒಂದು ಸ್ವಾರಸ್ಯವಿದೆ. ಗಾಯಿತ್ರಿ ಇಪ್ಪತ್ತನಾಲ್ಕು ವರ್ಣಗಳುಳ್ಳ ಮೂರು ಪಾದಗಳಿಂದ ಕೂಡಿದ ತ್ರಿಪದಾ ಎನಿಸಿದರೆ ಗೀತೆಯೂ ತ್ರಿಪದಾ ಎನಿಸಿದೆ. ಹೇಗೆಂದರೆ ಗೀತೆ ಮೂರು ಷಟ್ಕಗಳಿಂದ ಕೂಡಿದೆ (1-6 ಅಧ್ಯಾಯಗಳು ಮೊದಲನೆ ಷಟ್ಕ, 7 ರಿಂದ 12 ಅಧ್ಯಾಯಗಳು ಎರಡನೆ ಷಟ್ಕ ಹಾಗೂ 13 ರಿಂದ 18 ಅಧ್ಯಾಯಗಳು ಮೂರನೆ ಷಟ್ಕ). ಗಾಯಿತ್ರಿ ಮೊದಲ ಪಾದದಲ್ಲಿ ಭಗವಂತನ ಗುಣಚಿಂತನೆಯಾದರೆ, ಗೀತೆಯ ಮೊದಲನೆ ಷಟ್ಕದಲ್ಲಿ ಆ ಗುಣಚಿಂತನೆಯ ಸಾಧನಗಳನ್ನು ಹೇಳುತ್ತದೆ. ಗಾಯಿತ್ರಿಯ ಎರಡನೆ ಪಾದದಲ್ಲಿ ಭಗವಂತನ ಸ್ವರೂಪದ ವರ್ಣನೆಯಾದರೆ, ಗೀತೆಯ ಎರಡನೆ ಷಟ್ಕದಲ್ಲೂ ಭಗವಂತನ ಸ್ವರೂಪದ ವರ್ಣನೆಯಿದೆ. ಗಾಯಿತ್ರಿಯ ಮೂರನೆ ಪಾದದಲ್ಲಿ ಗುಣ ಹಾಗೂ ಸ್ವರೂಪದ ಚಿಂತನೆಯ ಪ್ರಾರ್ಥನೆ ಎಂದಾದರೆ, ಗೀತೆಯ ಮೂರನೆ ಷಟ್ಕದಲ್ಲಿ ಸಾಧನ ಹಾಗೂ ಸ್ವರೂಪದ ಚಿಂತನೆಯ ಪ್ರಾರ್ಥನೆಯಾಗಿದೆ. ಇನ್ನು ಸಂಖ್ಯೆಯನ್ನು ಗಮನಿಸಿದರೆ ಅಲ್ಲಿಯೂ ಒಂದು ಸ್ವಾರಸ್ಯವಿದೆ. ಗಾಯಿತ್ರಿ ಇಪ್ಪನಾಲ್ಕು ವರ್ಣಗಳುಳ್ಳ ಮಂತ್ರ ಗೀತೆ ಏಳನೂರೊಂದು ಶ್ಲೋಕಗಳಿಂದ ಕೂಡಿದೆ. ಏಳನೂರೊಂದನ್ನು ಕೂಡಿದರೆ ಎಂಟು ಸಂಖ್ಯೆ ಬರುತ್ತದೆ. ಎಂಟನ್ನು ಮೂರರಿಂದ ಗುಣಿಸಿದಾಗ ಇಪ್ಪತ್ತುನಾಲ್ಕು ಬರುತ್ತದೆ.

ಅಸ್ಮದ್ ಪತ್ಯಂತರ್ಗತ ಸಮಸ್ತಗುರುವಂತರ್ಗತ, ತ್ವಾತಿಕದೇವತಾಂರ್ಗತ ಭಾರತಿರಮಣಮುಖ್ಯಪ್ರಾಣಾಂತರ್ಗತ ಕೃಷ್ಣ ಇದದಿಂದ ಪ್ರೀತನಾಗಲಿ.

**ಕೃಷ್ಣಾರ್ಪಣಮಸ್ತು:**



ಧಾರಾವಾಹಿ



# ಆಳ್ವಾರುಗಳು ಕಂಡ ತಿರುವೇಂಗಡ

- ಎಂ. ಆರ್. ನರಸಿಂಹನ್

**ಪಿ.** ಸೀತಾಪತಿ ಅವರ ವಿವರಣೆಯಿಂದ ಈ ತೊಂಡಮಾನನ ಕಾಲದಲ್ಲೇ ವಿಸ್ತಾರವಾದ ದೇಗುಲವೊಂದು ಎಲ್ಲಾ ಅಂಕಣ ಪ್ರಾಕಾರಾದಿಗಳಿಂದ ಕೂಡಿ ಕಟ್ಟಲ್ಪಟ್ಟಿರಬಹುದಾದ ವಿಚಾರ ದೊರೆಯುತ್ತದೆ. ಆದರೆ ರಾಮಚಂದ್ರ ರಾಯರ ಪ್ರಕಾರ ಮೊದಲಾಳ್ವಾರ್‌ಗಳ ಕಾಲಕ್ಕೆ ಈ ಗುಡಿ ಇರಲಿಲ್ಲ. ತಿರುಮಳಿಶೈ ಆಳ್ವಾರ್ ಕಾಲಕ್ಕೆ ಗುಡಿ ಇರಲಿಲ್ಲ. ತೆರದ ಮಂಟಪವೊಂದಿತ್ತು, ಜನ ಬಂದು ತಮಗಿಷ್ಟ ಬಂದಂತೆ ದೇವರನ್ನು ಪೂಜಿಸುತ್ತಿದ್ದರು. ಪ್ರಾಣಿಗಳು ನಿರ್ಭೀತಿಯಿಂದ ಸಂಚರಿಸುತ್ತಿದ್ದುವು. ಬೆಟ್ಟವೆಲ್ಲಾ ಕಾಡಾಗಿ, ಹೋಗಲು ರಸ್ತೆಯೇ ಇರಲಿಲ್ಲ. ದೇವರು ನಿಂತಿದ್ದ ಸ್ಥಳ ಮಾತ್ರ ಅಷ್ಟು ಕಾಡು ಕತ್ತರಿಸಲ್ಪಟ್ಟು ಇಟ್ಟಿರಲಾಗಿತ್ತಂತೆ! ಮಂಟಪದಲ್ಲಿನ ಮೂರ್ತಿ ಎಲ್ಲರಿಗೂ ಸುತ್ತ ಮುತ್ತಣಿಂದ ಕಾಣಿಸುವಂತಿತ್ತು. ಕಪಿಗಳೂ, ಪ್ರಾಣಿಗಳೂ, ಎಂದರೆ ಆನೆಗಳೂ ಹೂ ಹಾಕಿ ನೀರು ತಂದು ತೊಳೆಯುತ್ತಿದ್ದುವು ಎಂದು ಪಾಶುರಗಳಲ್ಲಿ ವರ್ಣನೆ ಬಂದಿರುವುದರಿಂದ ಅವುಗಳು ನೀರೆರಚಿ ಹೂಗಳನ್ನು ಮರಗಳಿಂದ ಉದುರಿಸಿ ದಾಂಧಲೆ ಮಾಡುತ್ತಿದ್ದ ಚಿತ್ರವಿದೆ ಎನ್ನಬಹುದಲ್ಲವೆ. ಇದೊಂದು ಕ್ಲಿಷ್ಟವಾದ, ತೀರ್ಮಾನವಾಗದ ವಿಷಯ ಎನ್ನಬೇಕು. ನಮ್ಮಾಳ್ವಾರರ ಕಾಲಕ್ಕೆ ಈ ಗುಡಿಯ ವಿಚಾರ ಸ್ಪಷ್ಟವಿಲ್ಲ. ಸ್ಪಷ್ಟವಿಲ್ಲವೇನು? ರಾಯರು ಅವರ ಪಾಶುರಗಳಿಂದ ಗುಡಿಯ ವಿಚಾರ ಕಂಡು ಕೊಂಡಿಲ್ಲ. ಕುಲಶೇಖರ ಆಳ್ವಾರ್ ಕಾಲಕ್ಕೆ ಸಣ್ಣ ಮರದ ಗುಡಿಯ ಕಲ್ಪನೆಯನ್ನು ನೀಡುತ್ತಾರೆ. ಇದನ್ನೂ ಒಂದು ರೀತಿಯ ಗೊಂದಲಮಯವನ್ನಾಗಿ ವಿವರಿಸಿದ್ದಾರೆ. ಕೆಲವು ಕಡೆ ಜನರು ತಾವೇ ದೇವರನ್ನು ಮುಟ್ಟಿ ಪೂಜಿಸುತ್ತಿದ್ದರು ಎನ್ನುವ ಅವರು ಅರ್ಚಕರು ನೀಳ್‌ವಾಶಲ್ ಒಳಗಡೆ ಇದ್ದು ಹೊರಗೆ ಜನರು ನಿಲ್ಲುತ್ತಿದ್ದಿರಬಹುದಾದ ವಿಚಾರ ಹೇಳಿದ್ದಾರೆ. ಇಷ್ಟಾದರೂ ಪೂಜಾ ವ್ಯವಸ್ಥೆ ಇರಲಿಲ್ಲವೆನ್ನುತ್ತಾರೆ. ಇದೆಲ್ಲಾ ಪಾಶುರಗಳಿಂದ ಸ್ಪಷ್ಟ ಪಡದೇ ಹೋದರೂ ರಾಯರು ಮನಸ್ಸು ಗುರುತಿಸುತ್ತದೆ.

ಪಿ. ಸೀತಾಪತಿ ಮತ್ತು ಶ್ರೀರಾಯರ ಹೇಳಿಕೆಗಳ ಮಂಥನ ನಡೆಸಿದಾಗ ನಮಗೆ ಗೋಚರಗೊಳ್ಳುವ ವಸ್ತು ಇಷ್ಟು. ಸೀತಾಪತಿ ಅವರ ಹೇಳಿಕೆಗೆ ಒಂದು ನಿರ್ದಿಷ್ಟವಾದ ಹಿನ್ನೆಲೆ ಇದೆ. ರಾಯರ ಹೇಳಿಕೆಗೆ ಆಳ್ವಾರ್ ಪಾಶುರಗಳಲ್ಲಿ ಹೇಳಿಲ್ಲದಿರುವುದರಿಂದ ಹೀಗೆ ಇರಬಹುದು ಎನ್ನುವ ಕಲ್ಪನೆ,



ಭಾವಗಳು ಹಿನ್ನೆಲೆಯಾಗುತ್ತದೆ. ತಿರುವರಂಗ ಮುಂತಾದ ಇತರ ಕಡೆಯ ಗುಡಿಗಳನ್ನು ಬಣ್ಣಿಸಿದ, ಪೂಜಾ ವಿಧಾನಗಳನ್ನು ವಿವರಿಸಿಲ್ಲ ಎನ್ನುವುದು ರಾಯರ ಸ್ಪಷ್ಟವಾದ ಹೇಳಿಕೆ. ಆದರೆ ಪಾಶುರಗಳನ್ನು ಪರಿಶೀಲಿಸಿದಾಗ ಯಾವ ಆಳ್ವಾರರೂ ಸಹ ಊರುಗಳನ್ನೂ ದೇವರು, ಅವನ ಮಹಿಮೆಗಳನ್ನೂ ಹೊಗಳಿರುವರೇ ವಿನಹ ಅವರುಗಳಿಗೆ ಗುಡಿಗಳಿದ್ದುದನ್ನೂ, ಅವರ ಪೂಜಾ ವೈಭವಗಳನ್ನೂ ವಿವರಿಸಿರುವುದು ನನಗೆ ಕಂಡು ಬಂದಿಲ್ಲ. ಹಾಗೆ ಅವರು ಬೇರೆ ಗುಡಿಗೋಪುರ ಪೂಜಾ ವೈಭವಗಳನ್ನೂ, ತಿರುಮಲೆಯಲ್ಲಿ ಅವು ಲೋಪವಾಗಿರುವುದನ್ನು ಕೂಡಾ ಹೇಳಿಲ್ಲ. ಮತ್ತೂ ಬೇರೆ ಕ್ಷೇತ್ರಗಳ ದೈವ ಮಹಿಮೆಯನ್ನೂ ಸಮಾನವಾಗಿಯೇ ತಿರುಮಲೆಯ ದೇವನೊಂದಿಗೆ ಹಾಡಿದ್ದಾರೆ. ಪೊಯ್ಗೈಯ್ ಆಳ್ವಾರ್ ತಮ್ಮ ಮೊದಲ್‌ತಿರುವಂದಾದಿಯ ೭೭ನೇ ಪಾಶುರದಲ್ಲಿ “ವೇಂಗಡಮುಂ ವಿಣ್ಣಗರುಂ, ವೆಃ ಕಾವುಂ ಅಃ ಕಾದ ಪೂಂಕಿಡಂಗಿನ್ ನೀಳ್ ಕೋವಲ್ ಪೊನ್ನಗರುಂ ನಾನ್ಗಿಡತ್ತುಂ” ಎಂದು ವೇಂಗಡ, ಪರಮಪದ, ವೆಃ ಕಾ (ಕಂಚಿ) ಮತ್ತು ತಿರುಕ್ಕೋವಲೂರ್ ದಿವ್ಯನಗರ ಎಲ್ಲಾ ಜಾಗದಲ್ಲೂ ದೇವರಿದ್ದಾನೆ ಎಂದು ವರ್ಣಿಸುವಾಗ ಈ ಜಾಗದಲ್ಲಿ ದೇಗುಲವಿದ್ದಿತೆ, ಇಲ್ಲವೇ ತಿಳಿಸುವುದಿಲ್ಲ. ಇದೇ ರೀತಿ ಹಲವಾರು ಪಾಶುರಗಳಲ್ಲಿ ವೇಂಗಡವನ್ನು ಇತರ ಕ್ಷೇತ್ರಗಳೊಂದಿಗೆ ಹಾಡಿರುವುದನ್ನು ಗಮನಿಸಿದಾಗ ವೇಂಗಡದಲ್ಲೂ ಆ ಊರುಗಳಂತೆ ದೇಗುಲ, ಉತ್ಸವ ಸಂಭ್ರಮ ಪೂಜೆಗಳು ಏಕೆ ನೇರ್ಪುಗೊಂಡಿರಬಾರದು ಎನ್ನುವ ಪ್ರಶ್ನೆ ಉದ್ಭವಿಸದೇ ಇರದು. ರಾಯರು ಹೇಗೆ ವೇಂಗಡದಲ್ಲಿ ಗುಡಿ ಇರಲಿಲ್ಲ ಎಂದು ಹೇಳುತ್ತಾರೆ. ಈ ದೊರೆಯುವ ಅಸ್ಪಷ್ಟ ಮತ್ತು ಅಸಂಪೂರ್ಣವಾದ ವಿವರಗಳಿಂದ! ಮತ್ತು ಒಂದು ತೆರೆದ ಮಂಟಪವನ್ನು ಮಾತ್ರ ಹೇಗೆ ಚಿತ್ರಿಸಿಕೊಳ್ಳುತ್ತಾರೆ ಎಂಬುವುದು ಅರಿವಾಗದ ವಿಚಾರ, ಇದರ ವಿಮರ್ಶೆಯನ್ನು ಮುಂದೆ ವಿವರಿಸುತ್ತೇನೆ.

ಶ್ರೀಸೀತಾಪತಿಯವರು ತಮ್ಮ ಪುಸ್ತಕದಲ್ಲಿ ಇನ್ನೊಂದು ಹೇಳಿಕೆ ನೀಡಿದ್ದಾರೆ "From a study of the architecture of the gaerbagriham it has already been mentioned that thirumalai temple cannot be dated earlier than 8th century AD" ಎಂದರೆ ಕ್ರಿ.ಶ. ೭೦೦ ಕ್ರಿ.ಶ. ೮೦೦ ರಲ್ಲಿ ದೇವರಿಗೆ ಗುಡಿಯೊಂದಿದ್ದಿತು ಎನ್ನುವ ಅರ್ಥ ಬರುತ್ತದೆ. ಇದು ಕುಲಶೇಖರ ಕಾಲಕ್ಕೆ ಸಾಮ್ಯಗೊಳ್ಳುತ್ತದೆ ಸುಮಾರಾಗಿ ಎನ್ನಬಹುದು. ಕುಲಶೇಖರ ಗುಡಿ ವಿಚಾರವನ್ನು ರಾಯರು ಒಪ್ಪಿಕೊಳ್ಳುತ್ತಾರೆ.

ಆದರೆ ರಾಯರು ಮುಂದುವರಿಯುವ ವಾದದ ಪ್ರಕಾರ, ಗುಡಿಗೆ ಸಂಬಂಧಿಸಿದ ಶಾಸನಗಳ ವಿಚಾರದಲ್ಲಿ ಹೇಳಿಕೆ ನೀಡುವಾಗ “ಇಂತಹ ಶಾಸನಗಳು ನೂರಾರಿವೆ. ತುಂಬಾ ಹಿಂದಿನದೆನ್ನುವ ಶಾಸನ ಕ್ರಿ.ಶ. ೭೯೦ ರಲ್ಲಿ ಸಿದ್ಧವಾದುದು. ವಿಜಯಾದಿತ್ಯನೆಂಬ ಬಾಣ ವಂಶದ ಅರಸು ಹುಟ್ಟಿದೆನ್ನುವ ತಿಳಿಸುವ ಈ ಶಾಸನ ಬಿಡಿಯಾಗಿ ನಿಂತಿದ್ದು ಗುಡಿಯ (ಈಗಿನ) ಬಳಿ ದೊರೆಯಿತು. ಗುಡಿ ಇರದಿದ್ದ ಕಾಲದ ಶಾಸನ ಅದು.” ಎನ್ನುತ್ತಾರೆ ಮತ್ತು ಕ್ರಿ.ಶ. ೯೫೫ ರ ಶಾಸನವೊಂದನ್ನು ಪ್ರಸ್ತಾಪಿಸಿ ಬೆಟ್ಟದ ಮೇಲಿನ ಗುಡಿಯಲ್ಲಿ ನಂದಾದೀಪವೊಂದನ್ನು ಉರಿಸುವ ಏರ್ಪಾಡನ್ನು ಪ್ರಸ್ತಾಪ ಮಾಡಿದೆ, ಒಂದನೇ ಪರಾಂತಕನ ಕಾಲದ್ದು ಎಂದ ಮೇಲೆ ಒಂದು ನಂದಾದೀಪ ಬೆಳಗಿಸುವಷ್ಟು ಸಣ್ಣ ಗುಡಿ ಆಗಲೇ ಎದ್ದಿರಬೇಕು.(ಪು.೬೯) ಎನ್ನುವ ವಿಚಾರ ಮತ್ತೆ ಎಬ್ಬಿಸುತ್ತಾರೆ.

ಎಂದರೆ ಒಮ್ಮೆ ‘ಕುಲಶೇಖರರ ಕಾಲದಲ್ಲಿ ಮರದ ಚಿಕ್ಕ ಗುಡಿ ಇದ್ದಿತು. ಅದಕ್ಕೆ ‘ನೀಳ್ ವಾಶಲ್’ ಎಂದರೆ ‘ಉದ್ದವಾದ ಬಾಗಿಲಿ’ದ್ದಿತು (ಎತ್ತರದ ಬಾಗಿಲು) ಗರ್ಭಗುಡಿ ಇದ್ದಿತು, ಅರ್ಚಕರು ಒಳಗೆ ಪೂಜಿಸುತ್ತಾ ಭಕ್ತರು ಹೊರಗಿನಿಂದ ದರ್ಶನ ಪಡೆಯುತ್ತಿದ್ದರು ಎಂಬ ಚಿತ್ರ ನೀಡಿ ಮತ್ತೆ ಕ್ರಿ.ಶ. ೭೯೦ ರಲ್ಲಿ ಗುಡಿ ಇರಲಿಲ್ಲವೆನ್ನುತ್ತಾರೆ ಮತ್ತೆ ಕ್ರಿ.ಶ. ೯೫೫ ರಲ್ಲಿ ಚಿಕ್ಕಗುಡಿ ಇದ್ದಿತು ಎನ್ನುತ್ತಾರೆ ಮುಂದೆ ಅವರೇ ವಿಜಯನಗರದ ಅರಸರ ಕಾಲಕ್ಕೆ ಗುಡಿ ಕಟ್ಟಲ್ಪಟ್ಟಿತು ಎನ್ನುತ್ತಾರೆ.

(ಮುಂದುವರೆಯುತ್ತದೆ)

ಧಾರಾವಾಹಿ

# ತಿರುಮಲೆ ಕಾಲಮಾನಾಚರಣೆಗಳು

- ಮೂಲ . ಡಾ॥ ಎನ್.ಸಿ.ವಿ. ನರಸಿಂಹಾಚಾರ್ಯ

- ಅನುವಾದ : ಶ್ರೀಮತಿ

**ಶ್ರೀ ವೇಂಕಟಾಚಲಪತಿ ದಿವ್ಯಪ್ರಬಂಧಗಳನ್ನು ವರ್ಣಿಸಿ ಅನುಗ್ರಹಿಸುವ ವಿಧಾನ:-**

ಮಾರ್ಗಳಿ (ಧನುರ್) ಮಾಸದ ಮೂವತ್ತು ದಿನಗಳಲ್ಲಿ ಬ್ರಹ್ಮ ಮುಹೂರ್ತದಲ್ಲಿ ಬಾಗಿಲು ತೆಗೆಯುವಾಗ ಮೊದಲ ದಿನದಲ್ಲಿ ಮಾತ್ರವೇ ಆರಾಧನೆ, ನೈವೇದ್ಯ ಮುಗಿಸಿದ ನಂತರ 'ತಿರುಪ್ಪಾವೈ' "ತಿರುಪ್ಪಳ್ಳಿ ಯೆಳುಚ್ಚಿ" ಪ್ರಬಂಧಗಳ ಅನುಸಂಧಾನ ಆರಂಭಗೊಳ್ಳುತ್ತದೆ. ಮರುದಿನ ಸಹಾ ಮೊದಲ ಆರಂಭದಲ್ಲೇ ಅನುಸಂಧಾನವು, ಮಧ್ಯಾಹ್ನದಲ್ಲಿ "ಉಪ ದೇಶ ರತ್ನಮಾಲ" ಸಾಯಂಕಾಲದಲ್ಲಿ 'ತಿರುವಾಯ್‌ಮೊಳಿ ನೂತ್ತಂ ದಾದಿ ಅನುಸಂಧಾನ ಮಾಡತಕ್ಕದ್ದು.

ಶ್ರೀಕೃತ್ತಿಕಾದೀಪೋತ್ಸವವನ್ನು ಮೊದಲುಗೊಂಡು ಅಧ್ಯಯನೋತ್ಸವವು ಮುಗಿಯುವವರೆಗೆ 'ಉಪದೇಶ ರತ್ನಮಾಲ' ತಿರುವಾಯ್‌ಮೊಳಿ ನೂತ್ತಂದಾದಿಗಳು ಅನುಸಂಧಿಸಲ್ಪಡುವುವು. ಅನ್ಯ ಮಾಸಗಳಲ್ಲಿ ಪ್ರಾತಃಕಾಲದ ತಿರುಮಾಲಿಯ (ತೋಮಾಲೆಸೇವೇ) ಸಮರ್ಪಿಸುವಾಗ 'ತಿರುಪ್ಪಾವೈ' 'ತಿರಪ್ಪಳ್ಳಿಯೆಳುಚ್ಚಿ' ಪ್ರಬಂಧಗಳನ್ನು ಅನುಸಂಧಿಸಲ್ಪಡುತ್ತವೆ. ಮಧ್ಯಾಹ್ನದ ಸಮಯದಲ್ಲಿ ಹೂಮಾಲೆಗಳನ್ನು ಸಮರ್ಪಿಸುವಾಗ 'ಶಿರಿಯ ತಿರುಮಡಲ್' ಅನುಸಂಧಿಸತಕ್ಕದ್ದು. ಸಾಯಂಕಾಲ ನಿತ್ಯಾನುಸಂಧಾನವನ್ನು ಪಠಿಸತಕ್ಕದ್ದು.



ಈ ರೀತಿಯ ಪ್ರಕಾರ ಭೇದಗಳು - ಮೊದಲು ತಿರುಪ್ಪಾಲ್ಲಾಣ್ಡು, ಪೂಚ್ಚಡಲ್, ಕಾಪ್ಪಿಡಲ್, ಶೆನ್ನಿಯಾಜ್ಞು, ವಿಣ್ಣಿಲ ಮೇಲಾಪ್ಪು, ಉನೇರುಶಲ್ಪತ್ತು, ಅಜ್ಗಣಿಡು ಮದಿಳ್,ತಾಯೋ ತಂದೆ, ಉನ್‌ವಾಡು ಉಣ್ಣಾದು, ವಾಡಮರದಿಡ್ಯೈ, ಒಳುವಿಲ್ ಕಾಲಮ್, ಉಲಗಮುಣ್ಣ ಪೆರುವಾಯಾ, ಕಂಗುಲಮ್ ಪಗಲಮ್ ಉಳಿ ಏಳೆ, ಅಮಲನಾದಿಪಿರಾನ್, ಕಣ್ಣಿನುಣ್ ಶಿರುತ್ತಾಂಬು - ಮೊದಲಗುನವಿ ಅನುಸಂಧೇಯಗಳು, ನಾಚ್ಚಿಯಾರ್ ತಿರುಮೊಳಿ, ಪೆರುಮಾಳ್ ತಿರುಮೊಳಿ, ಪೆರಿಯ ತಿರುಮೊಳಿ, ತಿರುವಾಯ್‌ಮೊಳಿ- ಇವನ್ನು ಗೀತಾದಶಕದಲ್ಲಿ ಅನುಸಂಧಿಸಲಾಗುವುದು. ಪೂರ್ತಿಯಾದ ಬಳಿಕ ಏಕ ದಶಕ ಮಾತ್ರವೇ (ಹಲವು ದಶಕಗಳನ್ನು) ಅನುಸಂಧಾನ ಮಾಡುವಾಗ ಆಯಾ

ಪ್ರಬಂಧದ ಮೇಲ್ಪಂಕ್ತಿ (ಪ್ರಶಸ್ತಿ ಪದ್ಯಗಳನ್ನು) ಅನುಂಧಿಸ ಬಾರದು. ಅಮಲನಾದಿ ಪಿರಾನ್, ಕಣ್ಣಿನುಣ್ ಶಿಱುತ್ತಾಂಬುವೆಂಬ ಪ್ರಬಂಧಗಳೆ ಎರಡನ್ನು ಪೂರ್ಣ ಅನುಸಂಧಿಸಲಾಗುವುದ ಲಿಂದ ಮೇಲ್ಪಂಕ್ತಿಗಳನ್ನು ಪಠಿಸುವುದು ಸಲ್ಲದು ಈ ರೀತಿಯು ಆದಿ ಆಚಾರ್ಯರ ನಿಯಮವು.

ನಿತ್ಯಾನುಸಂಧಾನದ ಮೂಲಕ 'ಕಂಗುಲಮ್ ಪಗಲಮ್', ಮಧ್ಯಾಹ್ನ ತಿರುಮಾಲಿಯನ್ನು ಸಮರ್ಪಿಸುವ ವೇಳೆ ಯಲ್ಲಿ 'ಶಿರಿಯ ತಿರುಮಡಲ್' ಇವುಗಳನ್ನು ಸಮರ್ಪಿಸಲು ಕಾರಣ ಪೂರ್ವಕಾಲದಲ್ಲಿ ಅನೇಕ ಚರ್ಚಾನಂತರ ಹಿರಿಯರು ಒಗ್ಗೂಡಿ ಮನೋಜ್ಞ ಶೀತಲಜಲ ಸಮೃದ್ಧಿಗಾಗಿ ಶ್ರೀರಂಗದಲ್ಲಿ ನಿತ್ಯವಾಸ ಮಾಡುತ್ತಾ ಪೆರಿಯ ಪೆರುಮಾಳ್ (ಶ್ರೀರಂಗನಾಥ ಸ್ವಾಮಿ) ದಿವ್ಯದೇಹದ ಮೇಲೆ ಪ್ರೇಮಾತಿಶಯ ಪಡೆದುಕೊಂಡವ ರೊಬ್ಬರು ಪುಷ್ಕರಿಣಿಯಲ್ಲಿ ಸ್ನಾನಮಾಡಿ ನಿತ್ಯ ಕೈಂಕರ್ಯ ಗಳನ್ನು ಮುಗಿಸಿಕೊಂಡು ಜ್ಞಾನ ವರಾಹಸ್ವಾಮಿ ಶ್ರೀ ಪಾದಗಳಿಗೆ ಮುಗಿದು ಸೇವಾಕ್ರಮವನ್ನನುಸರಿಸಿ ಒಳಗೆ ಕಾಲಿಟ್ಟು ಶ್ರೀಭಗವದ್ರಾಮಾನುಜರಿಗೆ ಪಾದಾಭಿವಂದನೆಯನ್ನು ಮಾಡಿ ಶ್ರೀಕೃಷ್ಣ (ಶರ್ಮ) ಮಂಟಪಕ್ಕೆ ಹೋಗಿ ಗರುಡನಿಗೆ, ದ್ವಾರ ಪಾಲಕರಿಗೆ ನಮಿಸಿ ಭಗವದ್ರಾಮಾನುಜರ ಮುಂದೆ ಅವರನ್ನು ಪುರುಷಾಕಾರ ಮಾಡಿಕೊಂಡು ಶ್ರೀವೇಂಕಟಾಚಲಪತಿಗೆ ದಂಡ ಪ್ರಣಾಮಗಳನ್ನು ಒಪ್ಪಿಸಿ 'ತಾಯಿ ತಂದೆ' ಎಂಬ ತಿರು ಮೊಳಿಯನ್ನು (ದಶಕವನ್ನು) ಅನುಸಂಧಿಸಿ ಒಳಗೆ ಬಂದು 'ಕುಲಶೇಖರಪಡಿ' ಎಂಬ ಗರ್ಭಗೃಹದ ಹೊಸ್ತಿಲಲ್ಲಿ ನಿಂತು 'ಆಪಾದ ಚೂಡಮನುಭೂಯ ಹರಿಂ ಶಯನಂ' (ಪವಡಿಸಿದ ಶ್ರೀಹರಿಯನ್ನು ಆಪಾದಮಸ್ತಕ ಅನುಭವಿಸಿ) ಎಂಬ ರೀತಿಯಲ್ಲಿ ಸಂಸ್ಕರೋಪೇತವಾದ ದಿವ್ಯ ಪಾದಾರವಿಂದಗಳು ಮೊದಲು ಗೊಂಡು ದಿವ್ಯ ಕಿರೀಟದವರೆಗೆ ಅಶುಗಳಿಂದನುಭವಿಸಿ ಪ್ರಾಚೀನ ಸಂಪ್ರದಾಯದ ಪ್ರಕಾರ ಅನಾಮತ್ತಾಗಿ 'ಕಂಗುಲಂ ಪಗಲಂ' ಎಂದು ಆರಂಭಗೊಳ್ಳುವ ಹತ್ತು ಪಾಶುರಗಳನ್ನು (ಗೀತೆ ಗಳನ್ನು) ದೇವಗಾನ ಪದ್ಧತಿಯನ್ನನುಸರಿಸಿ ಪಾಡುತ್ತಾ ನಿಂತು ಬಿಟ್ಟರು. ಅದಕ್ಕೆ ಶ್ರೀವೇಂಕಟೇಶ್ವರನು ಸಂತೋಷಿಸಿ ಅರ್ಚನಾ ಮುಖದಿಂದ ಪ್ರಬಂಧಗಾಯಕಾ! ಮೊದಲು (ನಮ್ಮ) ಆಳ್ವಾರ್ ಕೈಯಲ್ಲಿ ಹೋಮವನ್ನು ಮಾಡಿಸಿ, ಶ್ರೇಷ್ಠತೆಯ ಭಾವವನ್ನಾನು ಭವಿಸಬೇಕು.

ನೀವೀಗ ಅನುಸಂಧಿಸಿ ಪ್ರದರ್ಶಿಸಿದ ಹಾಗೆ ಈ ತಿರು ವಾಯ್‌ಮೊಳಿ (ದಶಕವು)ವು ನಮಗೆಷ್ಟೋ ಆನಂದ ಮೂಡಿ ಸಿದೆ. ಹೀಗೆ ನಮ್ಮ ಮೇಲೆ ಸದಾಕಾಲ (ತಿರುಮಂಗೈ ಆಳ್ವಾರು ಸಹಿತ) ವ್ಯಾಮೋಹವನ್ನು ಪಡೆದುಕೊಂಡು ನಾಯಕ ಪದವಿ ಯನ್ನು ಹೊಂದಿ, ಅನುಭವಿಸಿ ಈಗ ಹಾಡಿದ ಗೀತೆಯೊಂದನ್ನೇ ಅನುಸಂಧಾನ ಮಾಡಿ ಅಭಿನಯಿಸಿ ತೋರುವುದು ಎಂದು ಹೇಳಲು, ಆಗ ಆಳ್ವಾರ್ ಅರೈಯರು (ಗಾಯಕರು) ಅತಿ ಮುಗ್ಧ ಹೃದಯಿಗಳಾಗಿ ಅವರನ್ನನುಗ್ರಹಿಸಿದ ಸಾಲುಗಳನ್ನು ಹೇಳಲು ಆಸಕ್ತಿಯುಳ್ಳವರಾಗಿ 'ಕಾರಾರ್‌ವರೈ ಕ್ಕೊಂಗೈ' ಎಂದು ಹೇಳುತ್ತಾ ತಿರುಮಂಗೈ ಆಳ್ವಾರರು (ಪರಕಾಲರು) 'ತಾಱಿಮೆಟ್ಟಪ್ಪೈ ನೆಕ್ಕಿ' ಭಗವದನುಭವನ್ನು ಹೊಂದಿದ ಶಿರಮ ತಿರುಮಡಲ್ ಪ್ರಬಂಧದಲ್ಲಿ ಪರವಶರಾಗಿ ನಾಯಕರಾದ ಅನುಭವವನ್ನು ಅಭಿನಯಿಸಿ ತೋರಲು, ಶ್ರೀವೇಂಕಟಾಚಲ ಪತಿಯು ಕರುಣಿಸಿ, ಮನಮೆಚ್ಚಿ ದಿವ್ಯ ಚರಣರೂಪವಾಗಿ ಶ್ರೀಶಠವನ್ನು, ದಿವ್ಯ ನಿರ್ಮಾಲ್ಯ ಮುಂತಾದ ಬಹುಮಾನಗಳನ್ನು ನೀಡಿ ಅನುಗ್ರಹಿಸಲು ಕೃತಾರ್ಥ ರಾದರು.

ಆಗ ಅಲ್ಲಿನ ಸನ್ನಿಧಿಯಲ್ಲಿದ್ದ ಹಿರಿಯರಾದ ಅಂಜನ ವೆಚ್ಚಾಳ್ವಾರ್, ಭಗವದ್ರಾಮಾನುಜರು, ತಿರುವೇಂಕಟಜಿಯ್ಯಾರು ಮೊದಲಾದವರೆಲ್ಲರೂ ಸಂತುಷ್ಟರಾಗಿ, ಈ ಮಧ್ಯಾಹ್ನ ಸಮಯ ದಲ್ಲಿ ದಿವ್ಯ ಮಾಲೆಗಳನ್ನು ಸಮರ್ಪಿಸುವಾಗ 'ಶಿರಿಯ ತಿರು ಮಡಲ್' ಎಂಬ ಪಾಶುರವನ್ನು ಅನುಸಂಧಿಸಲು ಅದನ್ನು ಕೇಳಿ ದಿವ್ಯ ಮಾಲಿಕೆಗಳನ್ನು ಸಮರ್ಪಿಸತಕ್ಕದ್ದು.

ಈ ಭಗವದಾಜ್ಞೆ ಮೇರೆಗೆ ಬೀದಿಗಳಲ್ಲಿ ಜಯಕಾರ ಹಾಕುವಾಗ ಈ ತಿರುಮಡಲ್ ಪ್ರಬಂಧವನ್ನೇ ಕೇಳಿಸಬೇಕೆಂದು ನೇಮವನ್ನು ಸಹ ವಿಧಿಸಿದರು.

ಮೊದಲು 'ಅಳಗಿಯ ಮಣವಾಳಪ್ಪೆರುಮಾಳ್' ಅನ್ನು ಶ್ರೀರಂಗನಾಥ ಸ್ವಾಮಿಗೆ ಈ ತರಹದ ಜಯಕಾರವನ್ನು ಹಾಡಿ ಮರಳಿ ಹೋಗುವಾಗ ಬಹಳ ಅಸಾಧಾರಣವಾದ 'ಕಂಗುಲಮ್ ಪಗಲಂ ' ಪಾಶುರವನ್ನು (ಗೀತೆಯನ್ನು ) ಅನುಗ್ರಹಿಸಿದರೆಂಬ ಐತಿಹ್ಯವು ಪ್ರಚಾರದಲ್ಲಿರುವಾಗಲೇ ಈಗ ಕಂಗುಲು ಪಗಲಂ' ಪಾಶುರವನ್ನು ಕೇಳಿ ಅಂತರಂಗದಲ್ಲಿ ಆನಂದಿಸಲು ಪ್ರತಿದಿನವೂ ಸಾಯಂಕಾಲದಲ್ಲಿ ನಿತ್ಯಾನುಸಂಧಾನದಿಂದ ಈ ತಿರುವಾಯ್ ಮೋಳಿ (ದಶಕವು) ಶ್ರೀ ಸ್ವಾಮಿಯವರಿಗೆ ಕೇಳಿಸತಕ್ಕದ್ದೆಂಬ ನಿಯಮವನ್ನು ವಿಧಿಸಿದರು.

(ಮುಂದುವರೆಯುತ್ತದೆ.)

# ತಿರುಮಲೆ ತಿರುಪತಿ ದೇವಸ್ಥಾನಗಳು, ತಿರುಪತಿ

## ತಿರುಮಲೆಯಲ್ಲಿ ಭಕ್ತರು ಮಾಡಬೇಕಾದವು :

☑ ತಿರುಮಲೆಗೆ ಬರುವ ಮುನ್ನ ನಿಮ್ಮ ಇಷ್ಟ ಅಥವಾ ಕುಲದೈವವನ್ನು ಪೂಜಿಸಿರಿ.
☑ ಶ್ರೀ ವೆಂಕಟೇಶ್ವರ ಸ್ವಾಮಿಯನ್ನು ದರ್ಶಿಸುವ ಮೊದಲು ಸ್ವಾಮಿಪುಷ್ಕರಿಣಿಯಲ್ಲಿ ಸ್ನಾನಮಾಡಿ, ಅಲ್ಲಿಯೇ ಇರುವ ಶ್ರೀ ವರಾಹಸ್ವಾಮಿಯನ್ನು ದರ್ಶಿಸಿರಿ.
☑ ಆಲಯದ ಒಳಗಡೆ ಗಂಭೀರ ಮೌನವನ್ನು ಪಾಲಿಸಿರಿ ಮತ್ತು ಮನಸ್ಸಿನಲ್ಲಿ “ಓಂ ನಮೋ ವೇಂಕಟೇಶಾಯ” ಎಂದು ಜಪಿಸಿರಿ.
☑ ಆಲಯದ ಒಳಗಡೆ ಸ್ವಾಮಿಯಲ್ಲಿ ಮನಸ್ಸನ್ನು ಕೇಂದ್ರೀಕರಿಸಿ.
☑ ತಿರುಮಲೆಯಲ್ಲಿ, ಪಾಪನಾಶಿನಿಯಲ್ಲೂ, ಆಕಾಶಗಂಗೆಯಲ್ಲೂ ಸ್ನಾನಮಾಡಿರಿ.
☑ ತಿರುಮಲೆಗೆ ಬಂದಾಗ ಸನಾತನ ಸಂಪ್ರಾದಯಗಳನ್ನು, ಆಚಾರ ವ್ಯವಹಾರಗಳನ್ನು ಗೌರವಿಸಿ.
☑ ತಮ್ಮ ಕಾಣಿಕೆಗಳನ್ನು ಹುಂಡಿಯಲ್ಲಿ ಮಾತ್ರವೇ ಸಮರ್ಪಿಸಿ.
☑ ತಿರುಮಲೆಯನ್ನು ಶುಭ್ರವಾಗಿ ಶುದ್ಧವಾಗಿ ಇಡಲು ಸಹಕರಿಸಿ.ಬಯೋಡಿಗ್ರೇಡಬಲ್ ಪ್ಲಾಸ್ಟಿಕ್ ಕವರಗಳನ್ನು ಮಾತ್ರವೇ ಬಳಸಿರಿ.

## ತಿರುಮಲೆಯಲ್ಲಿ ಭಕ್ತರು ಮಾಡಬಾರದವು :

☒ ತಮ್ಮೊಂದಿಗೆ ಹೆಚ್ಚಿನ ಹಣ, ಆಭರಣಗಳನ್ನು ತರಬೇಡಿ.
☒ ದೇವರನ್ನು ಸೇವಿಸುವುದರ ಹೊರತು ಬೇರೆ ಯಾವ ಕಾರಣಕ್ಕೂ ತಿರುಮಲೆಗೆ ಬಾರದಿರಿ.
☒ ದೇವರ ದರ್ಶನಕ್ಕಾಗಿ ನೂಕುನುಗ್ಗಲು ಮಾಡದಿರಿ.
☒ ಸಂಪ್ರದಾಯದಂತೆ ಆಲಯ ಪ್ರವೇಶ ನಿಷೇಧವಿದ್ದಲ್ಲಿ ಆಲಯ ಪ್ರವೇಶ ಮಾಡದಿರಿ.
☒ ತಿರುಮಲೆಯಲ್ಲಿ ಹೂವು ಮುಡಿಯದಿರಿ.ಎಲ್ಲ ಹೂವುಗಳೂ ದೇವರಿಗೇ.
☒ ನೀರು, ವಿದ್ಯುತ್‌ಗಳು ಪೋಲು ಮಾಡದಿರಿ.
☒ ಅಪರಿಚಿತರಿಗೆ ನಿಮ್ಮ ಕೋಣೆಯ ಬೀಗದ ಕೈಗಳನ್ನು ನೀಡದಿರಿ, ಅವರನ್ನು ನಿಮ್ಮ ಕೊಠಡಿಗೆ ಸೇರಿಸದಿರಿ.
☒ ಬಯೋಡಿಗ್ರೇಡಬಲ್ ಪ್ಲಾಸ್ಟಿಕ್ ಕವರಗಳನ್ನು ಹೊರತು ಇತರ ಕವರ್‌ಗಳನ್ನು ಬಳಸಬಾರದು.
☒ ನಾಲ್ಕು ಮಾಢಬೀಧಿಗಳಲ್ಲಿ ಪಾದರಕ್ಷೆಗಳನ್ನು ಧರಿಸಿ ಓಡಾಡಬಾರದು.

## ತಿರುಮಲೆಯಲ್ಲಿ ನಿಷೇಧಿತ ಪದಾರ್ಥಗಳು : ( ನಿಷೇಧಿಸಿದವು)

✖ ತಿರುಮಲೆಯಲ್ಲಿ ಧೂಮಪಾನ,ಮದ್ಯಪಾನ,ಮಾಂಸಾಹಾರ ಮೊದಲಾದವುಗಳನ್ನು ನಿಷೇಧಿಸಲಾಗಿದೆ.
✖ ಸ್ವಾಮಿಯವರ ದರ್ಶನಕ್ಕಾಗಿ, ವಸತಿಗಾಗಿ, ಪ್ರತ್ಯೇಕ ಪ್ರವೇಶಕ್ಕಾಗಿ ದಳ್ಳಾಳಿಗಳನ್ನು ಆಶ್ರಯಿಸಬೇಡಿರಿ.
✖ ಬೀದಿವ್ಯಾಪಾರಿಗಳಿಂದ ನಕಲೀ ಪ್ರಸಾದ ಕೊಳ್ಳಬೇಡಿ.
✖ ದೇವಾಲಯದಲ್ಲಿ ಉಗುಳುವುದು ಮುಂತಾದವುಗಳನ್ನು ಮಾಡಬಾರದು.
✖ ಅನ್ಯಮತ ಪ್ರಚಾರ ನಿಷೇಧಿಸಲಾಗಿದೆ.
✖ ವಿವಿಧ ರಾಜಕೀಯ ಸಭೆ, ಬ್ಯಾನರು, ಧರಣಿ, ರಾಸ್ತಾರೋಕೋ, ಹರತಾಳ - ಮೊದಲಾದವುಗಳನ್ನು ನಿಷೇಧಿಸಲಾಗಿದೆ.
✖ ಯಾವುದೇ ರೂಪದಲ್ಲಿ ಜೂಜಾಡುವುದನ್ನು ನಿಷೇಧಿಸಲಾಗಿದೆ.
✖ ಆಲಯದಲ್ಲಿ ಸೆಲ್‌ಫೋನ್, ಕ್ಯಾಮರಾ, ಮತ್ತಿತರ ವಿದ್ಯುತ್ ಚಾಲಿತ ಉಪಕರಣಗಳನ್ನು ನಿಷೇಧಿಸಲಾಗಿದೆ.
✖ ಜಂತುವಧೆ ನಿಷೇಧ.
✖ ಭಿಕ್ಷುರನ್ನು ಪ್ರೋತ್ಸಾಹಿಸದಿರಿ.

**ಕಾರ್ಯನಿರ್ವಹಣಾಧಿಕಾರಿ**



# 108 ವೈಷ್ಣವ ದಿವ್ಯ ಕ್ಷೇತ್ರಗಳು

# ತಿರುಕ್ಕಂಡಿಯೂರ್

ನಿತ್ಯಂ ಭಾತಿ ಕಪಾಲ ತೀರ್ಥ ರುಚಿರೇಶ್ರೀಕಂಡಿಯಾರ್ ಪಟ್ಟಣೀ
ವೈಮಾನೇ ಕಮಲಾಕೃತೌ ಸ್ಥಿತಿಯುತಃ ಪ್ರಾಚೀಮುಖಾಲಂಕೃತಃ।
ನಾಯಕ್ಯಾ ಹರ ಶಾಪ ನಾಶಕ ವಿಭು ಶ್ರೀಪದ್ಮ ವಲ್ಲ್ಯಾ ಶ್ರಿತಃ
ಪುತ್ಯಕ್ಷೋ ವರ ಕುಂಭ ಸಂಭವ ಮುನೇಃ ಕೀರ್ತ್ಯಃ ಕಲದ್ವೇಷಿಣಃ॥

**ತೆಲುಗುಮೂಲ : ಆಚಾರ್ಯ ಚಕ್ರವರ್ತಿ ರಂಗನಾಥನ್**

**ಕನ್ನಡ ಅನುವಾದ : ಸೂರ್ಯವಂಶಿ**

ಅಪಾರವಾದ ಭಗವದ್ಭಕ್ತಿಗೆ ಸಿಂಧುವಿನಂತಿರುವ ಪನ್ನಿದ್ದರು ಆಳ್ವಾರರಿಂದ ಕೀರ್ತಿಸಲ್ಪಟ್ಟ ೧೦೮ ದಿವ್ಯ ದೇಶಗಳಲ್ಲಿ ತಿರುಕ್ಕಂಡಿಯೂರ್ ಎಂಬ ದಿವ್ಯದೇಶವೂ ಒಂದು. ಈ ಕ್ಷೇತ್ರವು ತಂಜಾವೂರಿನಿಂದ ತಿರುವಯ್ಯಾರ್‌ಗೆ ಹೋಗುವ ದಾರಿಯಲ್ಲಿ ಹತ್ತು ಕಿ.ಮೀ. ದೂರದಲ್ಲಿ ಕುಡಮುರುಟ್ಟಿ ಮತ್ತು ಪೆನ್ನಾರ್ ಮಧ್ಯದಲ್ಲಿ ಅದ್ಭುತವಾದ ಪ್ರಕೃತಿ ಸೌಂದರ್ಯದಿಂದ ರಾರಾಜಿಸುತ್ತಿರುವ ಪ್ರದೇಶದಲ್ಲಿ ಈ ಕ್ಷೇತ್ರ ನೆಲೆಗೊಂಡಿದೆ. ಈ ತಿರುಕ್ಕಂಡಿಯೂರ್ ದೇವಾಲಯಕ್ಕೆ "ಹರಶಾಪವಿಮೋಚನ ಪೆರುಮಾಳ್" ಎಂಬ ಹೆಸರೂ ಇದೇ.ಹಾಗೇ ಅಷ್ಟವೀರಸ್ಥಳ, ತ್ರಿಮೂರ್ತಿ ಕ್ಷೇತ್ರವೆಂದೂ ಕರೆಯುತ್ತಾರೆ. ಬ್ರಹ್ಮ, ವಿಷ್ಣು, ಮಹೇಶ್ವರರ ಸನ್ನಿಧಿ ಇಲ್ಲಿದೆಯಾದ್ದರಿಂದ ಇದನ್ನು ತ್ರಿಮೂರ್ತಿಕ್ಷೇತ್ರವೆಂದು ಕರೆಯುತ್ತಾರೆ. ಹರಶಾಪವಿಮೋಚನ ಭಗವಾನ್ ದೇವಾಲಯ ಸುಮಾರು ೦.೬೧ ಎಕರೆಗಳ ಪ್ರದೇಶದಲ್ಲಿ ಅದ್ಭುತವಾದ ಎರಡು ಪ್ರಾಕಾರಗಳನ್ನು ಒಳಗೊಂಡ ರಾಜಗೋಪುರ ಮಹಾಮಂಟಪ, ಅರ್ಧಮಂಟಪ, ಮೊದಲಾದ ಮಂಟಪಗಳೊಂದಿಗೆ ಅತ್ಯಂತ ವೈಭವದಿಂದ ವಿರಾಜಮಾನವಾಗಿದೆ. ಈ ಕ್ಷೇತ್ರದಲ್ಲಿ ನೆಲೆಸಿರುವ ಭಗವಂತನನ್ನು ಹರಶಾಪವಿಮೋಚನ ಪೆರುಮಾಳ್ ಎಂದೂ, ಕಮಲನಾಥನ್ ಎಂದು ಹಾಗೆಯೇ ಅಮ್ಮನವರನ್ನು ಕಮಲವಲ್ಲಿ ತಾಯಾರ್ ಎಂದೂ ಕರೆಯುತ್ತಾರೆ. ಈ ಆಲಯದಲ್ಲಿ ನೆಲೆಗೊಂಡಿರುವ ಸ್ವಾಮಿ ನಿಂತಿರುವ ಭಂಗಿಯಲ್ಲಿ ಪೂರ್ವದಿಕ್ಕಿಗೆ ಮುಖ ಮಾಡಿದ್ದಾರೆ. ಕಪಾಲಮೋಕ್ಷ ತೀರ್ಥ ಎಂಬ ಈ ಆಲಯದಲ್ಲಿ ಒಂದು ಪುಷ್ಕರಿಣಿ ಇದೇ. ಆಲಯದ ಒಳಗೆ ಇರುವ ಪ್ರಾಕಾರದಲ್ಲಿ ಕಮಲವಲ್ಲಿ ತಾಯಾರ್ ಸನ್ನಿಧಿ ಇದೆ. ಇದಲ್ಲದೇ ನರಸಿಂಹ ಮೂರ್ತಿ.ಚಕ್ರತ್ತಾಳ್ವಾರ್,ಗರುಡ ದೇವರು, ಆಂಡಾಳ್ ಅಮ್ಮನವರು, ಆಳ್ವಾರರು, ಆಚಾರ್ಯರ ಸನ್ನಿಧಿಗಳೂ ಇವೆ.

### ಸ್ಥಳ ಪುರಾಣ :

ತಿರುಕ್ಕಂಡಿಯೂರ್ ಮಹತ್ಯೆಯನ್ನು ಹಲವಾರು ರೀತಿಯಲ್ಲಿ ನಾವು ನೋಡಬಹುದು. ಅದರಲ್ಲಿ ಮುಖ್ಯವಾದುದುದೆಂದರೆ ಬ್ರಹ್ಮದೇವನ ಶಿರಸ್ಸನ್ನು ಕಡಿದ ಕಾರಣದಿಂದ ಶಿವನಿಗೆ ಉಂಟಾದ ಬ್ರಹ್ಮಹತ್ಯಾದೋಷವನ್ನು ಈ ಕ್ಷೇತ್ರದಲ್ಲಿ ನೆಲೆಸಿರುವ ಸ್ವಾಮಿಯು ಬಗೆಹರಿಸಿದ್ದಾನೆಂದು ತಿಳಿದು ಬರುತ್ತದೆ.

ಒಮ್ಮೆ ಐದು ಶಿರಸ್ಸುಗಳನ್ನು ಹೊಂದಿದ ಬ್ರಹ್ಮ ದೇವನು ಕೈಲಾಸ ಪರ್ವತಕ್ಕೆ ಹೋದ. ಆ ಸಮಯದಲ್ಲಿ ಬಂದ ಬ್ರಹ್ಮದೇವನನ್ನು ಪಾರ್ವತೀದೇವಿ ಶಿವ ಎಂದು ಭಾವಿಸಿ, ನಮಸ್ಕರಿಸಿದಳು. ಆ ದೃಶ್ಯವನ್ನು ನೋಡಿದ ಶಿವನಿಗೆ ಕೋಪ ಹೆಚ್ಚಾಗಿ ಬ್ರಹ್ಮದೇವನ ಐದು ತಲೆಗಳಲ್ಲಿ ಒಂದು ತಲೆಯನ್ನು ಕೈಯಲ್ಲೇ ತಿರುಚಿ ತೆಗೆದು ಹಾಕಿದ. ಆ ರೀತಿ ಬ್ರಹ್ಮ ದೇವನ ತಲೆ ಶಿವನ





ಅಂಗೈಗೇ ಅಂಟಿಕೊಂಡಿತು. ಆದ್ದರಿಂದ ಶಿವನಿಗೆ ಬ್ರಹ್ಮ ಹತ್ಯಾ ದೋಷ ಒದಗಿತು. ಈ ದೋಷವನ್ನು ಕಳೆದುಕೊಳ್ಳುವುದಕ್ಕಾಗಿ ಶಿವನು ಶ್ರೀಮನ್ನಾರಾಯಣನ ಮೊರೆ ಹೊಕ್ಕ. ಆಗ ಕರುಣಾ ಮಯಿಯಾದ ದೇವದೇವನು ತನ್ನ ಶ್ರೀಪಾದತೀರ್ಥದಿಂದ ಆ ಕಪಾಲವನ್ನು ತುಂಬಿಸಿದರೆ ಆ ಶಿರಸ್ಸು ನಿನ್ನ ಕೈಯಿಂದ ಹೊರ ಬರುತ್ತದೆ ಎಂದು ತಿಳಿಸಿದ ಆಗ ಶಿವನು ಸರ ಸರನೆ ಪುಣ್ಯ ಕ್ಷೇತ್ರಗಳಿಗೆ ಹೋಗಿ,ತನ್ನ ಕೈಗೆ ಅಂಟಿಕೊಂಡಿರುವ ಬ್ರಹ್ಮನ ಕಪಾಲವನ್ನು ತೊಡೆದುಹಾಕುವುದಕ್ಕೆ ಪ್ರಯತ್ನಿಸಿದ. ಕೊನೆಯ ಪ್ರಯತ್ನವೆಂಬಂತೆ ಈ ತಿರುಕ್ಕಂಡಿಯೂರ್ ಸ್ವಾಮಿಯನ್ನು ಸೇವಿಸಿದ ನಂತರ ಸ್ವಾಮಿ ತನ್ನ ಗದೆಯ ಮೂಲಕ ಭೂಮಿ ಯನ್ನು ಚೆನ್ನಾಗಿ ತೋಡಿದಾಗ ನೀರು ಊರಿತು. ಶಿವನು ಆ ನೀರಿನಿಂದ ಸ್ನಾನ ಮಾಡಬೇಕೆಂದು ತಿಳಿಸಿದಾಗ ಶಿವನು ಅದೇ ರೀತಿಯಲ್ಲಿ ಸ್ನಾನ ಮಾಡಿದ. ಆಗ ಆತನ ಕೈಗೆ ಅಂಟಿ ಕೊಂಡಿದ್ದ ಆ ಬ್ರಹ್ಮ ಕಪಾಲದಿಂದ ಮುಕ್ತಿಯನ್ನು ಪಡೆದು ಕೊಂಡ.ಆದ್ದರಿಂದ ಇದಕ್ಕೆ ಕಪಾಲಮೋಕ್ಷ ತೀರ್ಥವೆಂದು ಕರೆಯುತ್ತಾರೆ.ಒಮ್ಮೆ ಅಸುರರ ಚಕ್ರವರ್ತಿಯಾದ ಮಹಾಬಲಿ ಆ ದೇವದೇವನಿಗೆ ಸಂಬಂಧಿಸಿದ ಒಂದು ಸ್ವರ್ಣಾಭರಣವನ್ನು ಅಪಹರಿಸಿ, ಪಾತಾಳಲೋಕದಲ್ಲಿ ಅಡಗಿ ಕುಳಿತ, ಅಂದರೆ ಆ ಆಭರಣವನ್ನು ಪಾತಾಳದಲ್ಲಿ ಬಚ್ಚಿಟ್ಟ. ಆದರೆ ನಂತರ ತಾನು ಮಾಡಿದ ಅಪರಾಧಕ್ಕೆ ಬಲಿಚಕ್ರವರ್ತಿ ಬಹಳ ದುಃಖಿತನಾಗಿ ತಿರುಕ್ಕಂಡಿಯೂರ್ ಕ್ಷೇತ್ರಕ್ಕೆ ಬಂದು ಹರಶಾಪವಿಮೋಚನ ಭಗವಾನನ ಮುಂದೆ ತನ್ನ ತಪ್ಪನ್ನು ಹೇಳಿ ತನ್ನನ್ನು ಕ್ಷಮಿಸ ಬೇಕೆಂದು ಕೇಳಿಕೊಂಡ. ಆಗ ಕೃಪಾಸಾಗರನಾದ ಶ್ರೀಮನ್ನಾರಾಯಣನು ತನ್ನ ಕೈಯಲ್ಲಿ ಒಂದು ತಾವರೆಯ ಹೂವಿನಿಂದ ಆ ಭೂಮಿಯನ್ನು ತೋಡಿ, ಒಂದು ಪುಷ್ಕರಿಣಿ ಯನ್ನು ತಯಾರಿಸಿ ಆ ಪುಷ್ಕರಿಣಿಯಲ್ಲಿ ಸ್ನಾನ ಮಾಡ ಬೇಕೆಂದು ಆದ್ದರಿಂದ ಆತನ ಪಾಪವು ತೊಡೆದು ಹೋಗು ತ್ತದೆಂದು ಅನುಗ್ರಹಿಸಿದ. ಶ್ರೀಮನ್ನಾರಾಯಣನ ಮಾತಿನಂತೆ ಬಲಿಚಕ್ರವರ್ತಿ ಆ ಪುಷ್ಕರಿಣಿಯಲ್ಲಿ ಸ್ನಾನ ಮಾಡಿ, ತನ್ನ ಪಾಪ ವನ್ನು ಕಳೆದು ಕೊಂಡನು. ಹಾಗೆಯೇ ಮಗಧ ದೇಶಕ್ಕೆ ಸೇರಿದ ಕಾಲವರ್ಮ ಎಂಬ ಬ್ರಾಹ್ಮಣ ಪಂಡಿತನೊಬ್ಬ ಗರ್ವದಿಂದ ಎಲ್ಲರನ್ನೂ ಕಳೆದು ಕೊಂಡು ತನ್ನ ದುಷ್ಟ ನಡುವಳಿಕೆ ಯಿಂದಾಗಿ ಭಯಂಕರವಾದ ರೋಗಕ್ಕೆ ತುತ್ತಾಗಿ ಹಲವಾರು ಜನ್ಮಗಳನ್ನು ಪಡೆದುಕೊಂಡು ದುಃಖವನ್ನು ಹೊಂದಿ ಯಾವುದೋ ಒಂದು ಪುಣ್ಯದಿಂದಾಗಿ ಈ ತಿರುಕ್ಕಂಡಿಯೂರ್ ಕ್ಷೇತ್ರಕ್ಕೆ ,ಬಂದು ತನ್ನ ದುಃಖಗಳನ್ನೆಲ್ಲಾ ಕಳೆದುಕೊಂಡು ಮೋಕ್ಷವನ್ನು ಪಡೆದುಕೊಂಡ ಈ ರೀತಿ ಈ ಕ್ಷೇತ್ರದಲ್ಲಿ ಹಲ ವಾರು ಪಾಪಗಳನ್ನು ಮಾಡಿದವರೂ ಪುಣ್ಯಕರವಾದ ಈ ಪುಷ್ಕರಿಣಿಯಲ್ಲಿ ಸ್ನಾನ ಮಾಡಿ.ಇಲ್ಲಿ ನೆಲಸಿರುವಂತಹಾ ಭಗವಂತನ ಕೃಪಾಕಟಾಕ್ಷದಿಂದ ಸದ್ಗತಿಯನ್ನು ಹೊಂದಿ ದ್ದಾರೆ. ಆಳ್ವಾರರಲ್ಲಿ ತಿರುಮಂಗೈಯಾಳ್ವಾರರು ಒಬ್ಬರೇ ಈ ದಿವ್ಯ ದೇಶವನ್ನು ಕೊಂಡಾಡಿದ್ದಾರೆ.

ಇಲ್ಲಿ ನೆಲೆಸಿರುವ ಸ್ವಾಮಿ - ಹರಶಾಪವಿಮೋಚನ ಭಗವಂತ

ಮೂಲ ವಿಗ್ರಹ - ನಿಂತಿರುವ ಭಂಗಿಯಲ್ಲಿದೆ.

ಉತ್ಸವ ಮೂರ್ತಿ = ಕಮಲನಾಥ

ಅಮ್ಮನವರು-ಕಮಲವಲ್ಲಿ ತಾಯಾರ್

ವಿಮಾನ ಗೋಪುರ-ಕಮಲಾಕೃತಿಯಲ್ಲಿದೆ.

ಪುಷ್ಕರಿಣಿ-ಕಮಲಮೋಕ್ಷ ಪುಷ್ಕರಿಣಿ ಕಪಾಲಮೋಕ್ಷ ತೀರ್ಥ, ಬಲಿತೀರ್ಥ, ಪದ್ಮತೀರ್ಥ, ಕುಡಮುರಟ್ಟಿ ನದಿ

ಸ್ಥಳ ವೃಕ್ಷಂ - ಅಶ್ವತ್ಥ ವೃಕ್ಷ

ಮಂಗಳಾಶಾಸನ - ತಿರುಮಂಗೈಯಾಳ್ವಾರರು ಅಗಸ್ತ್ಯ ಮುನಿಗೆ ಪ್ರತ್ಯಕ್ಷವಾಗಿದ್ದು

ವೈಖಾನಸ ಆಗಮ

**ಧ್ಯಾನ ಶ್ಲೋಕ -**

ನಿತ್ಯಂ ಭಾತಿ ಕಪಾಲ ತೀರ್ಥ ರುಚಿರ ಶ್ರೀಕಂಡಿಯಾರ್ ಪಟ್ಟಣೇ
ವೈಮಾನೇ ಕಮಲಾಕೃತೌ ಸ್ಥಿತಿಯುತಃ ಪ್ರಾಚೀಮುಖಾಲಂಕೃತ ಃ
ನಾಯಕ್ಯಾ ಹರ ಶಾಪ ನಾಶಕ ವಿಭು ಶ್ರೀಪದ್ಮವಲ್ಲ್ಯಾ ಶ್ರಿತಃ
ಪ್ರತ್ಯಕ್ಷೋ ವರಕುಂಭ ಸಂಭವ ಮುನೇಃ ಕೀರ್ತ್ಯಃ ಕಲಿದ್ವೇಷಿಣಃ



ಕಮಲವಲ್ಲೀ ನಾಯಕಿ ಸಮೇತ ಹರಶಾಪ ವಿಮೋಚನ ಭಗವಾನನ ಅನುಗ್ರಹದಿಂದ ಎಲ್ಲರೂ ಕ್ಷೇಮ ದಿಂದ ಇರ ಬೇಕೆಂದು ಪ್ರಾರ್ಥಿಸುತ್ತಿದ್ದೇವೆ.





# ತೀರ್ಥ ಸೇವಿಸಿ

- ಪ್ರತ್ಯಗ್ರ



ತೀರ್ಥ ಎಂಬುದು ದೇವರ ಅಭಿಷೇಕದ ನೀರು,ಪಂಚಾಮೃತ, ಎಳೆನೀರು, ಕಾಯಿನೀರು, ಕಷಾಯ, ತುಳಸಿ ತೀರ್ಥ, ಕರ್ಪೂರ ಲೇಪಿತ ತೀರ್ಥ, ಹೀಗೆ ಯಾವ ರೂಪದಲ್ಲಾದರೂ ಇರಬಹುದು. ಆದರೆ ಮೂಲ ದ್ರವರೂಪ ಅಷ್ಟೇ, ಸಾಲಿಗ್ರಾಮ ಎಂಬುದನ್ನು ನಾವು ನೋಡಿರುತ್ತೇವೆ, ಇಂದಿನ ಹೊಸ ಪೀಳಿಗೆಗೆ ತೀರ್ಥದ ಮಹತ್ವ ಅರಿವಾಗಬೇಕು.

ಸಾಲಿಗ್ರಾಮದ ಮೇಲೆ ಪಚ್ಚಕರ್ಪೂರ ಸಹಿತ ಅಷ್ಟಗಂಧ ಲೇಪಿಸಿ, ಅದನ್ನು ಶಂಖದಲ್ಲಿ ತುಂಬಿಸಿಕೊಂಡ ಶುದ್ಧ ನೀರಿನಿಂದ ತುಳಸಿ ಇಟ್ಟು ಪುರುಷ ಸೂಕ್ತದಿಂದ ಅಭಿಷೇಕಿಸಿದಾಗ ದೊರೆಯುವ ಆ ಮಿಶ್ರಿತ ನೀರೆ ನಮಗೆ ಮನೆಗಳಲ್ಲಿ ಸಿಗಬಹುದಾದ ತೀರ್ಥ. ಇದಕ್ಕೆ ರೋಗನಿವಾರಕ ಶಕ್ತಿ ಇದೆ.

ಎಲ್ಲಾ ತೀರ್ಥಗಳೂ ಪರಿಣಾಮಕಾರಿಗಳೇ, ವಿಶೇಷವಾದ ಕಷಾಯ ತೀರ್ಥಗಳನ್ನು ಬ್ರಹ್ಮೋತ್ಸವ ಅಥವಾ ವಿವಿಧ ಉತ್ಸವದ ಸಮಯದಲ್ಲಿ ಉತ್ಸವ ಮುಗಿಸುವ ವೇಳೆ ದೇವರ ಕಾರ್ಯ ನಡೆಸುವಾಗ ನಿವೇದಿಸಲಾಗುವ ವಿವಿಧ ಗಿಡಮೂಲಿಕೆಗಳು ಮತ್ತು ಯಾಲಕ್ಕಿ, ಲವಂಗ, ಪಿಪ್ಪಲಿ ಇತ್ಯಾದಿ ಹಲವಾರು ದ್ರವ್ಯಗಳಿಂದ ಕುದಿಸಿ ತಾಯಾರಿಸಿದ ಕಷಾಯ ನೀಡುತ್ತಾರೆ.

ದೇವಸ್ಥಾನಕ್ಕೆ ಹೋದರೆ ತೀರ್ಥವನ್ನು ಕುಡಿಯಿರಿ, ನೀರೆಂದು ಬಿಡಬೇಡಿ, ಅದರ ಪರಿಣಾಮ ಕೂಡ ಅಷ್ಟೇ ಅದ್ಭುತ. ತೀರ್ಥಗಳು ಸಹಜವಾಗಿ ಖನಿಜಯುಕ್ತವಾಗಿರುತ್ತವೆ, ಮತ್ತೊಂದು ಎಂದರೆ ದೇವಸ್ಥಾನದಲ್ಲಿ ಕೊಡುವ ತೀರ್ಥವನ್ನು ತಾಮ್ರ ಹಾಗೂ ಹಿತ್ತಾಳೆಯ ತಂಬಿಗೆಯಲ್ಲಿ ತುಂಬಿಟ್ಟಿರುವುದು ಭಕ್ತರ ಆರೋಗ್ಯಕರ ಬೆಳವಣಿಗೆಗೆ ಸಹಾಯಕವಾಗುತ್ತದೆ. ನಮ್ಮ ಸುತ್ತ ದಿನನಿತ್ಯ ನಡೆಸುವ ಧಾರ್ಮಿಕ ಕಾರ್ಯಗಳ ಔಚಿತ್ಯ ವೈಜ್ಞಾನಿಕ ಮತ್ತು ಅರ್ಥಪೂರ್ಣ.

# ಸಂಸ್ಕೃತ ಕಲಿಯೋಣ...!!

## अष्टादशः पाठः
## ಇಪ್ಪತ್ತನೇಯ ಪಾಠ

ರಚನೆ:- ಮಹಾ ಮಹೋಪಾಧ್ಯಾಯ ಕಾಶಿ ಕೃಷ್ಣಾಚಾರ್ಯ

फलम् = ಹಣ್ಣು तस्य = ಅವನದು एतस्य = ಇದಕ್ಕೆ तावत्पर्यन्तम् = ಅಲ್ಲಿಯವರೆಗೆ एतावत्पर्यन्तम् = ಇಲ್ಲಿಯವರೆಗೆ

कियत्पर्यन्तम् = ಎಲ್ಲಿಯವರೆಗೆ खाद् = ತಿನ್ನುವುದು (ತಿನ್ನು) प्र. खादति = खादन्ति = ತಿನ್ನುತ್ತದೆ = ತಿನ್ನುತ್ತೇವೆ

म.खादसि = खादथ = ತಿನ್ನುತ್ತಿ = ತಿನ್ನು उ. खादामि = खादामः ತಿನ್ನುತ್ತೇನೆ = ತಿಂದೆ

### ಪ್ರಶ್ನೆ

1. तस्य जनकः एतावत्पर्यन्तं कुत्रासीत्?
2. अस्मद्गृहे आसीत्।
3. तत्र किं करोति?
4. तत्र फलं खादति।
5. ते कियत्पर्यन्तं पाकं कुर्वन्ति?
6. एतस्य गृहं कुत्रास्ति?
7. यूयम् इदानीं किं कुरुथ?
8. वयं फलानि खादामः।
9. बालकाः अन्नं खादन्ति।
10. त्वं तस्य गृहे किं खादसि?

### ಉತ್ತರ

1. ನಿನ್ನ ತಂದೆಯು ಇಲ್ಲಿಯವರೆಗೆ ಎಲ್ಲಿದ್ದರು?
2. ನಮ್ಮ ಮನೆಯಲ್ಲಿ ಇದ್ದರು.
3. ಅಲ್ಲಿ ಏನು ಮಾಡುತ್ತಿ?
4. ಅಲ್ಲಿ ಫಲವನ್ನು ತಿನ್ನುತ್ತಿ
5. ಅವರು ಎಲ್ಲಿಯವರೆಗೆ ಅಡುಗೆಯನ್ನು ಮಾಡುತ್ತಾರೆ?
6. ಇವರ ಮನೆಯು ಎಲ್ಲಿದೆ ?
7. ತಾವೆಲ್ಲರೂ ಈಗ ಏನನ್ನು ಮಾಡುತ್ತಿದ್ದೀರಿ ?
8. ನಾವೆಲ್ಲರೂ ಹಣ್ಣುಗಳನ್ನು ತಿನ್ನುತ್ತಿದ್ದೇವೆ.
9. ಬಾಲಕರು ಅನ್ನವನ್ನು ತಿನ್ನುತ್ತಿದ್ದಾರೆ.
10. ನೀನು ಅವರ ಮನೆಯಲ್ಲಿ ಏನನ್ನು ತಿಂದಿರುವೆ?

### ಪ್ರಶ್ನೆ

1. ಈ ಹಣ್ಣು ಯಾರದು ?
2. ಇದು ನನ್ನದು
3. ನಿನ್ನ ಬಿಂದಿಗೆಯಲ್ಲಿ ನೀರಿದೆಯಾ ?
4. ಹಾಗಾದರೆ ತಾವೆಲ್ಲರೂ ಯಾಕೆ ಬೇಗ ಬೇಗನೆ ಅನ್ನವನ್ನು ತಿನ್ನುತ್ತೀದ್ದಿರಿ ?
5. ನಮ್ಮ ಮನೆಯಲ್ಲಿ ಯಾರು ಕೂಡ ಮಾಡುವರಿಲ್ಲ.
6. ನಮ್ಮ ಮನೆಯಲ್ಲಿ ಯಾರೂ ಕೂಡ ಇಲ್ಲ (ಯಾರೊಬ್ಬರೂ)
7. ನಾನೊಬ್ಬನೇ ಅಡುಗೆಯನ್ನು ಮಾಡಿದ್ದೇನೆ.
8. ನೀವೆಲ್ಲರೂ ಯಾತಕ್ಕಾಗಿ ಅಲ್ಲಿ ಅನ್ನವನ್ನು ತಿನ್ನುತ್ತೀದ್ದಿರಿ?
9. ಅವರು ಮನೆಯಲ್ಲಿ ಇಲ್ಲವೋ
10. ಅದಕ್ಕೋಸ್ಕರವೇ ನಾನು ಅಲ್ಲಿ ತಿನ್ನುತ್ತೇನೆ.

### ಉತ್ತರ

1. एतत् फलं कस्य?
2. एतत् मम।
3. तव कलशे जलमस्ति वा?
4. मम कलशमेव अत्र नास्ति।
5. तर्हि यूयं किमर्थं त्वरया अन्नं सादथ?
6. अस्माकं गृहे केऽपि न सन्ति।
7. अहं युष्मभ्यं पाकम् अकरवम्।
8. एते किमर्थम् अत्र अन्नं सादन्ति?
9. ते गृहे न सन्ति खलु।
10. तदर्थम् अहम् अत्र खादामि।

# ತಿರುಮಲ ತಿರುಪತಿ ದೇವಸ್ಥಾನಗಳು

## ಪಂಚಗವ್ಯ ಉತ್ಪಾದನೆಗಳು

**ಉರ್ವಿ ನಾಸಲ್ ಡ್ರಾಪ್ಸ್**
ನೆಗಡಿ, ತಲೆನೋವುಗಳನ್ನು ನಿವಾರಿಸುತ್ತದೆ. (ಕಣ್ಣು,ಮೂಗು, ಕಿವಿ)

**ಭೂಮಿಹರ್ಬಲ್ ಫ್ಲೋರ್ ಕ್ಲೀನರ್**
ನೆಲದ ಮೇಲಿನ ಬ್ಯಾಕ್ಟೀರಿಯಾಗಳನ್ನು ನಾಶಪಡಿಸುತ್ತದೆ.

**ನಂದಿನಿ ಗೋ - ಅರ್ಕ್**
ಸತತವಾಗಿ ಕ್ರಮದಿಂದ ಬಳಸಿದಲ್ಲಿ ದೀರ್ಘಾಯುಷ್ಯ ಜೀವನಕಾಲದ ಪ್ರಮಾಣ ವೃದ್ಧಿಸುತ್ತದೆ.

**ಕ್ಷಮಾ ಕೌ - ಡಂಗ್ ಕೇಕ್ಸ್**
ಯಜ್ಞ,ಯೋಗಾದಿಗಳಿಗೆ ಉತ್ತಮವಾದ ವಾತಾವರಣವನ್ನು ಕಲ್ಪಿಸಿ ಕೊಡುತ್ತದೆ.

**ಭುವತಿ ಡಂಗ್ ಲಾಗ್ಸ್ (ಕೇಕ್ಸ್)**
ಹೋಮ - ಹವನಾದಿಗಳಿಗೆ ಶ್ರೇಷ್ಠವಾದ ಪರಿಸರವನ್ನು ಕಲ್ಪಿಸಿ ಕೊಡುತ್ತದೆ.

**ಅವನಿಧೂಪ ಚೂರ್ಣ**
ಸುವಾಸನೆಯನ್ನು ಪಸರಿಸುತ್ತದೆ.

**ಧರಣಿ ಊದುಬತ್ತಿ**
ಆಹ್ಲಾದಕರ ವಾತಾವರಣವನ್ನು ನಿರ್ಮಿಸುತ್ತದೆ.

**ಧಾತ್ರಿ ಸಾಂಬ್ರಾಣಿ ಕಪ್ಸ್**
ಉತ್ತಮ ಆರೋಗ್ಯವನ್ನು ಮೈಗೂಡಿಸುತ್ತದೆ.

**ವೈಷ್ಣವಿ ಧೂಪ್ ಸ್ಟಿಕ್ಸ್**
ವಾತಾವರಣವನ್ನು ಶುಭ್ರವನ್ನಾಗಿ ಮಾಡುತ್ತದೆ.

**ವಾರಾಹಿ ಧೂಪ್ ಕೋನ್ಸ್**
ಸುತ್ತಮುತ್ತಲಿನ ಪರಿಸರವನ್ನು ಪವಿತ್ರಗೊಳಿಸುತ್ತದೆ.

**ಪೃಥ್ವಿ ವಿಭೂತಿ**
ಈಶ್ವರಾನುಗ್ರಹ ಪ್ರಾಪ್ತಿಯನ್ನು ಕಲ್ಪಿಸುತ್ತದೆ.

**ಧನ್ಷಿಕ ಹರ್ಬಲ್ ಟೂತ್‌ಪೌಡರ್**
ಹಲ್ಲು ಮತ್ತು ವಸಡುಗಳನ್ನು ರಕ್ಷಿಸುತ್ತದೆ.

**ಹಿರಣ್ಮಯಿ ಹರ್ಬಲ್ ಫೇಸ್ ಪ್ಯಾಕ್**
ಕಾಂತಿ ಮತ್ತು ಮುಖದ ವರ್ಣವನ್ನು ವೃದ್ಧಿಸುತ್ತದೆ.

**ಮಹಿ ಹರ್ಬಲ್ ಸೋಪ್**
ಚರ್ಮವನ್ನು ಸಂರಕ್ಷಿಸುತ್ತದೆ.

**ಕಶ್ಯಪಿ ಹರ್ಬಲ್ ಶಾಂಪೂ**
ಕೇಶರಾಶಿಯನ್ನು ಸಂರಕ್ಷಿಸುತ್ತದೆ.

**ಸಂಪರ್ಕಿಸಬೇಕಾದ ವಿಳಾಸ :**

**0877-22633333 ಮತ್ತು 0877-22677777**




**ನೀತಿ ಕಥೆ**

# ಬಂದವರು ಹೋಗುವುದು ಪ್ರಕೃತಿ ನಿಯಮ

- ಡಾ॥ ಪ್ರದೀಪ್ ಕುಮಾರ್ ಹೆಬ್ರಿ
9844018457

ತುಂಬ ಶತಮಾನಗಳ ಹಿಂದೆ ನಮ್ಮ ದೇಶದ ಉತ್ತರ ಭಾಗದಲ್ಲಿ ಒಬ್ಬ ಮಹಾ ಸಾಮ್ರಾಟನಿದ್ದ. ಮಹಾವಿಷ್ಣುವಿನ ಪರಮ ಭಕ್ತನಾಗಿದ್ದ ಆತ ತನ್ನ ಪ್ರಜೆಗಳ ಒಳಿತಿಗಾಗಿ ಸದಾ ಶ್ರಮಿಸುತ್ತಿದ್ದ. ಹಿರಿಯ ಮಂತ್ರಿಗಳು, ಗುರು ಹಿರಿಯರೊಡನೆ ಚರ್ಚಿಸಿ ಅನೇಕ ಸುಧಾರಣೆಗಳನ್ನು ಮಾಡಿದ ಜನ ಆತನನ್ನು ತುಂಬಾ ಮೆಚ್ಚಿಕೊಂಡರು. ಎಲ್ಲರೂ ಒಂದಾಗಿ ಅವನ ದೊಡ್ಡದೊಂದು ಪ್ರತಿಮೆ ಮಾಡಿಸಿ ನಿಲ್ಲಿಸಬೇಕೆಂದೂ ಅವನ ನೆನಪನ್ನು ಸದಾಕಾಲ ಚಿರವಾಗಿಡಬೇಕೆಂದು ತೀರ್ಮಾನಿಸಿದರು.

ಪ್ರಜೆಗಳೆಲ್ಲರೂ ಒಂದಾಗಿ ಸದೃಢ ಕರಿಯ ಕಲ್ಲಿನಲ್ಲಿ ಸುಮಾರು ಹದಿನೈದು ಅಡಿ ಎತ್ತರದ ರಾಜನ ತದ್ರೂಪು ಮೂರ್ತಿಯೊಂದನ್ನು ಕೆತ್ತಿಸಿದರು. ಮೂರ್ತಿ ತುಂಬಾ ಸುಂದರವಾಗಿ ಕೆತ್ತಲ್ಪಟ್ಟಿತ್ತು. ಅದನ್ನು ಪ್ರತಿಷ್ಠಾಪಿಸುವ ದಿನವೂ ಹತ್ತಿರಕ್ಕೆ ಬಂತು. ರಾಜ ಅದನ್ನು ನೆನೆಯುತ್ತ ತನ್ನೊಳಗೇ ಸಂಭ್ರಮಿಸುತ್ತಿದ್ದ. ತನ್ನ ಮೂರ್ತಿಯನ್ನು ಊರ ಮಧ್ಯೆ ನಾಲ್ಕು ದಾರಿ ಸೇರುವಲ್ಲಿ ನಿಲ್ಲಿಸುತ್ತಾರೆ. ಅದು ಶಾಶ್ವತವಾಗಿ ಅಲ್ಲೇ ನಿಂತಿರುತ್ತದೆ. ಹೋಗಿ ಬರುವ ಎಲ್ಲರೂ ನೋಡುತ್ತಾರೆ. ನಾನು ಮಾಡಿದ ಪ್ರಜಾಸೇವಾ ಕಾರ್ಯಗಳನ್ನು ನೆನೆಯುತ್ತಾರೆ ತಲೆಬಾಗಿ ನಮಿಸುತ್ತಾರೆ.... ಎಂದೆಲ್ಲ ಯೋಚಿಸುತ್ತಿದ್ದ.

ಬೆಳಕು ಕಳೆದು ಕತ್ತಲು ಆವರಿಸಿತ್ತು. ರಾತ್ರಿ ಹನ್ನೊಂದು ಘಂಟೆ. ರಾಜನಿಗಾಗ ತನ್ನ ಮೂರ್ತಿ ನಿಲ್ಲಿಸಲ್ಪಡುವ ಜಾಗವನ್ನು ನೋಡಿಬರುವ ಆಸೆಯಾಯಿತು. ನಿಧಾನವಾಗಿ ಹೊರಬಂದ. ಯಾರಿಗೂ ಹೇಳದೇ ಯಾರನ್ನೂ ಕರೆಯದೇ ಹೊರಟ.

ಕತ್ತಲೆಯಲ್ಲಿ ತಡವರಿಸದೆ ಬಂದವನಿಗೆ ಮೂರ್ತಿ ಕಾಣಿಸಿತು. ಅದರ ಸಮೀಪಕ್ಕೆ ಬಂದು ತಲೆಯೆತ್ತಿ ದಿಟ್ಟಿಸಿದ. ಮೋಡದ ಮರೆಯಿಂದ ಚಂದ್ರ ಅದಾಗ ತಾನೇ ಹೊರಬಂದಿದ್ದ. ಬೆಳದಿಂಗಳ ನಗೆ ಚೆಲ್ಲುತ್ತಿದ್ದ ರಾಜ ಆ ಬೆಳದಿಂಗಳ ಸುಖದಲ್ಲಿ ಒಂದೊಂದೇ ಮೆಟ್ಟಿಲನ್ನು ಏರಿದ. ಮೂರ್ತಿಯ ಪದತಲದಲ್ಲಿ ನಿಂತ. ಪುಳಕಗೊಂಡ. ಕಟ್ಟೆಯ ಮೇಲೆ ಕುಳಿತ. ಹೆಮ್ಮೆಯಿಂದ ಬೀಗಿದ. ಕಾಲನ್ನು ಇಳಿಬಿಟ್ಟು ಮೆಟ್ಟಿಲ ಮೇಲೆ ಊರಿದ. ಆ ಮೆಟ್ಟಿಲ ಒಳಗಿಂದ ಯಾರೋ ಕಿಸಕ್ಕನೆ ನಕ್ಕ ಸ್ವರ ಕೇಳಿಸಿತು.ಯಾರಿದೆಂಬ ಅಚ್ಚರಿಯಿಂದ ಅತ್ತಿತ್ತ ತಿರುಗಿದ ಯಾರೂ ಕಾಣಿಸಲಿಲ್ಲ, ಆದರೆ ಮತ್ತೆ ಕಾಲ ಕೆಳಗೆ ಯಾರೋ ನಗುತ್ತಿರುವುದು ಕೇಳಿಸಿತು. ಯಾರು? ಎಂದು ಗದರಿದ.

ಆಗ ಆ ಕಲ್ಲು "ನೋಡು ನಾನೇ ನಗುತ್ತಿರುವೆ" ಎಂದಿತು. ರಾಜ ಭೀತಿಯಚ್ಚರಿಯಿಂದ "ಏಕೆ ನಗುತ್ತಿರುವುದು?" ಕೇಳಿದ. ಆ ಕಲ್ಲು "ಮೊದಲು ನನ್ನನ್ನು ಹೀಗೆ ನಿಲ್ಲಿಸಿದ್ದರು. ನನ್ನನ್ನು ತೆಗೆದು ಈ ಮೆಟ್ಟಿಲನ್ನಾಗಿ ಮಾಡಿ ನಾನು ನಿಂತಲ್ಲಿ ನಿನ್ನ ಮೂರ್ತಿಯನ್ನು ಇರಿಸಿದ್ದಾರೆ. ನನಗಿಂತ ಮೊದಲು ನಿಲ್ಲಿಸಿದ ಮೂರ್ತಿ ನನ್ನ ಕೆಳಗಿನ ಮೆಟ್ಟಿಲು ಕಲ್ಲು, ಅದಕ್ಕಿಂತ ಕೆಳಗಿನದು ಅದಕ್ಕೂ ಮೊದಲು ನಿಲ್ಲಿಸಿದವನ ಮೂರ್ತಿ ಹೀಗೆ ನಡೆದುಕೊಂಡು ಬಂದಿದೆ. ಈಗ ನಿನ್ನ ಸರದಿ. ನಾಳೆ ಮತ್ತೊಬ್ಬನ ಸರದಿ ಬರುತ್ತದೆ ಎಂದಿತು.

ಕ್ಷಣಮೌನದ ಬಳಿಕ ಮತ್ತಾ ಕಲ್ಲು, "ಹಿಂದೊಮ್ಮೆ ನಾನೂ ಬಂದು ನಿನ್ನಂತೆ ನೋಡಿ, ಕೂತು ಸಂತೋಷಿಸಿದ್ದೆ, ನನ್ನ ಹಿಂದಿನ ವರೂ ಹಾಗೆ ಮಾಡಿದ್ದಿರಬಹುದು. ಇದು ಆವರ್ತನಶೀಲ ಜಗತ್ತು. ಎಲ್ಲರೂ ಬಂದು ಹೋಗುವವರು. ನಿನ್ನೆ ನಾನು ಬಂದಿದ್ದೆ. ಇಂದು ನೀನು ಬಂದಿರುವೆ. ನಾಳೆ ಮತ್ತಾರೋ ಬರುತ್ತಾರೆ. ಇದು ಹೀಗೆ ಮುಂದುವರಿಯುತ್ತದೆ. ಇದು ನಮ್ಮೆಲ್ಲರ ಕಥೆ" ಎಂದು ಮತ್ತೊಮ್ಮೆ ನಕ್ಕಿತು.

ರಾಜ ಮೌನ ಧರಿಸಿದ ಚಿಂತಿಸಿದ. ಶ್ರೀಹರಿಯ ಹೊರತಾಗಿ ಮತ್ತಾರೂ ಇಲ್ಲಿ ಶಾಶ್ವತವಾಗಿ ಇರಲಾರರು. ಮಾನವರಾದ ನಾವೆಲ್ಲರೂ ಬಂದು ಹೋಗುವವರೇ ಎಂಬುದವಗೆ ಖಚಿತವಾಯ್ತು ಅವನ ಮೂರ್ತಿಯೂ ಅವನನ್ನು ನೋಡಿ ನಕ್ಕಂತಾಯ್ತು !

**ನೀತಿ : ನಾವಿಲ್ಲಿ ಶಾಶ್ವತ ಎಂದು ಯಾರೂ ತಿಳಿಯಬಾರದು.**

ಬಾ
ಲ
ವಿ
ನೋ
ಧಿ
ನಿ

## ಈ ಗೊಂಬೆಗೆ ಬಣ್ಣವನ್ನು ತುಂಬಿರಿ.......



## ಪಕ್ಕದಲ್ಲಿರುವ ಗೊಂಬೆಯನ್ನು ಬಾಕ್ಸ್‌ನಲ್ಲಿ ಬರಿಯೋಣ...



ಈ ಚಿತ್ರದಲ್ಲಿ
ಒಟು 7
ವ್ಯತ್ಯಾಸಗಳಿವೆ.

ಮಕ್ಕಳೇ
ಇದನ್ನು ಕಂಡು ಹಿಡಿಯಿರಿ
ನೋಡೋಣ.



ಜಿಂಕೆ, ಕಿಟಕಿ, ಗೋಡೆಯಲ್ಲಿ ರಂಗೋಲಿ, ಹುಲಿಯ ಚರ್ಮದ ಚಾಪೆ, ಹೂವಿನ ಪಾತ್ರೆ, ಮೆಟ್ಟಲು. ನವಿಲು.

## ಈ ಅಕ್ಷರಗಳಲ್ಲಿ ಒಂದು ಗಾದೆ ಇದೆ ಕಂಡು ಹಿಡಿಯಿರಿ ನೋಡೋಣ....

| | | | | | | |
|---|---|---|---|---|---|---|
| ದ | ಒಂ | ಲ್ಲು | ದ | ಣ್ಣು | ರೆ | ದು |
| ರೆ | ಕ | ಹೋ | ಬಂ | ದು | ಹ | ಒಂ |

ಹೋದರೆ ಒಂದು ಕಲ್ಲು, ಬಂದರೆ ಒಂದು ಹಣ್ಣು

ಲ ಉತ್ತರಗಳು:

ತಿರುಮಲ ತಿರುಪತಿ ದೇವಸ್ಥಾನಗಳು

# ಮಕ್ಕಳೇ ಇದು ನಿಮಗಾಗಿ



6

ಕ್ವಿಜ್

## ಸೂಚನೆಗಳು

1. ಈ ಕ್ವಿಜ್ 10-15 ವರ್ಷ ವಯಸ್ಸಿನ ಮಕ್ಕಳು ಹಿಂದೂವಾಗಿರಬೇಕು.
2. ಈ ಕ್ವಿಜ್‌ನಲ್ಲಿ ಪಾಲ್ಗೊಳ್ಳುವ ಮಕ್ಕಳ ತಂದೆ ತಾಯಿ ತಪ್ಪದೇ ಸಪ್ತಗಿರಿ ಮಾಸ ಪತ್ರಿಕೆಯ ಚಂದಾ ದಾರರಾಗಿರಬೇಕು.
3. ಕ್ವಿಜ್ ಪ್ರಶ್ನಾಪತ್ರಿಕೆಯಲ್ಲಿ ತಪ್ಪದೇ ತಮ್ಮ ಚಂದಾ ಸಂಖ್ಯೆ, ಹೆಸರು, ವಿಳಾಸ, ಪಿನ್‌ಕೋಡ್,ಫೋನ್ ನಂಬರ್ ಸ್ಪಷ್ಟವಾಗಿ ಬರೆಯಬೇಕು.
4. ಕ್ವಿಜ್ ಉತ್ತರಗಳನ್ನು ಪ್ರಶ್ನೆಯ ಕೆಳಗೆ ನಿರ್ದೇಶಿಸಿದ ಸ್ಥಳದಲ್ಲಿಯೇ ಬರೆದು ಕಳುಹಿಸಬೇಕು.
5. ಕ್ವಿಜ್ ಉತ್ತರದ ಜೆರಾಕ್ಸ್ ಅನ್ನು ತೆಗೆದುಕೊಂಡು ಕಳಿಹಿಸಿದವರು ಖಚಿತವಾಗಿ ಚಂದಾನಂಬರ್‌ನ್ನು ಕಳುಹಿಸಬೇಕು. ಒಬ್ಬ ಚಂದಾದಾರರು ಒಂದು ಉತ್ತರವನ್ನು ಮಾತ್ರವೇ ಕಳುಹಿಸತಕ್ಕದ್ದು.
6. ಉತ್ತರ ಬರೆಯುವಾಗ ಅಳಿಸುವುದು, ತಿದ್ದುವುದು ಮಾಡಬಾರದು.
7. ಉತ್ತರಗಳನ್ನು ನಮಗೆ ಕಳುಹಿಸುವ ಕೊನೆಯ ದಿನಾಂಕ 25.12.2022
8. ಈ ಕ್ವಿಜ್‌ನಲ್ಲಿ ಎಲ್ಲಾ ಉತ್ತರಗಳನ್ನು ಸರಿಯಾಗಿ ಬರೆದ ಮೂರು ಮಕ್ಕಳನ್ನು ಮಾತ್ರವೇ ವಿಜೇತರಾಗಿ ಲಕ್ಕಿ ಡಿಫ್ ಮುಖಾಂತರ ಆಯ್ಕೆ ಮಾಡಲಾಗುತ್ತದೆ.
9. ವಿಜೇತರಾದ ಮಕ್ಕಳ ಹೆಸರನ್ನು ಮುಂದಿನ ತಿಂಗಳ ಸಪ್ತಗಿರಿ ಮಾಸ ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ
10. ತಿ.ತಿ.ದೇ. ಪ್ರಧಾನ ಸಂಪಾದಕರ ಕಾರ್ಯಾಲಯದಲ್ಲಿ ಕೆಲಸ ಮಾಡುವ ಉದ್ಯೋಗಿಗಳ ಮಕ್ಕಳು ಈ ಕ್ವಿಜ್‌ನಲ್ಲಿ ಪಾಲ್ಗೊಳ್ಳಬಾರದು.
11. ಕ್ವಿಜ್‌ಗೆ ಸಂಬಂಧಿಸಿದ ಯಾವ ಸಮಾಚಾರವನ್ನು ಫೋನ್ ಮುಖಾಂತರ ನೀಡಲಾಗುವುದಿಲ್ಲ.

**ನಿಮ್ಮ ಉತ್ತರಗಳನ್ನು ಕಳುಹಿಸಬೇಕಾದ ವಿಳಾಸ**

ಪ್ರಧಾನ ಸಂಪಾದಕರು
ಸಪ್ತಗಿರಿ ಮಾಸಪ್ರತಿಕೆ
ತಿ.ತಿ.ದೇ. ಪ್ರೆಸ್ ಕಾಂಪೌಂಡ್
ಕೆ.ಟಿ. ರಸ್ತೆ,
ತಿರುಪತಿ : 517 507
ಆಂಧ್ರ ಪ್ರದೇಶ್



## ರಸಪ್ರಶ್ನೆಗಳು

**ಉತ್ತರಗಳು**

1. ಜಗನ್ಮಾನ್ಯವಾದ ಅಮರ ಕೃತಿ ಯಾವುದು? ......................
2. ಶ್ರೀ ಕೃಷ್ಣನು ಅರ್ಜುನನಿಗೆ ಯಾವ ಮಾಸದಲ್ಲೇ ಗೀತೋಪದೇಶ ಮಾಡಿದನೆಂಬ ಪ್ರತೀತಿಯೂ ಇದೆ. ? ......................
3. ಶ್ರೀವಾದಿರಾಜರ ಜನ್ಮ ಭೂಮಿ ಯಾವುದು ? ......................
4. ನಾರಾಯಣನ ಮತ್ತೊಂದು ರೂಪ ಯಾವುದು ? ......................
5. ಶಾಂತಿಗ್ರಾಮದಲ್ಲಿರುವ ವರದ ಯೋಗಾನರಸಿಂಹ ದೇವಾಲಯವನ್ನು ಹೊಯ್ಸಳ ವೀರಬಲ್ಲಾಳನ ಆಸ್ಥಾನ ಗುರು ಅಚಲಪ್ರಕಾಶ ಸ್ವಾಮಿಗಳು ಯಾವ ದಿನಾಂಕದಲ್ಲಿ ನಿರ್ಮಿಸಿದರು? ......................
6. ತಿರುಪತಿಗೆ ಹೋದರೆ ಮೊದಲು ದರ್ಶನ ಮಾಡುವುದು ಎಲ್ಲಿ ? ....................
7. ತಿರುವಾಯ್ಮೊಳಿಯನ್ನು ಯಾವ ಭಾಷೆಯ ವೇದವೆನ್ನಲಾಗಿದೆ?. ....................
8. ಗೋದಾದೇವಿಯು ಯಾವ ಅವತಾರವೆಂದು ಹೇಳುತ್ತಾರೆ? ....................
9. ತಿರುಪ್ಪಾವೈನಲ್ಲಿ ಶ್ರೀ ಕೃಷ್ಣನ ಮುಂದೆ ನಿಂತು ಆಂಡಾಳ್ ಏನೆಂದಳು? ....................
10. ಯಾವ ಹಾದಿಯನ್ನು ಹಿಡಿಯುವುದಿಲ್ಲ ಎಂದು ಕೃಷ್ಣನು ಗೀತೆಯಲ್ಲಿ ಹೇಳಿದ್ದಾನೆ ? ....................
11. ಕುಲಶೇಖರರ ಗುಡಿಯ ವಿಚಾರವನ್ನು ಯಾರು ಒಪ್ಪಿಕೊಳ್ಳುತ್ತಾರೆ? ....................
12. ಮಧ್ಯಾಹ್ನ ಸಮಯದಲ್ಲಿ ದಿವ್ಯ ಮಾಲೆಗಳನ್ನು ಸಮರ್ಪಿಸುವಾಗ ಕೇಳುವ ಪಾಶುರ ಯಾವುದು? ....................
13. ತಿರುಕ್ಕಂಡಿಯೂರ್ ದೇವಾಲಯದಲ್ಲಿ ಯಾವ ದೋಷ ಪರಿಹಾರವಾಗಿದೆ? ....................
14. ಎಲ್ಲಿಂದ ನಗುವಿನ ಶಬ್ದ ಕೇಳಿಸಿತು ? ....................
15. ರಾಮಾನುಜರಿಗೆ ಇದ್ದ ಮತ್ತೊಂದು ಹೆಸರೇನು? ....................

| | |
|---|---|
| ಹೆಸರು :<br>ಚಂದಾ ಸಂಖ್ಯೆ:<br>ತಂದೆಯ ಹೆಸರು :<br>ತಾಯಿಯ ಹೆಸರು : | ವಿಳಾಸ :<br><br>ದೂರವಾಣಿ ಸಂಖ್ಯೆ: |



# ಸ್ತೋತ್ರವನ್ನು ಕಲಿಯೋಣ

## ಭಾವಾರ್ಥ ಸಹಿತ ಶ್ರೀಭಾರತೀಶ


## ಕರಾವಲಂಬನ ಸ್ತೋತ್ರ ಶ್ರೀ ಗುರುಭ್ಯೋ ನಮಃ

- ರಚನೆ : ವಿದ್ವಾನ್ ಆರಣಿ ವಾಸುದೇವಾಚಾರ್ಯ



ಶ್ರೀವಾನರೇಶ ಬಲ ಪೌರುಷ ಕೌಶಲಾಗ್ರ್ಯ
ಸುಬ್ರಹ್ಮಚರ್ಯ ಸುಖ ಸುವ್ರತ ಪೂರ್ಣದೇಹ !
ಸದ್ಭಕ್ತ ದೋಷ ಪರಿಮೋಚಕ ರಾಮದೂತ
ಶ್ರೀ ಭಾರತೀಶ ಮಮ ದೇಹಿ ಕರಾವಲಂಬಮ್ ॥6॥

ವಾನರ ಶ್ರೇಷ್ಠರಾದ, ಅಗಾಧ ಬಲ ಪೌರುಷ ಉಳ್ಳ, ಅತ್ಯಂತ ಕುಶಲಿಗಳಾದ, ಶ್ರೇಷ್ಠವಾದ ಬ್ರಹಚರ್ಯ ಉಳ್ಳ, ಸುಖಪೂರ್ಣ ದೇಹ ಉಳ್ಳವರಾದ, ಸದ್ಭಕ್ತರ ದೋಷಗಳನ್ನು ಪರಿಹರಿಸುವಂಥ ಶ್ರೀರಾಮದೂತರೇ ಶ್ರೀ ಭಾರತೀಪತಿಯಾದ ವಾಯುದೇವರು ನಮ್ಮನ್ನು ಕಾಪಾಡಲಿ.





ಇದರಲ್ಲಿ ಹೋಲಿಕೆ ಇಲ್ಲದ ಚಿತ್ರ ಯಾವುದು

ಗೋದಾದೇವಿ, ಭಗವದ್ ಗೀತೆ , ಮಾರ್ಗಶಿರ ಮಾಸ, ಕೃಷ್ಣ ಇವುಗಳಿಗೆ ಸಂಬಂಧವಿಲ್ಲದ ಚಿತ್ರವನ್ನು ಕಂಡು ಹಿಡಿಯಿರಿ.

**ಚಿತ್ರಕಥೆ**

# ತಿರುಪ್ಪಾವೈ ಜೀಯರ್


ಕಥೆ: ತೆಲುಗು ಮೂಲ : ಶ್ರೀನಿವಾಸದೀಕ್ಷಿತರು
ಅನುವಾದ : ಆರ್.ಕೆ.
ಚಿತ್ರಗಳು : ಕೆ. ದ್ವಾರಕನಾಥ್


ಒಂದು ದಿನ ಶ್ರೀರಂಗಂನಲ್ಲಿರುವ ರಾಜಮಾರ್ಗದಲ್ಲಿ ಶ್ರೀರಾಮಾನುಜಾಚಾರ್ಯರು ತಿರುಪ್ಪಾವೈಯನ್ನು ಅನುಸಂಧಾನ ಮಾಡಿಕೊಳ್ಳುತ್ತಾ ಭಿಕ್ಷಾಟನೆ ಮಾಡುತ್ತಿದ್ದಾರೆ. ಶಿಷ್ಯರು ಆಚಾರ್ಯರನ್ನು ಅನುಸರಿಸುತ್ತಾ ಪಾಶುರಗಳನ್ನು ಪಾರಾಯಣ ಮಾಡುತ್ತಾ ಹಿಂಬಾಲಿಸುತ್ತಿದ್ದಾರೆ.





ಶ್ರೀ ರಾಮಾನುಜರು ಸಾಮಾನ್ಯರಲ್ಲಮ್ಮಾ. ಮನಸ್ಸು ಬುದ್ದಿಗಳನ್ನು ಒಂದು ಮಾಡಬಲ್ಲರು. ನಿನ್ನನ್ನೇ ನೀಳಾದೇವಿಯಾಗಿ ಭಾವಿಸಿದ್ದಾರೆ
ಬಾ ನಡಿ ನೋಡೋಣ ಅವರ ಮಹಾತ್ಮೆಯನ್ನು
ಇಬ್ಬರೂ ಬಾಗಿಲಲ್ಲಿ ಬಂದು ನಿಂತಿದ್ದಾರೆ.
ರಾಮಾನುಜಾ! ಎದ್ದು ನಿಂತುಕೋ
ಶ್ರೀ ರಾಮಾನುಜರು ಎದ್ದು ನಿಂತಿದ್ದಾರೆ. ಈಕೆ ನೀಳಾದೇವಿ ಅಲ್ಲ ; ನನ್ನ ಮಗಳು ,ನೀವು ಪಾಶುರದಲ್ಲಿ ಲೀನನಾಗಿರುವೆ
ಸ್ವತಃ ನೀಳಾದೇವಿಯೇ ಬಂದಿದ್ದಾಳೆಂದುಕೊಂಡಿದ್ದೇನೆ ಆಚಾರ್ಯ!
ರಾಮಾನುಜಾ ! ಇಂದಿನಿಂದ ನೀನು 'ತಿರುಪ್ಪಾವೈ ಜೀಯರ್' ಎಂದು ಪ್ರಸಿದ್ಧಿಯಾಗುವೆ
ಶುಭಂ

ತಿರುಮಲೆ ತಿರುಪತಿ ದೇವಸ್ಥಾನಗಳು, ತಿರುಪತಿ

# ಸಪ್ತಗಿರಿ

(ಆಧ್ಯಾತ್ಮಿಕ ಮಾಸಪತ್ರಿಕೆ)

## ಚಂದಾ ನಮೂನೆ ಪತ್ರ

ಹೆಸರು ಮತ್ತು ವಿಳಾಸ :

(ಬಿಡಿಬಿಡಿ ಅಕ್ಷರಗಳಲ್ಲಿ ಅರ್ಥವಾಗುವಂತೆ ಇಂಗ್ಲೀಷಿನಲ್ಲಿ ಬರಿಯಿರಿ. ಪಿನ್ ಕೋಡ್ ತಪ್ಪದೇ ನಮೂದಿಸಿ)

(ಪಿನ್ ಕೋಡ್ ತಪ್ಪದೇ ನಮೂದಿಸಿ)

ಬೇಕಾಗುವ ಭಾಷೆ : ☐ ಕನ್ನಡ ☐ ತೆಲುಗು ☐ ಹಿಂದೀ ☐ ತಮಿಳು ☐ ಇಂಗ್ಲೀಷು ☐ ಸಂಸ್ಕೃತ

ವಾರ್ಷಿಕ /ಆಜೀವಚಂದಾ : ☐ ರೂ.240/- ☐ ರೂ.2,400/-( 12 ವರ್ಷ)

ಚಂದಾ ನವೀಕರಣ :

(ಅ) ಚಂದಾ ನಂಬರು :

(ಆ) ಭಾಷೆ :

ಸಲ್ಲಿಸಿದ ಹಣ :

ಡಿ. ಡಿ. ಸಂಖ್ಯೆ/ಈ.ಎಂ.ಓ/ಐ.ಪಿ.ಓ./ ಅಟ್‌ಪರ್ ಚೆಕ್ಕು ಮಾತ್ರವೇ :

ಸ್ಥಳ :

ದಿನಾಂಕ: ಚಂದಾದಾರರ ಸಹಿ

ಸಪ್ತಗಿರಿ ವಾರ್ಷಿಕ ಚಂದಾ ರೂ.240/-, ಆಜೀವ ಚಂದಾ (12 ವರ್ಷ) ರೂ.2,400/- ಗಳು ಡಿ.ಡಿ. ಸಂಖ್ಯೆ/ ಈ.ಎಂ.ಓ/ಐ.ಪಿ.ಓ./ ಅಟ್‌ಪರ್ ಚೆಕ್ಕು ಅನ್ನು ಪ್ರಧಾನ ಸಂಪಾದಕರು, ಸಪ್ತಗಿರಿ, ತಿ.ತಿ.ದೇ. ತಿರುಪತಿ. ಅವರ ಹೆಸರಿನಲ್ಲಿ ತೆಗೆಯ ಬೇಕು.

ಸಪ್ತಗಿರಿ ಚಂದಾದಾರರಾಗಿ ಸೇರ ಬಯಸುವವರು / ತಮ್ಮ ಚಂದಾ ನವೀಕರಿಸುವವರು ಈ ಕೂಪನ್‌ನಲ್ಲಿ ಅಥವಾ ಬಿಳಿಹಾಳಿಯಲ್ಲಿ ಮೇಲೆ ತಿಳಿಸಿದಂತೆ ವಿವರಗಳನ್ನು ಬರೆದು ಕಳುಹಿಸಬೇಕು.

ಎಂ.ಓ. ಕಳುಹಿಸುವವರು ಅದರಲ್ಲಿ ನಿಮ್ಮ ಚಂದಾ ವಿವರಗಳನ್ನು ಬರೆದು ಈ ಕೆಳಗಿನ ವಿಳಾಸಕ್ಕೆ ಕಳಿಸಿ.

ನಮ್ಮ ವಿಳಾಸ - "ಪ್ರಧಾನ ಸಂಪಾದಕರು, ಸಪ್ತಗಿರಿ ಕಾರ್ಯಾಲಯ, ತಿ.ತಿ.ದೇ ಪ್ರೆಸ್ ಕಾಂಪೌಂಡ್, ಕೆ.ಟಿ.ರೋಡ್ಡು ತಿರುಪತಿ - 517 507".

ಸಪ್ತಗಿರಿ ಚಂದಾ ವಿವರಣೆಗಾಗಿ ಫೋನ್ ನಂಬರ್: 0877-2264359, 0877-2264543

ತಿರುಮಲೆ ತಿರುಪತಿ ದೇವಸ್ಥಾನಗಳು

## ಟೋಲ್ ಫ್ರಿ ನಂಬರ್

ಸ್ವಾಮಿಯ ದರ್ಶನಾರ್ಥ ತಿರುಮಲೆಗೆ ಬರುವ ಭಕ್ತರ ಸೌಕರ್ಯಾರ್ಥಕ್ಕಾಗಿ ತಿರುಮಲೆ ತಿರುಪತಿ ದೇವಸ್ಥಾನದವರು **ಟೋಲ್ ಫ್ರಿ ನಂಬರ್** ಅನ್ನು ಏರ್ಪಡಿಸಿದ್ದಾರೆ.

ಯಾತ್ರಿಕರು, ಭಕ್ತರು ದೇವಸ್ಥಾನಕ್ಕೆ ಸಂಬಂಧಿಸಿದ ಸೂಚನೆ /ದೂರುಗಳನ್ನು ಮತ್ತು ಇತರ ಸಮಾಚಾರಕ್ಕಾಗಿ ಈ ನಂಬರನ್ನು ಸಂಪರ್ಕಿಸಬಹುದು.

**ತಿರುಮಲೆ ತಿರುಪತಿ ದೇವಸ್ಥಾನವು ಯಾತ್ರಿಕರಿಗೆ ಮತ್ತಷ್ಟು ಸೇವೆಯನ್ನು ನೀಡಲು ನಿಮ್ಮ ಸೂಚನೆಗಳನ್ನು ನೀಡಿರಿ.**

**ಟೋಲ್ ಫ್ರಿ ನಂಬರ್**

**18004254141**

0877-2233333,

0877-2277777

Printed by Sri P. Ramaraju, M.A., and Published by Dr. K. Radha Ramana, M.A., M.Phil., Ph.D., on behalf of Tirumala Tirupati Devasthanams and Printed and Published at Tirumala Tirupati Devasthanams Press, K.T.Road, Tirupati - 517 507.
Editor : Dr. V. G. Chokkalingam, M.A., Ph.D.


ತಿರುಮಲೆಯಲ್ಲಿ ಕಾರ್ತಿಕ ದೀಪೋತ್ಸವ
07-12-2022


ತಿರುಪತಿ ಶ್ರೀ ಕಪಿಲೇಶ್ವರ
ಸ್ವಾಮಿಯವರ
ಲಕ್ಷಬಿಲ್ವಾರ್ಚನೆ
(10-12-2022)

SAPTHAGIRI (KANNADA) SPIRITUAL ILLUSTRATED MONTHLY Published by Tirumala Tirupati Devasthanams Printing on 25-11-2022 and Posting at Tirupati RMS.Regd. with the Registrar of Newspapers for India under RNI. No. APKAN/2021/80589. Postal Regd.No.TRP/156/2021-2023 "Licenced toPost Without Prepayment No. PMGK/RNP/WPP-04(6)/2021-2023" Posting on 20th of Every Month

